ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 27 ಬುಧವಾರ 2022

ಸಂಪುಟ: 43 | ಸಂಚಿಕೆ: 12 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಪ್ರಧಾನಿ ಮೋದಿ ಭೇಟಿಗೆ ಏ.29ಕ್ಕೆ ಸಿಎಂ ಬೊಮ್ಮಾಯಿ ದೆಹಲಿ ಯಾತ್ರೆ

ಏ.30ಕ್ಕೆ ಪ್ರಧಾನಿಯಾಗಿ ನರೇಂದ್ರ ಮೋದಿ 3 ವರ್ಷ ಪೂರೈಸಲಿದ್ದಾರೆ; ಈ ವೇಳೆ ಸಿಎಂಗಳೊಂದಿಗೆ ಸಂವಾದ

ಬೆಂಗಳೂರು, ಏ.26(ಕೆಎಂಶಿ)–ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ 29ರಂದು ದೆಹಲಿಗೆ ತೆರಳಲಿದ್ದಾರೆ. ಮೋದಿ ಅವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡು ಏ.30ಕ್ಕೆ 3 ವರ್ಷ ತುಂಬಲಿದ್ದು, ಈ ವೇಳೆ ಮುಖ್ಯಮಂತ್ರಿಗಳ ಜತೆ ನೇರ ಸಂವಾದ ನಡೆಸಲಿದ್ದಾರೆ. ಈ ಸಂವಾದದಲ್ಲಿ ಭಾಗವಹಿಸಲೆಂದೇ ಬೊಮ್ಮಾಯಿ ಅವರು, 2 ದಿನಗಳ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದು, ಸಂವಾದ ಕಾರ್ಯಕ್ರಮ ಮುಗಿದ ಬಳಿಕ ಪ್ರಧಾನಿ ಭೇಟಿಗೆ ಸಮಯಾವಕಾಶ ಕೋರಿದ್ದಾರೆ.



ಇದುವರೆಗೂ ಮುಖಾಮುಖಿ ಭೇಟಿಗೆ ಸಮಯ ನಿಗದಿಯಾಗಿಲ್ಲ. ಅಂದು ಪ್ರಧಾನಿ ಭೇಟಿಯಾಗಬೇಕೆಂದು ರಾಜ್ಯ ಪ್ರತಿನಿಧಿಸುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ಬೆನ್ನತ್ತಿದ್ದಾರೆ. ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ಪಕ್ಷ ಮತ್ತು ಸರ್ಕಾರದ ವರ್ಚಸ್ಸು ವೃದ್ಧಿಸಲು ದೆಹಲಿ ನಾಯಕರು ಹಲವು ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರದಲ್ಲಿರುವುದು ಕರ್ನಾಟಕದಲ್ಲಿ ಮಾತ್ರ. ಯಾವುದೇ ಕಾರಣಕ್ಕೂ ಅಧಿಕಾರವನ್ನು ಕಳೆದುಕೊಳ್ಳಬಾರದೆಂದು ದೃಢ ನಿಲುವು ಹೊಂದಿರುವ ವರಿಷ್ಠರು, ಆಡಳಿತ ಮತ್ತು ಪಕ್ಷದಲ್ಲಿ ಬದಲಾವಣೆಗೂ ಮುಂದಾಗಿದ್ದಾರೆ. ಕಳೆದ ವಾರ ದೆಹಲಿಯಲ್ಲಿ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಆರ್‌ಎಸ್‌ಎಸ್ ಮುಖಂಡರೊಂದಿಗೆ ಕರ್ನಾಟಕಕ್ಕೆ ಸೀಮಿತವಾಗಿ ಚರ್ಚೆ ಮಾಡಿದ್ದಾರೆ.

ಚರ್ಚೆಯ ಸಂದರ್ಭದಲ್ಲಿ ಇಲ್ಲಿನ ಪಕ್ಷ ಮತ್ತು ಸರ್ಕಾರದ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತವಾಯಿತಲ್ಲದೆ, ಪರ್ಯಾಯ ನಾಯಕತ್ವದಲ್ಲಿ ಚುನಾವಣೆ ಎದುರಿಸುವ ತೀರ್ಮಾನಕ್ಕೆ ಬಂದಿತ್ತಾದರೂ, ಅಂಥ ತೀರ್ಮಾನವನ್ನು ಪ್ರಧಾನಿಯೇ ಕೈಗೊಳ್ಳಲಿ ಎಂದು ಚೆಂಡನ್ನು ಮೋದಿ ಅಂಗಳಕ್ಕೆ ಹಾಕಿದ್ದಾರೆ. ● 8ನೇ ಪುಟಕ್ಕೆ

ನಾಲ್ಕನೇ ಅಲೆ ಭೀತಿ: ಮುಖ್ಯಮಂತ್ರಿಗಳೊಂದಿಗೆ ಇಂದು ಮೋದಿ ಸಂವಾದ

ವಿಮಾನ ನಿಲ್ದಾಣ, ಗಡಿ ಜಿಲ್ಲೆಗಳಲ್ಲಿ ಮತ್ತೆ ಕಣ್ಗಾವಲು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುಳಿವು

ವಿಜಯಪುರ, ಏ.26– ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಮತ್ತೆ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಸಾಂಕ್ರಾಮಿಕ ರೋಗದ ನಾಲ್ಕನೇ ಅಲೆಯ ಭೀತಿ ಆವರಿಸಿದೆ.

ಈ ಮಧ್ಯೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರದ ಸಲಹೆಯನ್ನು ಆಧರಿಸಿ ರಾಜ್ಯದ ವಿಮಾನ ನಿಲ್ದಾಣಗಳು ಮತ್ತು ಗಡಿ ಜಿಲ್ಲೆಗಳಲ್ಲಿ ಮುನ್ನೆಚ್ಚರಿಕೆ ಮತ್ತು ಕಣ್ಗಾವಲು ಕ್ರಮಗಳನ್ನು ಮತ್ತೆ ಜಾರಿಗೊಳಿಸಬಹುದು ಎಂದು ಹೇಳಿದ್ದಾರೆ.

ಇದೇ ವೇಳೆ ಕೊರೊನಾ ಹರಡುವುದನ್ನು ತಡೆಯಲು ಜನ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಸೇರಿದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಎಂದು ಸಿಎಂ ಮನವಿ ಮಾಡಿದರು. ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು, ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಹೆಚ್ಚಾಗದ ಕಾರಣ ಆತಂಕಪಡುವ ಅಗತ್ಯವಿಲ್ಲ. ಆದರೂ



ಸಂಗ್ರಹ ಚಿತ್ರ

ನಾವು ಕೆಲವು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ವರದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಿಎಂ, ಹಿಂದಿನ ಮೂರು ಅಲೆಗಳ ಸಮಯದಲ್ಲಿ ನೆರೆಯ ಮಹಾರಾಷ್ಟ್ರ ಮತ್ತು ಕೇರಳದ ಜನರು ಕೋವಿಡ್ ಆತಂಕಕ್ಕೆ ಕಾರಣರಾಗಿದ್ದರು. ಆದ್ದರಿಂದ, ನಾಳೆ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ಮೋದಿ ಅವರ ಸಭೆಯ ● 8ನೇ ಪುಟಕ್ಕೆ

ಸಚಿವ ಸಂಪುಟ ವಿಸ್ತರಣೆಗೆ ವರಿಷ್ಠರು ಇನ್ನೂ ಕರೆದಿಲ್ಲ

ಸಚಿವ ಸಂಪುಟ ವಿಸ್ತರಣೆಯ ಪ್ರಸ್ತಾವನೆ ಇದೆ. ಆದರೆ, ಪಟ್ಟಿ ಅಂತಿಮಗೊಳಿಸುವ ಸಂಬಂಧ ವರಿಷ್ಠರು ಇನ್ನೂ ಕರೆದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸಚಿವ ಸಂಪುಟ ವಿಸ್ತರಣೆಗೆ ವರಿಷ್ಠರು ಕರೆದಿಲ್ಲ. ದೆಹಲಿಯಲ್ಲಿ ನಿರ್ಣಯವಾದಾಗ ತಿಳಿಸಲಾಗುವುದು ಎಂದರು. ಎಲ್ಲಾ ಜಿಲ್ಲೆಗಳಿಗೂ ಪ್ರಾತಿನಿಧ್ಯ ನೀಡಬೇಕು ಎಂದಿದೆ. ರಾಜಕೀಯ ಸ್ಥಿತಿಗತಿಯ ಮೇಲೆ ಕೆಲವು ನಿರ್ಣಯಗಳಾಗುತ್ತವೆ ಎಂದರು.

ಸಚಿವ ಸಂಪುಟ ವಿಸ್ತರಣೆಯಾದಲ್ಲಿ ರಾಜ್ಯದ ಎಲ್ಲಾ ಭಾಗಗಳಿಗೆ ಆದಷ್ಟೂ ಪ್ರಾತಿನಿಧ್ಯ ನೀಡಲು ಪ್ರಯತ್ನಿಸಲಾಗುವುದು ಎಂದು ಸಿಎಂ ತಿಳಿಸಿದರು.

6–12 ವರ್ಷದ ಮಕ್ಕಳಿಗೆ ಕೋವ್ಯಾಕ್ಸಿನ್ 5–12 ವರ್ಷದ ಮಕ್ಕಳಿಗೆ ಕಾರ್ಬೆವಾಕ್ಸ್ ಲಸಿಕೆ

ನವದೆಹಲಿ: ದೇಶದಲ್ಲಿ ಕೋವಿಡ್ ಸಾಂಕ್ರಾಮಿಕ 4ನೇ ಅಲೆಯ ಭೀತಿ ವ್ಯಾಪಕವಾಗಿರುವಂತೆಯೇ ಇತ್ತ 6ರಿಂದ 12 ವರ್ಷದ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ನೀಡಿಕೆಗೆ ಕೇಂದ್ರ ಔಷಧ ನಿಯಂತ್ರಣ ಮಂಡಳಿ (ಡಿಸಿಜಿಐ) ಅನುಮೋದನೆ ನೀಡಿದೆ.

ಕಳೆದ ಕೆಲವು ತಿಂಗಳಗಳಿಂದಲೇ 6ರಿಂದ 12 ವರ್ಷದ ಮಕ್ಕಳಿಗೆ ತನ್ನ ಕೋವ್ಯಾಕ್ಸಿನ್ ಲಸಿಕೆ ನೀಡಿಕೆಗೆ ಅನುಮೋದನೆ ಪಡೆಯಲು ಭಾರತ್ ಬಯೋಟೆಕ್ ಸಂಸ್ಥೆ ಪ್ರಯತ್ನಿಸುತ್ತಿತ್ತು. ಆದರೆ ಈ ಕುರಿತ ಸೂಕ್ತ ವರದಿ ಇಲ್ಲದೆ ತಾನು ಅನುಮೋದನೆ ನೀಡಲು ಸಾಧ್ಯವಿಲ್ಲ ಎಂದು ಹೇಳುತ್ತಿತ್ತು. ಆದರೆ ಇದೀಗ ಡಿಸಿಜಿಐ ಕೋವ್ಯಾಕ್ಸಿನ್ ಲಸಿಕೆಯನ್ನು 6ರಿಂದ 12 ವರ್ಷಗಳ ಮಕ್ಕಳಿಗೆ ನೀಡುವುದಕ್ಕೆ ಅನುಮೋದನೆ ನೀಡಿದೆ.

ಮೊದಲ 2 ತಿಂಗಳ ಕಾಲ ಪ್ರತಿ 15 ದಿನಗಳಿಗೊಮ್ಮೆ ಸರಿಯಾದ ವಿಶ್ಲೇಷಣೆಯೊಂದಿಗೆ ಪ್ರತಿಕೂಲ ಘಟನೆಗಳ ದತ್ತಾಂಶ ಸೇರಿದಂತೆ ಸುರಕ್ಷಾ ದತ್ತಾಂಶವನ್ನು ಸಲ್ಲಿಸಲು ಲಸಿಕೆ ತಯಾರಕರಿಗೆ DCGI ಈ ಹಿಂದೆ ನಿರ್ದೇಶನ ನೀಡಿತ್ತು. ಎರಡು ತಿಂಗಳ ನಂತರ, ಭಾರತ್ ಬಯೋಟೆಕ್ ಸಂಸ್ಥೆ ● 8ನೇ ಪುಟಕ್ಕೆ

ಮೇ 16ರಿಂದಲೇ ಶಾಲೆಗಳು ಆರಂಭ

ಬೆಂಗಳೂರು,ಏ.26–ಕೊರೊನಾ 4ನೆ ಅಲೆ ಭೀತಿಯ ನಡುವೆಯೇ ನಿಗದಿಯಂತೆ ಮೇ 16ರಿಂದ ಶಾಲೆಗಳು ಆರಂಭವಾಗಲಿವೆ. ಇದರಲ್ಲಿ ಯಾವುದೇ ಬದಲಾವಣೆಯಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಇಂದಿಲ್ಲಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೂನ್–ಜುಲೈನಲ್ಲಿ ನಾಲ್ಕನೇ ಅಲೆ ಕಾಣಿಸಿಕೊಳ್ಳಬಹುದು ಎಂದು ಅಂದಾಜಿಸಲಾಗಿದೆ. ಮೇ 16ರಿಂದ ಶಾಲೆಗಳನ್ನು ಆರಂಭಿಸುವ ತೀರ್ಮಾನವನ್ನು ಈಗಾಗಲೇ ಮಾಡಿದ್ದೇವೆ. ಅದರಂತೆ ರಾಜ್ಯಾದ್ಯಂತ 1ರಿಂದ 10ನೇ ತರಗತಿಗಳು ಮೇ 16 ರಿಂದ ಪ್ರಾರಂಭವಾಗಲಿವೆ ಎಂದರು.

ಮೂರನೇ ಅಲೆ ಸಂದರ್ಭದಲ್ಲೂ ಶಾಲೆಗಳನ್ನು ನಡೆಸಿದ್ದೇವೆ. ಅದರ ಅನುಭವದ ಮೇಲೆ ಎಲ್ಲ ಸುರಕ್ಷತೆಗಳನ್ನು ಪಾಲಿಸಿ ಶಾಲೆಗಳು ಕಾರ್ಯನಿರ್ವಹಿಸಲಿವೆ. ಕೋವಿಡ್–19ಗೆ ಸಂಬಂಧಿಸಿದಂತೆ ಸರ್ಕಾರ, ಆರೋಗ್ಯ ಇಲಾಖೆ ಮತ್ತು ಕೋವಿಡ್ ಕಾರ್ಯಪಡೆಯ ಸಲಹೆ– ಸೂಚನೆಗಳನ್ನು ಪಾಲಿಸಿ ಶಾಲೆಗಳನ್ನು ಆರಂಭಿಸಲಾಗುವುದು ಎಂದರು. ಬೆಂಗಳೂರಿನ ಕ್ಲಾರೆನ್ಸ್ ಶಾಲೆಯಲ್ಲಿ ಬೈಬಲ್ ಕಲಿಯುವುದನ್ನು ಕಡ್ಡಾಯ ಮಾಡಿರುವುದು ಕರ್ನಾಟಕ ಶಿಕ್ಷಣ ಕಾಯ್ದೆಗೆ ವಿರುದ್ಧವಾಗಿದ್ದು, ಈ ಶಾಲೆಗೆ ನೋಟಿಸ್ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ನೋಟಿಸ್‌ಗೆ ಅವರಿಂದ ಉತ್ತರ ಬಂದ ನಂತರ ಈ ಶಾಲೆಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಿಬಿಎಸ್‌ಸಿ ಮಂಡಳಿಗೆ ಶಿಫಾರಸ್ಸು ಮಾಡುವುದಾಗಿ ಸಚಿವ ನಾಗೇಶ್ ಹೇಳಿದರು.

ಆರೋಗ್ಯ ಇಲಾಖೆಯಲ್ಲಿ ವರ್ಗಾವಣೆಗೆ ಕಡಿವಾಣ

ನಿಯಮಾವಳಿ ಪಾಲನೆಯಿಂದ 4ನೇ ಅಲೆ ತಡೆ

ಬೆಂಗಳೂರು,ಏ.26(ಕೆಎಂಶಿ)–ಸರ್ಕಾರದ ನಿಯಮಾವಳಿಗಳನ್ನು ಪಾಲಿಸಿದರೆ, ಕೋವಿಡ್ 4ನೇ ಅಲೆ ತಡೆಯಲು ಸಹಕಾರಿಯಾಗಲಿದೆ ಎಂದು ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 3ನೇ ಅಲೆಯಲ್ಲಿ ಸಾವು ನೋವು ಹೆಚ್ಚಿರಲಿಲ್ಲ. ಲಸಿಕಾಕರಣದಿಂದ ಈ ಅಲೆ ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿಲ್ಲ. ನಾಲ್ಕನೆ ಅಲೆಗೆ ಮುನ್ನೆಚ್ಚರಿಕೆ ಅಗತ್ಯ. ಸಾರ್ವಜನಿಕರು ಸರ್ಕಾರದ ಮಾರ್ಗಸೂಚಿ ಪಾಲಿಸಿದರೆ, ಇದನ್ನೂ ನಾವು ಸಮರ್ಪಕವಾಗಿ ಎದುರಿಸಬಹುದು. ತಜ್ಞರ ಪ್ರಕಾರ ರೂಪಾಂತರ ತಳಿ, ಹೇಳಿಕೊಳ್ಳುವಷ್ಟು ಪ್ರಬಲವಾಗಿಲ್ಲ. ಆದರೂ ಅಗತ್ಯ ಮುನ್ನೆಚ್ಚರಿಕೆ ಹಾಗೂ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.



ಬೆಂಗಳೂರು,ಏ.26–ಆರೋಗ್ಯ ಇಲಾಖೆಯಲ್ಲಿ ಈ ವರ್ಷ ಮಾರ್ಗಸೂಚಿಯ ಪ್ರಕಾರವೇ ಅಧಿಕಾರಿಗಳು, ಸಿಬ್ಬಂದಿಯ ವರ್ಗಾವಣೆ ಮಾಡಲಾಗುವುದು. ಹಿಂದಿನಂತೆ ಬೇಕಾಬಿಟ್ಟಿಯಾಗಿ ವರ್ಗಾವಣೆ ಮಾಡುವುದಿಲ್ಲ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಮಂಗಳವಾರ ನಡೆದ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳ (ಡಿಎಚ್‌ಒ) ಸಭೆಯಲ್ಲಿ ಮಾತನಾಡಿದ ಅವರು, ಮಾರ್ಗಸೂಚಿಯ ಪ್ರಕಾರ, ಶೇಕಡ 15ರಷ್ಟು ಮಂದಿಯ ವರ್ಗಾವಣೆಗೆ ಮಾತ್ರ ಅವಕಾಶ ನೀಡಲಾಗುವುದು. ಹತ್ತು ವರ್ಷಗಳಿಂದ ಒಂದೇ ಸ್ಥಳದಲ್ಲಿರುವ ಅಧಿಕಾರಿಗಳನ್ನು ಬದಲಾವಣೆ ಮಾಡಲಾಗುವುದು ಎಂದರು.

ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಬೆಂಗಳೂರು ನಗರ ಬಿಟ್ಟು ಹೊರ ಹೋಗುತ್ತಿಲ್ಲ. ಅದನ್ನು ತಡೆಯಲು ಪರಸ್ಪರ ಕೋರಿಕೆ ವರ್ಗಾವಣೆಗಳನ್ನು ಪರಿಗಣಿಸುವುದಿಲ್ಲ ಎಂದು ಹೇಳಿದರು.

ಪ್ರತಿ ಬುಧವಾರ ಎಲ್ಲ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಆಸ್ಪತ್ರೆಗಳು ಮತ್ತು ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವುದು ಕಡ್ಡಾಯ. ಆರೋಗ್ಯ ಇಲಾಖೆ ಅಧಿಕಾರಿಗಳು ತಮ್ಮ ದೈನಂದಿನ ಕಾರ್ಯನಿರ್ವಹಣೆ ಕುರಿತು ದಿನಚರಿ ದಾಖಲಿಸುವುದನ್ನೂ ಕಡ್ಡಾಯ ಮಾಡಲಾಗುವುದು ಎಂದರು.

4ನೇ ಅಲೆ ಅಸಂಭವ: ಖ್ಯಾತ ವೈರಸ್ ತಜ್ಞ

ನವದೆಹಲಿ: ದೇಶಾದ್ಯಂತ ಕೋವಿಡ್ 4ನೇ ಅಲೆ ಭೀತಿ ಆವರಿಸಿರುವಂತೆಯೇ ಇದಕ್ಕೆ ತದ್ವಿರುದ್ಧ ಎಂಬಂತೆ ದೇಶದಲ್ಲಿ 4ನೇ ಅಲೆ ಅಸಂಭವ ಎಂದು ಖ್ಯಾತ ವೈರಾಲಜಿಸ್ಟ್ ಹೇಳಿದ್ದಾರೆ.

ಖ್ಯಾತ ವೈರಾಲಜಿಸ್ಟ್ ಮತ್ತು ಮಾಜಿ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜ್ (ಸಿಎಂಸಿ) ವೆಲ್ಲೂರ್‌ನ ಪ್ರೊಫೆಸರ್ ಡಾ.ಟಿ.ಜೇಕಬ್ ಜಾನ್ ಅವರು ಭಾರತದಲ್ಲಿ ಕೋವಿಡ್–19 ನಾಲ್ಕನೇ ಅಲೆ ಸಂಭವನೀಯತೆ ಅತ್ಯಂತ ಕಡಿಮೆ ಎಂದು ಹೇಳಿದ್ದಾರೆ.

ಈ ಕುರಿತು ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ ಅವರು ದೇಶದ ಕೆಲವು ರಾಜ್ಯಗಳು ಕೋವಿಡ್–19 ಪ್ರಕರಣಗಳ ಉಲ್ಬಣವನ್ನು ಏಕೆ ವರದಿ ಮಾಡುತ್ತಿವೆ ಎಂದು ಕೇಳಿದಾಗ, ಕಳೆದ 2–3 ವಾರಗಳಲ್ಲಿ ದೆಹಲಿ ಮತ್ತು ಹರಿಯಾಣದಲ್ಲಿ ಕೋವಿಡ್ ಸಂಖ್ಯೆಯಲ್ಲಿ ಸಣ್ಣ ಹೆಚ್ಚಳ ಕಂಡುಬಂದಿದೆ. ಆದರೆ ಹೆಚ್ಚಳವನ್ನು ಉಳಿಸಿಕೊಳ್ಳಲಾಗುತ್ತಿಲ್ಲ. ಅಲ್ಲಿ ಸೋಂಕಿನಿಂದ ಚೇತರಿಸಿಕೊಳ್ಳುತ್ತಿರುವವರ ಸಂಖ್ಯೆ ಕೂಡ ಹೆಚ್ಚಿದೆ ಎಂದರು. 4ನೇ ಅಲೆ ಬಂದರೆ ಅದು ನನಗೆ ಸಂಪೂರ್ಣ ಆಶ್ಚರ್ಯಕರವಾಗಿರುತ್ತದೆ. ಆದ್ದರಿಂದ ನಾನು ಅದರ ಬಗ್ಗೆ ಏನನ್ನೂ ಊಹಿಸಲು ಸಾಧ್ಯವಿಲ್ಲ. 4ನೇ ಅಲೆಯ ಸಂಭವನೀಯತೆಯು ತೀರಾ ಕಡಿಮೆಯಾಗಿದೆ ಎಂದರು.

ಬೆಂಬಲ ಬೆಲೆಯಡಿ ರಾಗಿ ಖರೀದಿ

- ಜಿಲ್ಲೆಯಲ್ಲಿ 9 ಕೇಂದ್ರ ಕಾರ್ಯಾರಂಭ; ಕ್ವಿಂಟಾಲ್‌ಗೆ 3,377 ರೂ. ದರ ನಿಗದಿ
- ಈ ಹಿಂದೆ ಮಾರಾಟ ಮಾಡಿದವರ ಹೊರತುಪಡಿಸಿ ಉಳಿದ ರೈತರಿಗೆ ಅವಕಾಶ
- ರಾಜ್ಯದಲ್ಲಿ 1.14 ಲಕ್ಷ ಮೆಟ್ರಿಕ್ ಲಕ್ಷ ಟನ್ ರಾಗಿ ಖರೀದಿ ಪ್ರಮಾಣ ನಿಗದಿ

ಮೈಸೂರು, ಏ.26(ಎಸ್‌ಬಿಡಿ)– ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ರಾಗಿ ಖರೀದಿಸಲು ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ನೋಂದಣಿ ಆರಂಭವಾಗಿದೆ. ರೈತರ ಬೇಡಿಕೆಯಿಂದಾಗಿ ರಾಜ್ಯಾದ್ಯಂತ ರಾಗಿ ಖರೀದಿ ಮುಂದುವರೆಸಲಾಗಿದ್ದು, ಮೈಸೂರು ತಾಲೂಕು ಬಂಡಿಪಾಳ್ಯ ಎಪಿಎಂಸಿ ಆವರಣ, ತಿ.ನರಸೀಪುರ ತಾಲೂಕು ಬನ್ನೂರು ಎಪಿಎಂಸಿ, ಹುಣಸೂರು ಎಪಿಎಂಸಿ, ಕೆ.ಆರ್.ನಗರ ಎಪಿಎಂಸಿ, ಚುಂಚನಕಟ್ಟೆ ಪ್ರವಾಸಿ ಮಂದಿರ, ಸಾಲಿಗ್ರಾಮ ಎಪಿಎಂಸಿ, ಹೆಚ್.ಡಿ.ಕೋಟೆ ತಾಲೂಕು ಸರಗೂರು ಎಪಿಎಂಸಿ, ಪಿರಿಯಾಪಟ್ಟಣ ಹಾಗೂ ಬೆಟ್ಟದಪುರ ಎಪಿಎಂಸಿ ಆವರಣ ಸೇರಿ ಜಿಲ್ಲೆಯಲ್ಲಿ ಒಟ್ಟು 9 ಖರೀದಿ ಕೇಂದ್ರ ತೆರೆಯಲಾಗಿದೆ. ಈಗಾಗಲೇ 2021–22ನೇ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಗಿ ಮಾರಾಟ ಮಾಡಿರುವ ರೈತರನ್ನು ಹೊರತುಪಡಿಸಿ ಇನ್ನುಳಿದ ರೈತರಿಂದ ಮಾತ್ರ ರಾಗಿ ಖರೀದಿಸಲಾಗುವುದು. ● 8ನೇ ಪುಟಕ್ಕೆ

ಸ್ವಯಂ ಉದ್ಯೋಗಿಗಳಾಗಲು ಬಯಸುವವರಿಗೆ ಇದ್ದು ಇಲ್ಲದಂತಿರುವ ಜಿಲ್ಲಾ ಕೈಗಾರಿಕಾ ಕೇಂದ್ರ!


- ಶೇ.90ರಷ್ಟು ಫಲಾನುಭವಿಗಳು ಭೂಮಿ, ಸಾಲ–ಸೌಲಭ್ಯಕ್ಕೆ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ
- ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕೇಂದ್ರ ಕಚೇರಿಯಿಂದ ಬಂದ ಅರ್ಜಿಗಳಿಗಷ್ಟೇ ಮಾನ್ಯತೆ

ಮೈಸೂರು,ಏ.26(ಎಂಕೆ)–ನಿರುದ್ಯೋಗಿಗಳನ್ನು ಸ್ವಯಂ ಉದ್ಯೋಗಿಗಳನ್ನಾಗಿಸುವಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಸಂಪೂರ್ಣವಾಗಿ ಹಿಂದೆ ಬಿದ್ದಿದ್ದು, ಕಳೆದ ನಾಲ್ಕೈದು ವರ್ಷಗಳಿಂದಲೂ ಉದ್ಯಮ ಸ್ಥಾಪಿಸುವವರ ಕನಸು ಕನಸಾಗಿಯೇ ಉಳಿದಿದೆ.

ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ (ಡಿಐಸಿ) ಕಳೆದ 5 ವರ್ಷದಲ್ಲಿ ಹೊಸ ಉದ್ಯಮ ಸ್ಥಾಪಿಸುವುದಕ್ಕಾಗಿ ಭೂಮಿ ಹಾಗೂ ಇತರೆ ಸಾಲ–ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿದವರಲ್ಲಿ ಶೇ.90ರಷ್ಟು ಮಂದಿ ಚಾತಕ ಪಕ್ಷಿಯಂತೆ ಕಾಯುವುದೇ ಆಗಿದೆ.

2017–18ರಲ್ಲಿ 451 ಅರ್ಜಿ, 2018–19ರಲ್ಲಿ 63, 2019–20ರಲ್ಲಿ 376, 2020–21ರಲ್ಲಿ 191 ಹಾಗೂ 2021–22ರಲ್ಲಿ 74 ಸೇರಿ ಒಟ್ಟು 1155 ಅರ್ಜಿಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಮೈಸೂರು ಜಿಲ್ಲಾ ಕೇಂದ್ರಕ್ಕೆ ಸಲ್ಲಿಕೆಯಾಗಿವೆ. ಆದರೆ ಪ್ರಯೋಜನ ಪಡೆದವರು ಮಾತ್ರ ಕೇವಲ ಶೇ.10ರಷ್ಟು, ಕಡಕೊಳ, ತಾಂಡ್ಯ, ಕೂರ್ಗಳ್ಳಿ, ಅಡಕನಹಳ್ಳಿ ಹಾಗೂ ಹಿಮ್ಮಾವು ಕೈಗಾರಿಕಾ ಪ್ರದೇಶಗಳಲ್ಲಿ ● 8ನೇ ಪುಟಕ್ಕೆ

ಜಿಟಿಡಿ ಮಾವ ಕಾಳೇಗೌಡರು ನಿಧನ



ಮೈಸೂರು, ಏ.26– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಅವರ ಮಾವ ಕಾಳೇಗೌಡ ಅವರು ಇಂದು ಬೆಳಗ್ಗೆ ಮೈಸೂರು ತಾಲೂಕು ಗುಂಗ್ರಾಲ್‌ಛತ್ರದಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು. ಇವರಿಗೆ 87 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಲಲಿತಾ ಜಿ.ಟಿ.ದೇವೇಗೌಡ ಸೇರಿದಂತೆ ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ, ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ ಸಂಜೆ ಗುಂಗ್ರಾಲ್ ಛತ್ರದಲ್ಲಿ ನೆರವೇರಿತು ಎಂದು ಬಂಧುಗಳು ತಿಳಿಸಿದ್ದಾರೆ. ಮೃತರ ನಿಧನಕ್ಕೆ ಅನೇಕ ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 27 ಏಪ್ರಿಲ್ 2022

ಪ್ರಧಾನಿ ಆಶಯದಂತೆ ಕ್ರೀಡೆ ಉನ್ನತ ಸ್ಥಾನಕ್ಕೇರಿಸಲು ಕ್ರಮ

● ರೇಷ್ಮೆ, ಯುವ ಸಬಲೀಕರಣ, ಕ್ರೀಡಾ ಸಚಿವ ಡಾ.ನಾರಾಯಣಗೌಡ ನಿರ್ಧಾರ ● ಅಮೃತ ಕ್ರೀಡಾ ದತ್ತು ಯೋಜನೆಯಡಿ 75 ಕ್ರೀಡಾಪಟುಗಳಿಗೆ ತರಬೇತಿ ● ಕ್ರೀಡಾ ವಿಶ್ವವಿದ್ಯಾಲಯ ತೆರೆಯಲು ಯಲಹಂಕದಲ್ಲಿ 100 ಎಕರೆ ಭೂಮಿ ನಿಗದಿ ● ರೇಷ್ಮೆಗೆ ದಾಖಲೆ ಬೆಲೆ ಕಲ್ಪಿಸಿದ ಹೆಗ್ಗಳಿಕೆ

ಬೆಂಗಳೂರು, ಏ.26 (ಕೆಎಂಶಿ)– ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕನಸಿನಂತೆ ಕ್ರೀಡೆಯನ್ನು ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗಲು ನಮ್ಮ ಸರ್ಕಾರ ಎಲ್ಲಾ ರೀತಿಯ ಕ್ರಮ ವಹಿಸಿದೆ ಎಂದು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಡಾ.ನಾರಾಯಣಗೌಡ ಇಂದಿಲ್ಲಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಡಾ.ನಾರಾಯಣಗೌಡ, ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ ಯಶಸ್ವಿಗೊಳಿಸಲು ನಮ್ಮ ರಾಜ್ಯ ಸರ್ಕಾರ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದು, ದೇಶದ ಹಲವು ವಿವಿಗಳಿಂದ 8000 ಕ್ರೀಡಾಪಟುಗಳು, ಸಿಬ್ಬಂದಿ ಬಂದಿದ್ದಾರೆ. ಅವರಿಗೆ ಯಾವುದೇ ಸಮಸ್ಯೆ ಆಗದಂತೆ ವ್ಯವಸ್ಥೆ ಕಲ್ಪಿಸಲಾಗಿದೆ. ಭಾರತದಲ್ಲಿ ಕ್ರೀಡೆಯನ್ನು ಉತ್ತಮ ಸ್ಥಾನಕ್ಕೆ ತೆಗೆದುಕೊಂಡು ಹೋಗಬೇಕು ಎಂಬುದು ಮೋದಿಯವರ ಕನಸು. ಮೋದಿಯವರ ಕನಸು ಸಾಕಾರಗೊಳಿಸುವ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ ಎಂದರು.

ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವನಾದ ಮೇಲೆ ಇಲಾಖೆ ಸುಧಾರಣೆಗೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಜ್ಯ ಬಜೆಟ್ ಅನುದಾನದಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸಲಾಗಿದೆ. ನಾಲ್ಕೈದು ವರ್ಷಗಳಿಂದ ಸ್ಥಗಿತಗೊಂಡಿದ್ದ ಜಕ್ಕೂರು ಸರ್ಕಾರಿ ವೈಮಾನಿಕ ಶಾಲೆ ಪುನಾರಂಭ ಮಾಡಲಾಗಿದೆ ಎಂದರು.

75 ಕ್ರೀಡಾಪಟುಗಳಿಗೆ ತರಬೇತಿ: ಅಮೃತ ಕ್ರೀಡಾ ದತ್ತು ಯೋಜನೆಯಲ್ಲಿ 75 ಕ್ರೀಡಾಪಟುಗಳಿಗೆ ತರಬೇತಿ ನೀಡಲಾಗುತ್ತಿದೆ. ಸಿದ್ದಿ ಜನಾಂಗದ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಅವರಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. ನೂತನ ಯುವ ನೀತಿ ರೂಪಿಸಲು ಡಾ.ಬಾಲಸುಬ್ರಹ್ಮಣ್ಯಂ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು, ಉತ್ತಮ ಯುವ ನೀತಿಯನ್ನು ರೂಪಿಸಲಾಗುತ್ತದೆ. ಸರ್ಕಾರಿ ಇಲಾಖೆಗಳಲ್ಲಿ ಕ್ರೀಡಾಪಟುಗಳಿಗೆ 2% ಮೀಸಲಾತಿ ಮತ್ತು ಕ್ರೀಡಾ ಇಲಾಖೆಯಲ್ಲಿ 50% ಮೀಸಲಾತಿ ಜಾರಿಗೆ ಪ್ರಯತ್ನಿಸಲಾಗುತ್ತಿದೆ. ಇದರ ಜೊತೆಗೆ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪಿಸಲು ಯಲಹಂಕದಲ್ಲಿ 100 ಎಕರೆ ಜಾಗ ಗುರುತಿಸಲಾಗಿದೆ. ಮಾಜಿ ಕುಸ್ತಿಪಟುಗಳ ಮಾಸಾಶನ ಹೆಚ್ಚಳ. ನರೇಗಾ ಯೋಜನೆಯಲ್ಲಿ ಗ್ರಾಮೀಣ ಭಾಗದಲ್ಲಿ ಕ್ರೀಡಾ ಅಂಕಣ ನಿರ್ಮಿಸಲು ಸೂಚಿಸಲಾಗಿದೆ. ಕಂಠೀರವ ಕ್ರೀಡಾಂಗಣದಲ್ಲಿ ಸುಮಾರು 5 ಕೋಟಿ ವೆಚ್ಚದಲ್ಲಿ ಹೊಸ ಸಿಂಥೆಟಿಕ್ ಟ್ರ್ಯಾಕ್ ಅಳವಡಿಸಲಾಗಿದೆ ಎಂದು ತಿಳಿಸಿದರು.



ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರಹ್ಲಾದ್ ಜೋಷಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಹಳೇ ಮೈಸೂರು ಭಾಗದಲ್ಲಿರುವ ನಾಯಕರನ್ನು ಬಿಜೆಪಿಗೆ ಕರೆತರುವ ಬಗ್ಗೆ ಮಾಧ್ಯಮ ಮಿತ್ರರ ಪ್ರಶ್ನೆಗೆ ಉತ್ತರಿಸಿದ ಸಚಿವ ಡಾ.ನಾರಾಯಣಗೌಡ, ಹಳೆ ಮೈಸೂರು ಭಾಗದಲ್ಲಿ ಶಾಸಕರನ್ನು ಕರೆತರ್ತೀವಿ. ಮಂಡ್ಯದಲ್ಲಿ ನನ್ನಿಂದಲೇ ಖಾತೆ ಓಪನ್ ಆಗಿದೆ. ಮುಂದಿನ ಚುನಾವಣೆಯಲ್ಲಿ ನಾಲ್ಕರಿಂದ ಐದು ಎಂಎಲ್ಎ ಹಾಗೂ ಎಂಪಿಯನ್ನು ಗೆಲ್ಲಿಸಿಕೊಳ್ಳುತ್ತೇವೆ. ನಮ್ಮ ಜೊತೆ ಯಾರು ಸಂಪರ್ಕದಲ್ಲಿದ್ದಾರೆ ಎಂದು ಸ್ವಲ್ಪ ದಿನದಲ್ಲೇ ಗೊತ್ತಾಗುತ್ತೆ. ಹೈಕಮಾಂಡ್ ಏನು ಹೇಳುತ್ತದೆಯೋ ಅದೇ ಫೈನಲ್ ಎಂದು ಸುದ್ದಿಗಾರರಿಗೆ ಉತ್ತರಿಸಿದರು.

> "ರೇಷ್ಮೆ ಇಲಾಖೆಯಲ್ಲಿ ಸುಧಾರಣೆಗೆ ಹಲವು ಕ್ರಮ ವಹಿಸಲಾಗಿದೆ. ರೇಷ್ಮೆ ಗೂಡಿಗೆ ದಾಖಲೆ ಪ್ರಮಾಣದಲ್ಲಿ ಬೆಲೆ ಸಿಕ್ಕುತ್ತಿದೆ. 1 ಕೆಜಿ 1200 ರೂ.ವರೆಗೂ ಬೆಲೆ ಸಿಕ್ಕಿದೆ. ಸದ್ಯ ಸರಾಸರಿ ಕೆಜಿಗೆ 800 ರೂ ಸಿಕ್ಕುತ್ತಿದ್ದು, 1 ಕೆಜಿ ಸಿಲ್ಕ್‌ಗೆ 5500 ರೂ. ಸಿಗುತ್ತಿದೆ. 1.39 ಲಕ್ಷ ರೇಷ್ಮೆ ಬೆಳೆಗಾರರಿಗೆ ಗುರುತಿನ ಚೀಟಿ, ಪಾಸ್ ಬುಕ್ ನೀಡಲಾಗಿದೆ. ರೇಷ್ಮೆ ಮಾರುಕಟ್ಟೆಗಳಲ್ಲಿ ಸಿಸಿಟಿವಿ ಅಳವಡಿಸಲಾಗಿದೆ. ರೇಷ್ಮೆ ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿಗೆ ಕಡಿವಾಣ ಹಾಕಲಾಗಿದೆ. ರಾಮನಗರದಲ್ಲಿ ಸುಮಾರು 75 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಿಸಲು ಶೀಘ್ರದಲ್ಲೇ ಟೆಂಡರ್ ಕರೆಯಲಾಗುತ್ತದೆ. ಹಾವೇರಿ ಮತ್ತು ಕಲಬುರಗಿಯಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಿಸಲಾಗುತ್ತದೆ. ರಾಮನಗರ ಮಾದರಿಯಲ್ಲಿ ಶಿಡ್ಲಘಟ್ಟ ರೇಷ್ಮೆ ಮಾರುಕಟ್ಟೆ ಉನ್ನತೀಕರಿಸಲು ನಿರ್ಧರಿಸಲಾಗಿದೆ.
>
> –ಡಾ.ನಾರಾಯಣಗೌಡ, ಸಚಿವ

ಭಾಷಾ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಧರ್ಮ ಅಭ್ಯಾಸ ವಿಚಾರ ಪರಿಶೀಲನೆಗೆ ಸೂಚನೆ

ಪ್ರಾಥಮಿಕ-ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸ್ಪಷ್ಟನೆ

ಬೆಂಗಳೂರು, ಏ.26(ಕೆಎಂಶಿ)– ಭಾಷಾ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಧರ್ಮ ಅಭ್ಯಾಸ ಮಾಡಬೇಕು ಎಂಬುದನ್ನು ಕಡ್ಡಾಯಗೊಳಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ಖಾಸಗಿ ಶಾಲೆಯೊಂದರಲ್ಲಿ ಬೈಬಲ್ ಅಭ್ಯಾಸ ಕಡ್ಡಾಯಗೊಳಿಸಿರುವುದು ತಪ್ಪು. ಈ ಸಂಬಂಧ ನೋಟಿಸ್ ನೀಡಿ ಸಮಜಾಯಿಷಿ ಕೇಳಲಾಗುವುದು ಎಂದರು.



ಅಲ್ಲದೆ, ರಾಜ್ಯದ ಶಿಕ್ಷಣ ಕಾಯ್ದೆಯನ್ನು ಸಿಬಿಎಸ್‌ಇ ಪಠ್ಯಕ್ರಮದ ಶಿಕ್ಷಣ ಸಂಸ್ಥೆಗಳು ಪಾಲಿಸಬೇಕು. ಈ ಸಂಬಂಧ ಆ ಶಾಲೆಯ ನಿರ್ಧಾರದ ಬಗ್ಗೆ ಸಿಬಿಎಸ್‌ಇಗೂ ಪತ್ರ ಬರೆಯಲಾಗುವುದು. ಟಿಪ್ಪು, ಭಗವದ್ಗೀತೆ ಮೊದಲಾದ ವಿಚಾರದಲ್ಲಿ ಮಾತನಾಡುವ ವಿರೋಧ ಪಕ್ಷಗಳು ಹಾಗೂ ಬುದ್ಧಿಜೀವಿಗಳು ಈ ವಿಚಾರದಲ್ಲಿ ಮೌನವಾಗಿರುವುದೇಕೆ ಎಂದು ಪ್ರಶ್ನಿಸಿದರು. ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ನಿಗದಿಯಂತೆ ಮೇ 16ರಿಂದ ಶಾಲೆಗಳು ಪ್ರಾರಂಭ ವಾಗಲಿವೆ. ಪಿಯುಸಿ ಪರೀಕ್ಷೆ ಸುಗಮವಾಗಿ ನಡೆಯುತ್ತಿವೆ. 10ನೇ ತರಗತಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಯುತ್ತಿದೆ. ಮೇ 2ನೇ ವಾರದ ವೇಳೆಗೆ 10ನೇ ತರಗತಿ ಫಲಿತಾಂಶ ಪ್ರಕಟಿಸಲಾಗುವುದು ಎಂದರು.

ನವೀಕೃತ ಅರಮನೆ ಕೋಟೆ ಆಂಜನೇಯಸ್ವಾಮಿ ದರ್ಶನಕ್ಕೆ ಮುಕ್ತ

ಮೈಸೂರು, ಏ.26(ಆರ್‌ಕೆಬಿ)– ನವೀಕರಣದ ಹಿನ್ನೆಲೆಯಲ್ಲಿ 2021ರ ನವೆಂಬರ್ ತಿಂಗಳಿನಿಂದ ಮುಚ್ಚಲ್ಪಟ್ಟಿದ್ದ ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯ ಗುರುವಾರದಿಂದ (ಏ.28) ಸಾರ್ವಜನಿಕ ಪ್ರವೇಶಕ್ಕೆ ತೆರೆದುಕೊಳ್ಳಲಿದೆ.



ಇಂದು ಅಂಕುರಾರ್ಪಣ, ನಾಳೆ ಮಹಾ ಸಂಪ್ರೋಕ್ಷಣ

ದೇವಾಲಯದ ಮೇಲ್ಭಾಗ ಶಿಥಿಲಗೊಂಡ ಹಿನ್ನೆಲೆಯಲ್ಲಿ ಮುಜರಾಯಿ ಇಲಾಖೆ ನವೀಕರಣ ಕಾರ್ಯ ಕೈಗೊಂಡಿತ್ತು. ಇದರಿಂದಾಗಿ ಆಂಜನೇಯಸ್ವಾಮಿಯ ಮೂಲ ವಿಗ್ರಹದ ದರ್ಶನ ಭಕ್ತಾದಿಗಳಿಗೆ ಅಲಭ್ಯವಾಗಿತ್ತು. ಆದರೆ, ಮೂಲ ವಿಗ್ರಹದ ದರ್ಶನ ಇಲ್ಲದಿದ್ದರೂ, ಹೆಬ್ಬಾಗಿಲ ಬಳಿ ಮೂಲ ಆಂಜನೇಯ ಸ್ವಾಮಿ ದೇವರ ಭಾವಚಿತ್ರ ಹಾಗೂ ಇತರೆ ದೇವರುಗಳ ಮೂರ್ತಿಗಳನ್ನು ಇಟ್ಟು ಪೂಜಾ ವಿಧಿವಿಧಾನಗಳನ್ನು ಎಂದಿನಂತೆ ನೆರವೇರಿಸಲಾಗುತ್ತಿತ್ತು.

ಇದೀಗ ದೇವಾಲಯದ ಮೇಲ್ಭಾಗದ ನವೀಕರಣ ಕಾರ್ಯ ಪೂರ್ಣಗೊಂಡಿದ್ದು, ಏ.28ರ ಗುರುವಾರದಂದು ಸಾರ್ವಜನಿಕರಿಗೆ ಮೂಲ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಬುಧವಾರ ಅಂಕುರಾರ್ಪಣ ಹಾಗೂ ಗುರುವಾರ ಮಹಾಸಂಪ್ರೋಕ್ಷಣ ನಡೆಯಲಿದೆ ಎಂದು ಕಾರ್ಯನಿರ್ವಾಹಕ ಅಧಿಕಾರಿ ಯತಿರಾಜ್ ತಿಳಿಸಿದ್ದಾರೆ.

ಇಂದು ವಿಶ್ವ ಭೂಮಿ ದಿನಾಚರಣೆ

ಮೈಸೂರು,ಏ.26–ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ನೋಟು ಮುದ್ರಣ ಪ್ರೈವೇಟ್ ಲಿಮಿಟೆಡ್ ಸಹಯೋಗದೊಂದಿಗೆ ಏ.27ರಂದು ಬೆಳಗ್ಗೆ 11 ಗಂಟೆಗೆ ನೋಟು ಮುದ್ರಣ ನಗರದ ಕೇಂದ್ರೀಯ ವಿದ್ಯಾಲಯದಲ್ಲಿ ವಿಶ್ವಭೂಮಿ ದಿನಾಚರಣೆ ಆಚರಿಸಲಾಗುತ್ತಿದೆ. ಪರಿಸರ ಅಧಿಕಾರಿ ಜಿ.ಆರ್.ಗಣೇಶನ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಡಾ. ದೇವರಾಜ್ ಭೂತೆ, ಐಆರ್‌ಬಿಎನ್‌ಎಂಪಿಎಲ್ ಮಹಾ ಪ್ರಬಂಧಕ ಹೆಚ್.ವಿ. ನೀರಜಾಕ್ಷಪ್ಪ ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಮುಡಾದಲ್ಲಿ ನಿವೇಶನಗಳ ಕಡತ ನಾಪತ್ತೆ ಪ್ರಕರಣ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮುಡಾ ಮುಂದೆ ರೈತರ ಪ್ರತಿಭಟನೆ



ಮೈಸೂರು,ಏ.26(ಎಂಟಿವೈ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಿವೇಶನಗಳಿಗೆ ಸೇರಿದ ವಿವಿಧ ದಾಖಲೆಗಳ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮುಡಾ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಕಬ್ಬು ಬೆಳೆಗಾರರು, ಮುಡಾ ಅಧಿಕಾರಿಗಳ ಬೇಜವಾಬ್ದಾರಿಯಿಂದಾಗಿ ಕಡತಗಳು ನಾಪತ್ತೆಯಾಗುತ್ತಿವೆ. ಮಿತಿಮೀರಿದ ಭ್ರಷ್ಟಾಚಾರ ಮುಡಾದಲ್ಲಿದೆ. ಇದರಿಂದಲೇ ಕಡತ ನಾಪತ್ತೆ ಪ್ರಕರಣ ನಡೆದಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಸರ್ಕಾರಿ ಕಚೇರಿಯಲ್ಲಿಯೇ ಕಡತ ನಾಪತ್ತೆಯಾಗುವುದಾದರೆ ಜನ ಸಾಮಾನ್ಯರಿಗೆ ಸೇರಿದ ಆಸ್ತಿಗೆ ಭದ್ರತೆಯೇ ಇಲ್ಲದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥ ಭ್ರಷ್ಟರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಮುಡಾದಲ್ಲಿ ನಡೆದಿರುವ ಕಡತ ನಾಪತ್ತೆ ಪ್ರಕರಣವನ್ನು ಕಳ್ಳತನದ ಪ್ರಕರಣದಂತೆ ಗಂಭೀರವಾಗಿ ಪರಿಗಣಿಸಬೇಕು. ಭ್ರಷ್ಟಾಚಾರದ ಕೂಪದಂತೆ ಬೆಳೆಯುತ್ತಿರುವ ಮುಡಾದ ಕರ್ಮಕಾಂಡಕ್ಕೆ ತಡೆಯೊಡ್ಡಬೇಕು. ಭ್ರಷ್ಟಾಚಾರಕ್ಕೆ ಪ್ರಚೋದನೆ ನೀಡಿ, ಅಮಾಯಕರ ಆಸ್ತಿ ನಿವೇಶನ ಕಬಳಿಕೆಯ ಹುನ್ನಾರ ನಡೆಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮುಡಾ ಅಧಿಕಾರಿಗಳು ಈ ಮೊದಲಿನಿಂದಲೂ ಭ್ರಷ್ಟಾಚಾರ ನಡೆಸುತ್ತಲೇ ಬಂದಿದ್ದಾರೆ. ರೈತರ ಕೃಷಿ ಭೂಮಿಯನ್ನು ತಮಗೆ ಬೇಕಾದವರಿಗೆ ನೀಡುವ ನಿಟ್ಟಿನಲ್ಲಿ ಸ್ವಾಧೀನಪಡಿಸಿಕೊಂಡು ರೈತರಿಗೆ ಅನ್ಯಾಯ ಮಾಡುತ್ತಲೇ ಬಂದಿದ್ದಾರೆ. ರೈತರಿಗೆ ಸಮರ್ಪಕವಾಗಿ ಪರಿಹಾರವನ್ನೂ ನೀಡದೆ ತಮ್ಮ ಆರ್ಥಿಕ ಸ್ಥಿತಿಗತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಇದೇ ವೇಳೆ ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್. ಮಂಜುನಾಥ್‌ಸ್ವಾಮಿ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು.

ಸಿಐಟಿ ಕಾಲೇಜಲ್ಲಿ UPSC ಪರೀಕ್ಷಾ ಸಿದ್ಧತೆ ಕುರಿತು ವಿಶೇಷ ಉಪನ್ಯಾಸ

ಮೈಸೂರು,ಏ.26–ಯುವಜನತೆಯಲ್ಲಿ ಭಾರತೀಯ ನಾಗರಿಕ ಸೇವಾ ಪರೀಕ್ಷೆಯ ಮಹತ್ವ ಮತ್ತು ಪರೀಕ್ಷಾ ಪೂರ್ವಸಿದ್ಧತೆಯನ್ನು ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಏ.28ರಂದು ಪೂರ್ವಾಹ್ನ 11 ಗಂಟೆಯ ಸಮಯಕ್ಕೆ ಪೊನ್ನಂಪೇಟೆಯ ಕೂರ್ಗ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ 'ನಾಗರೀಕ ಸೇವಾ ಪರೀಕ್ಷೆಯ ಒಳನೋಟ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಸಿಐಟಿಯ ಹಳೆಯ ವಿದ್ಯಾರ್ಥಿ ಚೇತನ್ UPSC ಪರೀಕ್ಷೆಯ ಸಿದ್ಧತೆ ಕುರಿತು ಉಪನ್ಯಾಸ ನೀಡಲಿದ್ದಾರೆ. ಆಸಕ್ತ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ: ದೂ.ಸಂಖ್ಯೆ :– 9535542005. Website: www.citcoorg.edu.in ಸಂಪರ್ಕಿಸಬಹುದು.

ಕುಕ್ಕರಹಳ್ಳಿ ಕೆರೆ ಮುಖ್ಯ ದ್ವಾರದ ಬಳಿಯ

ಮಳಿಗೆ ತೆರವಿಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಏ.26(ಪಿಎಂ)– ಕುಕ್ಕರಹಳ್ಳಿ ಕೆರೆಯ ಮುಖ್ಯದ್ವಾರದ (ರೈಲ್ವೆ ಗೇಟ್ ಬಳಿ) ಬಳಿ ರಸ್ತೆಬದಿ ಮಳಿಗೆ ನಿರ್ಮಿಸಿರುವುದು ಕೆರೆ ಪರಿಸರಕ್ಕೆ ಮಾರಕ. ಜೊತೆಗೆ ಇದರ ನಿರ್ಮಾಣವೂ ಕಾನೂನುಬಾಹಿರವಾಗಿದ್ದು, ಇದನ್ನು ಕೂಡಲೇ ತೆರವುಗೊಳಿಸಬೇಕೆಂದು ಒತ್ತಾಯಿಸಿ ಪರಿಸರ ಸಂರಕ್ಷಣಾ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ಪರಿಸರ ಸಂರಕ್ಷಣಾ ಸಮಿತಿ ವತಿಯಿಂದ ನಂದಿನಿ ಕ್ಷೀರ ಕೇಂದ್ರದ ಮಳಿಗೆ ಎದುರು ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಸದರಿ ಮಳಿಗೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕುಕ್ಕರಹಳ್ಳಿ ಕೆರೆಯ ಸುತ್ತಮುತ್ತಲು ಇದೇ ರೀತಿಯಲ್ಲಿ ವಾಣಿಜ್ಯ ಉದ್ದೇಶಿತ ಮಳಿಗೆಗಳು ಹೆಚ್ಚಾದರೆ ಇಲ್ಲಿನ ಪರಿಸರಕ್ಕೆ ಹಾನಿಯಾಗಲಿದೆ. ಹಾಗಾಗಿ ಇದನ್ನು ಕೂಡಲೇ ತೆರವುಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಾಮೂಹಿಕ ನಾಯಕತ್ವದಲ್ಲಿ ರಾಜ್ಯ ರೈತ ಸಂಘದ ಮಾಧ್ಯಮ ಕಾರ್ಯದರ್ಶಿ ಮಂಜು ಕಿರಣ್ ಮಾತನಾಡಿ, ಕೆರೆಯು ಮೈಸೂರು ವಿವಿ ಅಧೀನಕ್ಕೆ ಒಳಪಟ್ಟಿದ್ದು, ರಸ್ತೆಯು ಪಾಲಿಕೆ ವ್ಯಾಪ್ತಿಗೆ ಬರಲಿದೆ. ಈ ಎರಡಕ್ಕೂ ಸಂಬಂಧಿಸಿದ ಸ್ಥಳದಲ್ಲಿ ಪ್ರಭಾವಿ ವ್ಯಕ್ತಿಗಳು ಕಾನೂನುಬಾಹಿರವಾಗಿ ಮಳಿಗೆ ನಿರ್ಮಿಸಿದ್ದಾರೆ. ಕೂಡಲೇ ಇದನ್ನು ತೆರವುಗೊಳಿಸಬೇಕು. ಇಲ್ಲವಾದರೆ ನಮ್ಮ ಸಂಘದ ವತಿಯಿಂದಲೇ ನಾವೇ ತೆರವುಗೊಳಿಸುತ್ತೇವೆ ಎಂದು ಎಚ್ಚರಿಸಿದರು.

> "ರಾಜ್ಯದಲ್ಲಿ ಆಡಳಿತಾರೂಢ ಪಕ್ಷದ ಮುಖಂಡರು ಯಾವೆಲ್ಲಾ ರೀತಿ ಸಾರ್ವಜನಿಕ ಆಸ್ತಿಯನ್ನು ದುರುಪಯೋಗಪಡಿಸಿಕೊಳ್ಳಬಹುದು ಎಂಬುದಕ್ಕೆ ಇದೊಂದು ತಾಜಾ ಸಾಕ್ಷಿ. ಸಂಬಂಧಿಸಿದ ಅಧಿಕಾರಿಗಳೂ ಶಾಮೀಲಾಗಿ, ಸಾರ್ವಜನಿಕ ಆಸ್ತಿ ಕಂಡ ಕಂಡವರ ಪಾಲಾಗಲು, ಅದರಿಂದ ಲಾಭ ಗಳಿಸಲು ಅನುಕೂಲ ಮಾಡಿಕೊಡಲಾಗುತ್ತಿದೆ. ಮೈಸೂರು ಜಿಲ್ಲಾಧಿಕಾರಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಸಮಿತಿ ಅಧ್ಯಕ್ಷೆ ಭಾನುಮೋಹನ್ ಮಾತನಾಡಿ, ಮಳಿಗೆ ನಿರ್ಮಿಸಿರುವ ಸ್ಥಳ ವಿವಿ ವ್ಯಾಪ್ತಿಗೆ ನೇರವಾಗಿ ಬರುವುದಿಲ್ಲ. ಹಾಗಾಗಿ ಪಾಲಿಕೆ ಅಥವಾ ಜಿಲ್ಲಾಡಳಿತದಿಂದ ಅನುಮತಿ ಪಡೆಯಬೇಕಿತ್ತು. ಆದರೆ ಯಾವುದೇ ಅನುಮತಿ ಪಡೆದಿಲ್ಲ ಎಂದರು.

ವಿವಿಯಲ್ಲಿ ಈ ಬಗ್ಗೆ ವಿಚಾರಿಸಿದರೆ, ಕುಕ್ಕರಹಳ್ಳಿ ಕೆರೆ ಬೇಲಿಗೆ ಹೊಂದಿಕೊಂಡಂತೆ 8 ಅಡಿಗಳಷ್ಟು ಒಳಗೆ ಮಳಿಗೆ ನಿರ್ಮಾಣಕ್ಕೆ ಅವಕಾಶ ನೀಡಲಾಗಿತ್ತು ಎನ್ನುತ್ತಿದ್ದಾರೆ. ಯಾರದ್ದೇ ಜಾಗವಾದರೂ ಕೆರೆ ಮುಖ್ಯದ್ವಾರದಲ್ಲಿ ರಸ್ತೆಬದಿಯಲ್ಲಿ ಮಳಿಗೆ ನಿರ್ಮಿಸಿರುವುದು ಸರಿಯಲ್ಲ. ಇದರಿಂದ ಕೆರೆ ಪರಿಸರಕ್ಕೆ ಮಾರಕವಾಗುವುದರ ಜೊತೆಗೆ ಇಲ್ಲಿ ವಾಹನ ಮತ್ತು ಪಾದಚಾರಿ ಸಂಚಾರಕ್ಕೆ ಅಡಚಣೆಯುಂಟಾಗಲಿದೆ ಎಂದು ಪ್ರತಿಭಟನಾಕಾರರು ದೂರಿದರು.

ಪರಿಸರವಾದಿಗಳಾದ ಅರ್ಚನಾ, ಕಿರಣ್, ನಾಗೇಂದ್ರ, ರಾಘವೇಂದ್ರ, ಪ್ರಸಾದ್, ರಾಜ್ಯ ರೈತ ಸಂಘದ ಮುಖಂಡ ವಿದ್ಯಾಸಾಗರ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಮೈಸೂರು,ಏ.26–ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಏ.29ರಿಂದ ಮೇ 1ರವರೆಗೆ ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಏ.29ರಂದು ಹೆಚ್.ಡಿ. ಕೋಟೆಗೆ ಆಗಮಿಸಿ, 11 ಗಂಟೆಗೆ ಪೌರಕಾರ್ಮಿಕ ಮುಖಂಡರೊಂದಿಗೆ ಚರ್ಚೆ ನಡೆಸುವರು. ಬೆಳಗ್ಗೆ 11.30ಕ್ಕೆ ಹೆಚ್.ಡಿ. ಕೋಟೆ ಮತ್ತು ಸರಗೂರು ತಾಲೂಕಿನ ಜಗ ಜೀವನರಾಂ ವೇದಿಕೆಯಿಂದ ಏರ್ಪಡಿಸಿರುವ ಜಗಜೀವನರಾಂ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಏ.30ರಂದು ಟಿ.ನರಸೀಪುರದಲ್ಲಿ ಬೆಳಗ್ಗೆ 10 ಗಂಟೆಗೆ ಪೌರ ಕಾರ್ಮಿಕ ಮುಖಂಡರೊಂದಿಗೆ ಚರ್ಚೆ ನಡೆಸುವರು. ಬೆಳಗ್ಗೆ 11ಕ್ಕೆ ಬಾಬು ಜಗಜೀವನರಾಂ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 3 ಗಂಟೆಗೆ ಪೌರಕಾರ್ಮಿಕರ ಕುಂದುಕೊರತೆಗಳ ಕುರಿತು ವಿಚಾರಣೆ ನಡೆಸುವರು. ಮೇ 1ರಂದು ಭಾನುವಾರ ಮೈಸೂರಲ್ಲಿ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.



ಸಿಡಿಲಿನಿಂದ ಪಾರಾಗುವುದು ಹೇಗೆ?

ಮೈಸೂರು, ಏ.26– ಸಿಡಿಲಿನಿಂದ ಹೆಚ್ಚು ರೈತರು ಸಾವನ್ನಪ್ಪುತ್ತಿದ್ದು, ಸಿಡಿಲನ್ನು ತಪ್ಪಿಸಲಾಗದು. ಆದರೆ ಅದರಿಂದಾಗುವ ಸಾವು ನೋವುಗಳನ್ನು ತಪ್ಪಿಸಬಹುದು.



ರಕ್ಷಣೆ–ಹೇಗೆ...? ಗುಡುಗು–ಮಿಂಚು ಬರಲಿದೆ ಎಂದು ಗೊತ್ತಾದಾಗ ನೀವು ಬಯಲಿನಲ್ಲಿದ್ದರೆ ತಕ್ಷಣವೇ ಇರುವುದರಲ್ಲಿ ತಗ್ಗು ಪ್ರದೇಶಕ್ಕೆ ಹೋಗಿ ಕುಳಿತುಕೊಳ್ಳಬೇಕು. ತಗ್ಗು ಪ್ರದೇಶ ಇಲ್ಲದೆ ಬಯಲಿನಲ್ಲೆ ಇರಬೇಕಾದರೆ ನಿಮ್ಮ ತಲೆಯನ್ನು ಮೊಣಕಾಲುಗಳ ನಡುವೆ ಹುದುಗಿಸಿಕೊಳ್ಳಿ. ಇದು ಮಿಂಚಿನಿಂದ ಮೆದುಳಿಗೂ, ಹೃದಯಕ್ಕೂ ಆಗುವ ಹಾನಿಯನ್ನು ತಪ್ಪಿಸುತ್ತದೆ. ಮರಗಳಿದ್ದ ಪ್ರದೇಶದಲ್ಲಿ ನೀವು ಇದ್ದರೆ ಅಲ್ಲಿಂದ ಬೇಗನೆ ಹೊರಬರುವುದು ಒಳ್ಳೆಯದು. ಯಾಕೆಂದರೆ ಸಿಡಿಲು ಮೋಡದಿಂದ ಭೂಮಿಗೆ ಹರಿಯಲು ಮರದಂತಹ ಹಸಿ ಒದ್ದೆ ವಸ್ತುವನ್ನೇ ಆರಿಸಿಕೊಳ್ಳುತ್ತದೆ. ಎತ್ತರದ ಗುಡ್ಡದ ಮೇಲಿದ್ದರೆ ತಗ್ಗಿಗೆ ಇಳಿಯಿರಿ, ಕುರಿ ಮಂದೆ ಅಥವಾ ಜಾನುವಾರುಗಳ ಮಧ್ಯ ನಿಂತಿದ್ದರೆ ಅವುಗಳ ಮಧ್ಯದಲ್ಲಿ ಬಗ್ಗಿ ಕುಳಿತುಕೊಳ್ಳಿ ಯಾಕೆಂದರೆ ಮಿಂಚು ಪ್ರಾಣಿಗಳಿಗಿಂತ ಎತ್ತರವಿರುವ ಮನುಷ್ಯನನ್ನೇ ಆರಿಸಿಕೊಳ್ಳುತ್ತದೆ.

ಸಿಡಿಲಿನ ಸಂದರ್ಭದಲ್ಲಿ ಕೆರೆಯಲ್ಲಿ ಈಜುವುದು, ಸ್ನಾನ ಮಾಡುವುದು ಬೇಡ. ನೀರಿನಲ್ಲಿದ್ದರೆ ತಕ್ಷಣ ಹೊರಬನ್ನಿ. ವಿದ್ಯುತ್ ಕಂಬ, ಎಲೆಕ್ಟ್ರಿಕಲ್ ಟವರ್, ಮೊಬೈಲ್ ಟವರ್, ಟ್ರಾನ್ಸ್ ಫಾರ್ಮರ್ ಮುಂತಾದವುಗಳ ಹತ್ತಿರವೂ ಇರಬೇಡಿ. ತಂತಿಬೇಲಿ, ಬಟ್ಟೆ ಒಣಹಾಕುವ ತಂತಿ ಇವುಗಳಿಂದ ದೂರವಿರಿ.

ಮಳೆ ಬರುವ ಸಮಯದಲ್ಲಿ ಮನೆಯ ಟೆರೇಸನ್ನು ಸ್ವಚ್ಛ ಮಾಡುವ ಸಾಹಸ ಬೇಡ. ಮನೆಯ ಕಿಟಕಿಯ ಬಳಿ ನಿಲ್ಲುವುದಕ್ಕಿಂತಲೂ ಮನೆಯ ಮಧ್ಯದಲ್ಲಿರುವುದು ಸುರಕ್ಷಿತ. ಗುಡುಗು–ಸಿಡಿಲಿನ ಸಂದರ್ಭದಲ್ಲಿ ಫೋನ್ ಬಳಸಬೇಡಿ. ಅದನ್ನು ಚಾರ್ಜ್ ಮಾಡುವುದು ಬೇಡ. ಕಾರಿನಲ್ಲಿ ಪ್ರಯಾಣಿಸುತ್ತಿದ್ದರೆ ಗಾಜನ್ನು ಮುಚ್ಚಿಕೊಳ್ಳಿ ಕಾರಿನ ಬಾಡಿಯನ್ನು ಸಾಧ್ಯವಾದಷ್ಟು ಸ್ಪರ್ಶಿಸದೆ ಮಧ್ಯದಲ್ಲಿ ಕುಳಿತುಕೊಳ್ಳುವುದು ಒಳ್ಳೆಯದು. ಕಂಪ್ಯೂಟರ್‌ಗಳಿಂದ ದೂರ ಇರಿ. ಮನೆಯ ಕಾಂಕ್ರೀಟ್ ಗೋಡೆಗಳನ್ನು ಸ್ಪರ್ಶಿಸದೆ ಕೋಣೆಯ ಮಧ್ಯದಲ್ಲಿದ್ದರೆ ಹೆಚ್ಚು ಸುರಕ್ಷಿತ. ಈ ಎಲ್ಲಾ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಿಡಿಲಿನಿಂದ ಆಗುವ ಅನಾಹುತಗಳನ್ನು ತಪ್ಪಿಸಬಹುದಾಗಿದೆ ಎಂದು ಕಂದಾಯ ಇಲಾಖೆ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರದ ಪ್ರಕಟಣೆಯಲ್ಲಿ ತಿಳಿಸಿದೆ.

ಫಲಿತಾಂಶ ಪ್ರಕಟ

ಮೈಸೂರು,ಏ.26–ಕನ್ನಡ ಸಾಹಿತ್ಯ ಪರಿಷತ್ ನಡೆಸಿದ 2021–22ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದ್ದು ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಫಲಿತಾಂಶದ ಪಟ್ಟಿ ಕಳುಹಿಸಲಾಗಿದೆ ಹಾಗೂ ವೆಬ್‌ಸೈಟ್ www. kasapa.in ಮೂಲಕ ಪ್ರಕಟಿಸಲಾಗಿದೆ. ಅಭ್ಯರ್ಥಿಗಳಿಗೆ ಅಂಕ ಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ಕಳುಹಿಸಿಕೊಡಲಾಗುವುದು, ಮರು ಮೌಲ್ಯಮಾಪನ ಹಾಗೂ ಮರು ಎಣಿಕೆಗೆ ಅಂಕಪಟ್ಟಿಗಳನ್ನು ಕಳುಹಿಸಿದ ದಿನಾಂಕದಿಂದ 1 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಅವರನ್ನು ಅಥವಾ ದೂ.ಸಂ: 080–26623584 ಸಂಪರ್ಕಿಸಬಹುದು.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಏ. 26– ಮೈಸೂರಿನ ಬನ್ನಿಮಂಟಪದಲ್ಲಿರುವ ಸಾಯಿರಂಗ ವಿದ್ಯಾಸಂಸ್ಥೆ, ಉಚಿತ ಕಿವುಡು ಗಂಡು ಮಕ್ಕಳ ವಸತಿಶಾಲೆಯು 2022–23ನೇ ಸಾಲಿನಲ್ಲಿ ಕಿವುಡು ಗಂಡು ಮಕ್ಕಳಿಗೆ 1 ರಿಂದ 6ನೇ ತರಗತಿಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಇಲ್ಲಿ ವ್ಯಾಸಂಗ ಪಡೆಯುವ ವಿದ್ಯಾರ್ಥಿಗಳಿಗೆ ಊಟ, ವಸತಿ ಹಾಗೂ ಶಿಕ್ಷಣವನ್ನು 1ರಿಂದ 10ನೇ ತರಗತಿವರೆಗೆ ಸಂಪೂರ್ಣ ಉಚಿತವಾಗಿ ನೀಡಲಾಗುವುದು. ಮಾಹಿತಿಗೆ ಮೊ. 9342112736 ಸಂಪರ್ಕಿಸಬಹುದು.

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು,ಏ.26–ಮೈಸೂರಿನ ನಮನ ಕಲಾ ಮಂಟಪದಲ್ಲಿ ಮೇ 8ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶ ಆಯೋಜಿಸಿದೆ. ಆಸಕ್ತರು ಮೇ 7ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9972703737, 9686205346 ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಮೈಸೂರು, ಏ. 26– ಕನಕಪುರದ ಶ್ರೀ ದೇಗುಲ ಮಠವು 2022–23ನೇ ಸಾಲಿನಲ್ಲಿ 1ನೇ ತರಗತಿಯಿಂದ 10ನೇ ತರಗತಿವರೆಗೆ ಉಚಿತ ಶಿಕ್ಷಣಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದ್ದು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9663689989, 9902607260 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.04.2022 ಬುಧವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ದ್ವಾದಶಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ:** ಪದ್ಮಶ್ರೀ ಪಂಡಿತ್ ರಾಜೀವ್ ತಾರಾನಾಥ ಅವರಿಗೆ ಡಾಕ್ಟರ್ ಆಫ್ ಲೆಟರ್ಸ್ ಗೌರವ ಡಾಕ್ಟರೇಟ್ ಸಮರ್ಪಣೆ, ಉಪಸ್ಥಿತರು: ಕುಲಪತಿ ಪ್ರೊ.ಎಂ.ರಾಮಚಂದ್ರಗೌಡ, ಹಣಕಾಸು ಅಧಿಕಾರಿ ಪ್ರೊ.ಡಿ.ಎನ್.ಪಾಟೀಲ, ಕುಲಸಚಿವರಾದ ಪ್ರೊ.ವೀರನಗೌಡ ಬಿ.ಪಾಟೀಲ, ಪ್ರೊ. ಬಸವರಾಜ ಪದ್ಮಶಾಲಿ, ಸ್ಥಳ: ನಂ.853, ಪಂಚಮಂತ್ರ ರಸ್ತೆ, ಕುವೆಂಪುನಗರ, ಬೆಳಗ್ಗೆ 11ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟ:** ಡಾ.ಅಂಬೇಡ್ಕರ್ 131ನೇ ಜಯಂತಿ, ಉದ್ಘಾಟನೆ: ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು : ಉಪ ಪೊಲೀಸ್ ಆಯುಕ್ತ ಪ್ರದೀಪ್ ಗುಂಟಿ, ಮಾಜಿ ಶಾಸಕ ಜಯಣ್ಣ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಎನ್.ಮುನಿರಾಜು, ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಮಣಿಕಂಠಸ್ವಾಮಿ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಬಿಜಿಎಸ್ ಬಿ.ಎಸ್. ಕಾಲೇಜು :** ಕಲಾಂ– ಸಲಾಂ ಕಾರ್ಯಕ್ರಮ, ಸಾನ್ನಿಧ್ಯ: ಬಿಜಿಎಸ್ ವಿದ್ಯಾಪೀಠ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉದ್ಘಾಟನೆ: ಬೆಂಗಳೂರು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ನಿರ್ದೇಶಕ ಸಿ.ಬಸವಲಿಂಗಯ್ಯ, ಗೌರವ ಅತಿಥಿಗಳು: ಹಿರಿಯ ರಂಗಭೂಮಿ ನಿರ್ದೇಶಕ ಪ್ರೊ. ಹೆಚ್.ಎಸ್. ಉಮೇಶ್, ಬಿಜಿಎಸ್ ಬಿ.ಎಸ್. ಕಾಲೇಜು ಪ್ರಿನ್ಸಿಪಾಲ್ ಡಾ. ನಾಗರಾಜು, ಆಡಳಿತಾಧಿಕಾರಿ ಯಶೋಧ ಹೆಚ್., ಬಿಜಿಎಸ್ ಬಿ.ಎಡ್ ಕಾಲೇಜು ಪ್ರಶಿಕ್ಷಣಾರ್ಥಿಗಳಿಂದ ಅಗ್ನಿಯ ರೆಕ್ಕೆಗಳು ನಾಟಕ ಪ್ರದರ್ಶನ, ನಿರ್ದೇಶನ : ಪಿ. ಶ್ರೇಯಸ್, ಸಂಗೀತ : ನಾಗೇಶ್ ಕಂದೇಗಾಲ, ಸ್ಥಳ: ಬಿಜಿಎಸ್ ಬಿ.ಎಡ್. ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಸಿಂಡಿಕೇಟ್ ಸದಸ್ಯೆ ಡಾ. ಚೈತ್ರ ನಾರಾಯಣ್, ಮುಖ್ಯ ಅತಿಥಿಗಳು : ಮಹಾರಾಜ ಕಾಲೇಜು ಪತ್ರಿಕೋದ್ಯಮ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಆರ್.ಎನ್. ಪದ್ಮನಾಭ, ಅಧ್ಯಕ್ಷತೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಎನ್.ಎಸ್. ಹರಿನಾರಾಯಣ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಪಿ. ಸುರಭಿ, ಎ.ಎಸ್.ನಾಗಲಕ್ಷ್ಮಿ, ವ್ಯಾಖ್ಯಾನ– ಡಾ.ಸಿ. ನಿಂಗಣ್ಣ, 7.15 ಪ್ರಾಯೋಜಿತ ಕಾರ್ಯಕ್ರಮ 'ಕೌಶಲ್ಯ ಕರ್ನಾಟಕ'. ಪ್ರಾಯೋಜಕರು ರಾಜ್ಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ–ಬಾನುಲಿ ಸರಣಿ, 10.05 ಖೇಲೋ ಇಂಡಿಯಾ ಯೂನಿವರ್ಸಿಟಿ ಕ್ರೀಡಾಕೂಟದ ಮಂಗಳವಾರದ ಆಟಗಳ ಅವತರಣಿಕೆ 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ವಾಣಿ ಅರವಿಂದ್, ವಿದ್ಯಾಭೂಷಣ, 12.45 ಜನಪದಸಂಗೀತ– ಮಾದಮ್ಮ ಮತ್ತು ತಂಡ, 1.20 ಭಾವಗೀತೆ, 3.00 ಲಯ ಸಂಭ್ರಮ – ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಪ್ರಸ್ತುತಿ– ಅಬ್ದುಲ್ ರಶೀದ್, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ. ಮಳಿಮಠ್ ಮತ್ತು ಕೆ.ಬಿ.ಮೀನಾ, 4.45 ಹಿಂದಿ ಪಾಠ, ಪ್ರಸ್ತುತಿ–ಕಿಶೋರ್ ಎಂ. ಕಾಕಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಅರಿಸಿನ ಬೆಳೆಯಲ್ಲಿ ಸಮಗ್ರ ನಿರ್ವಹಣಾ ಕ್ರಮಗಳು ಕುರಿತು ಡಾ.ಎ.ಬಿ. ಮೋಹನ್ ಕುಮಾರ್ ಅವರೊಡನೆ ಸಂದರ್ಶನ, 9.05 ಕ್ಷಿತಿಜ–Literacy ಗುರು– ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.30 ಹಳ್ಳಿಹಾಡು, ಪ್ರಸ್ತುತಿ– ಅಬ್ದುಲ್ ರಶೀದ್

ಉಕ್ರೇನ್ ವಿರುದ್ಧ ಯುದ್ಧ
ರಷ್ಯಾದಲ್ಲಿ ಅಡುಗೆ ಅನಿಲ ಬೆಲೆಯಲ್ಲಿ 4 ಪಟ್ಟು ಹೆಚ್ಚಳ

ಸ್ತಾನ್‌ಬುಲ್,ಏ.26–ಉಕ್ರೇನ್ ವಿರುದ್ಧ ಯುದ್ಧದ ಕಾರಣದಿಂದಾಗಿ ರಷ್ಯಾದಲ್ಲಿ ಅಡುಗೆ ಅನಿಲ ಬೆಲೆಯಲ್ಲಿ ತೀವ್ರ ರೀತಿಯ ಹೆಚ್ಚಳವಾಗಿದೆ 2019ರಿಂದ ಒಂದಲ್ಲಾ ಒಂದು ಕಾರಣದಿಂದಾಗಿ ಅಡುಗೆ ಅನಿಲ ದರದಲ್ಲಿ ಏರಿಕೆಯಾಗುತ್ತಲೇ ಇದೆ.



ಏಪ್ರಿಲ್ ಆರಂಭದಲ್ಲಿ ಸುಮಾರು ನಾಲ್ಕು ಪಟ್ಟು ದರ ಹೆಚ್ಚಳದಿಂದ ಹೋಟೆಲ್, ರೆಸ್ಟೋರೆಂಟ್‌ಗಳು ಮಾಲೀಕರು ಹಾಗೂ ಗ್ರಾಹಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಹೋಟೆಲ್‌ಗೆ ಬರುವ ಗ್ರಾಹಕರು, ಮೆನು ದರ ನೋಡಿ ಹೊರ ಹೋಗುತ್ತಿದ್ದಾರೆ. 'ನಾವು ಬೇಸತ್ತಿದ್ದೀವಿ. ಸ್ವಲ್ಪ ಕಾಯ್ದು ನೋಡೋಣ, ಮಾರುಕಟ್ಟೆ ಸುಧಾರಿಸಬಹುದು, ದರಗಳು ಸ್ಥಿರವಾಗಬಹುದು ಎಂದು ನಾವು ಹೇಳಿದ್ದೆವು. ಆದರೆ, ಯಾವುದರಲ್ಲೂ ಸುಧಾರಣೆಯಾಗಿಲ್ಲ' ಎಂದು ರೆಸ್ಟೋರೆಂಟ್‌ವೊಂದರ ಅಡುಗೆ ಸಿಬ್ಬಂದಿ ಮುಹ್ಸನ್ ಅಕ್ತಾಸ್ ಹೇಳುತ್ತಾರೆ.

ವಿಶ್ವದ ಬಹುತೇಕ ರಾಷ್ಟ್ರಗಳಿಗೆ ಅಂದರೆ ಶೇ.25ರಷ್ಟು ರಷ್ಯಾದಿಂದಲೇ ಸನ್ ಫ್ಲವರ್ ಅಡುಗೆ ಅನಿಲ ಪೂರೈಕೆಯಾಗುತ್ತಿತ್ತು. ಆದರೆ, ಯುದ್ಧದಿಂದಾಗಿ ಅಡುಗೆ ಅನಿಲ ಸಾಗಾಟದಲ್ಲಿ ಅಡ್ಡಿಯುಂಟಾಗಿದೆ. ರಷ್ಯಾದ ಯುದ್ಧದಿಂದಾಗಿ ಜಾಗತಿಕ ಆಹಾರ ಪೂರೈಕೆಯಲ್ಲಿ ತೊಡಕು ಉಂಟಾಗಿದೆ. ಹಣದುಬ್ಬರ ಹೆಚ್ಚಾಗುತ್ತಿದ್ದು, ಮನೆಗೆ ದಿನನಿತ್ಯದ ವಸ್ತುಗಳ ಬೆಲೆಗಳಲ್ಲಿಯೂ ಹೆಚ್ಚಾಗುತ್ತಿದೆ. ಇದು ಬಡ ಜನರ ಜೀವನದ ಮೇಲೆ ಬರೆ ಎಳೆದಿದೆ.

ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ, ಫೆಬ್ರವರಿಯಲ್ಲಿ ವೆಜಿಟೆಬಲ್ ಆಯಿಲ್ ಬೆಲೆ ದಾಖಲೆ ಪ್ರಮಾಣದಲ್ಲಿ ಹೆಚ್ಚಾಗಿತ್ತು. ನಂತರ ಮಾರ್ಚ್‌ನಲ್ಲಿ ಇದು ಶೇ.23ರಷ್ಟು ಹೆಚ್ಚಳವಾಯಿತು. 2019ರಲ್ಲಿ ಸೋಯಾಬಿನ್ ಆಯಿಲ್ ಪ್ರತಿ ಮೆಟ್ರಿಕ್ ಟನ್ 765 ಡಾಲರ್‌ನಂತೆ ಮಾರಾಟವಾಗಿತ್ತು. ಇದು ಮಾರ್ಚ್‌ನಲ್ಲಿ ಪ್ರತಿ ಮೆಟ್ರಿಕ್ ಟನ್ ಸರಾಸರಿ 1,957 ಡಾಲರ್‌ನಷ್ಟಿತ್ತು ಎಂದು ವಿಶ್ವ ಬ್ಯಾಂಕ್ ಹೇಳಿದೆ. ಪಾಮ್ ಆಯಿಲ್ ಬೆಲೆಗಳು ಶೇ.200 ರಷ್ಟು ಹೆಚ್ಚಾಗಿದೆ ಮತ್ತು ವಿಶ್ವದ ಅಗ್ರ ಉತ್ಪಾದಕರಲ್ಲಿ ಒಂದಾದ ಇಂಡೋನೇಷ್ಯಾವು ಗುರುವಾರದಿಂದ ಅಡುಗೆ ಅನಿಲ ರಫ್ತನ್ನು ನಿರ್ಬಂಧಿಸಿದ ನಂತರ ಇದರ ದರದಲ್ಲಿ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ.

ಮತ್ತೆ ರಾಜ್ಯಕ್ಕೆ ಬರಲಿದ್ದಾರೆ ಅಮಿತ್ ಶಾ

ಬೆಂಗಳೂರು, ಏ. 26– ಚುನಾವಣೆಗೆ ವರ್ಷವಿರುವಾಗಲೇ ಗೃಹ ಸಚಿವ ಅಮಿತ್ ಶಾ ರಾಜ್ಯದತ್ತ ತನ್ನ ದೃಷ್ಟಿಯನ್ನು ನೆಟ್ಟಿದ್ದು ಮತ್ತೆ ಕರ್ನಾಟಕಕ್ಕೆ ಆಗಮಿಸಲಿದ್ದಾರೆ. ಏಪ್ರಿಲ್ 1 ರಂದು ರಾಜ್ಯಕ್ಕೆ ಬಂದು ಹೋಗಿದ್ದ ಅಮಿತ್ ಶಾ ಈಗ ಮೇ 3ಕ್ಕೆ ಮತ್ತೆ ಬರಲಿದ್ದಾರೆ. ಖೇಲೋ ಇಂಡಿಯಾ ಸಮಾರೋಪದ ನೆಪದಲ್ಲಿ ಮತ್ತೆ ಬೆಂಗಳೂರಿಗೆ ಶಾ ಆಗಮಿಸಲಿದ್ದಾರೆ. ಈ ವೇಳೆ ಮೂರು, ನಾಲ್ಕು ಕಾರ್ಯಕ್ರಮದಲ್ಲಿ ಅಮಿತ್ ಶಾ ಭಾಗವಹಿಸುವ ಸಾಧ್ಯತೆಯಿದೆ. ಮೇ 3ರಂದು ಬಸವ ಜಯಂತಿ ಇದ್ದು ಈ ವೇಳೆ ಬೆಂಗಳೂರಿನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಅಮಿತ್ ಶಾ ಭಾಗಿಯಾಗಲಿದ್ದಾರೆ. ಕಳೆದ ಬಾರಿಯ ಭೇಟಿಯಲ್ಲಿ ಸಿದ್ಧಗಂಗಾ ಕ್ಷೇತ್ರದಲ್ಲಿ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಜನ್ಮೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ಹಿಜಾಬ್ ತೀರ್ಪಿನ ವಿರುದ್ಧ ಮೇಲ್ಮನವಿ
ಅರ್ಜಿಗಳ ಪರಿಶೀಲನೆ ನಡೆಸಲು ಸುಪ್ರೀಂಕೋರ್ಟ್ ಸಮ್ಮತಿ

ನವದೆಹಲಿ: ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ನಿಷೇಧಿಸುವ ಕರ್ನಾಟಕ ಹೈಕೋರ್ಟ್ ಆದೇಶದ ವಿರುದ್ಧ ಸಲ್ಲಿಕೆಯಾಗಿರುವ ಮೇಲ್ಮನವಿಗಳನ್ನು ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಸಮ್ಮತಿ ನೀಡಿದೆ. ಹಿಜಾಬ್ ವಿವಾದ ಸಂಬಂಧ ಈ ಹಿಂದೆ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪಿನ ವಿರುದ್ಧ ಸಲ್ಲಿಸಲಾದ ಮೇಲ್ಮನವಿಯನ್ನು ನ್ಯಾಯಮೂರ್ತಿ ಎನ್‌ವಿ ರಮಣ ಅವರ ಮುಂದೆ ಪ್ರಸ್ತಾಪಿಸಲಾಯಿತು. ಮೇಲ್ಮನವಿದಾರರ ಪರವಾಗಿ ಹಿರಿಯ ವಕೀಲರಾದ ಮೀನಾಕ್ಷಿ ಅರೋರಾ ಈ ವಿಷಯವನ್ನು ಪ್ರಸ್ತಾಪಿಸಿದರು.



ಈ ವೇಳೆ ನ್ಯಾಯಮೂರ್ತಿಗಳು ನಾವು ಅರ್ಜಿಯನ್ನು ಪರಿಗಣಿಸುತ್ತೇವೆ. ಎರಡು ದಿನ ಕಾಲ ಕಾಯುವಂತೆ ಅವರು ಹೇಳಿದ್ದಾಗಿ ಬಾರ್ ಅಂಡ್ ಬೆಂಚ್ ವರದಿ ಮಾಡಿದೆ. ಹಿಜಾಬ್ ಕುರಿತ ಕರ್ನಾಟಕ ಹೈಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿಗಳನ್ನು ತುರ್ತು ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಮಾರ್ಚ್ ತಿಂಗಳಲ್ಲಿ ನಿರಾಕರಿಸಿತ್ತು. ಶಾಲಾ–ಕಾಲೇಜುಗಳ ಸಮವಸ್ತ್ರದ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ನಿರ್ದೇಶಿಸುವ ಕರ್ನಾಟಕ ಸರ್ಕಾರದ ಆದೇಶವನ್ನು ಈ ಹಿಂದೆ ಹೈಕೋರ್ಟ್ ಎತ್ತಿ ಹಿಡಿದಿತ್ತು. ನ್ಯಾಯಾಲಯದ ಈ ಆದೇಶದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಕೆಲವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು.

ಪಿಎಸ್‌ಐ ನೇಮಕಾತಿ ಹಗರಣ:
ಕಲಬುರಗಿಯಲ್ಲಿ ಮತ್ತೊಬ್ಬನ ಬಂಧನ

ಕಲಬುರಗಿ,ಏ.26–ಪಿಎಸ್‌ಐ ನೇಮಕಾತಿ ಹಗರಣದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು ಕಲಬುರಗಿಯಲ್ಲಿ ಮತ್ತೊಬ್ಬ ಆರೋಪಿ ಬಂಧಿಸಿದ್ದಾರೆ. ಈತ ಎಲೆಕ್ಟ್ರಾನಿಕ್ ಉಪಕರಣ ಬಳಕೆ ಮಾಡಿಕೊಂಡು ಪರೀಕ್ಷೆ ಬರೆದಿದ್ದಾನೆ ಎಂದು ಶಂಕಿಸಲಾಗಿದೆ.

ಕಲಬುರಗಿಯ ನಿವಾಸಿ ಎಸ್.ವಿ. ಸುನೀಲಕುಮಾರ್ ಬಂಧಿತ ಆರೋಪಿ. ಜ್ಞಾನಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯ ಪರೀಕ್ಷಾ ಕೇಂದ್ರದಲ್ಲಿಯೇ ಈತ ಪರೀಕ್ಷೆ ಬರೆದಿದ್ದ. ಕಲಬುರಗಿಯಲ್ಲಿರುವ ಸಿಐಡಿ ತಂಡ ಆರೋಪಿ ಬಂಧಿಸಿ, ವಿಚಾರಣೆ ನಡೆಸುತ್ತಿದೆ.

ಹಗರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ರುದ್ರಗೌಡ ಡಿ. ಪಾಟೀಲ ಬಂಧಿಸಲಾಗಿದೆ. ಈತನ ವಿಚಾರಣೆ ವೇಳೆ ಸಿಕ್ಕ ಮಾಹಿತಿಯಂತೆ ಸುನೀಲಕುಮಾರ್ ಬಂಧಿಸಲಾಗಿದೆ. ಎಲೆಕ್ಟ್ರಾನಿಕ್ ಉಪಕರಣ ಬಳಕೆ ಮಾಡಿಕೊಂಡು ಪರೀಕ್ಷೆ ಬರೆದಿದ್ದಾನೆ ಎಂಬ ಆರೋಪದ ಹಿನ್ನಲೆ ವಿಚಾರಣೆ ನಡೆಸಲಾಗುತ್ತಿದೆ. ದಾಖಲೆಗಳ ಪರಿಶೀಲನೆಗೆ ಹಾಜರಾಗಲು ಸುನೀಲ್‌ಕುಮಾರ್‌ಗೆ ಸಿಐಡಿ ನೋಟಿಸ್ ನೀಡಿತ್ತು. ಸೋಮವಾರ ಬೆಂಗಳೂರಿನ ಸಿಐಡಿ ಕಚೇರಿಯಲ್ಲಿ ಸುನೀಲ್ ವಿಚಾರಣೆ ಎದುರಿಸಿದ್ದರು. ವಿಚಾರಣೆ ವೇಳೆ ಸಂದೇಹ ಬಂದ ಕಾರಣ ಪೊಲೀಸರು ಬಂಧಿಸಿದ್ದಾರೆ. ಸುನೀಲಕುಮಾರ್ ಅಕ್ರಮವಾಗಿ ಪರೀಕ್ಷೆ ಬರೆಯಲು 40 ಲಕ್ಷ ರೂ. ಹಣ ನೀಡಿದ್ದಾರೆ ಎಂದು ಶಂಕಿಸಲಾಗಿದ್ದು, ಈ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕರಾಚಿ ವಿವಿ ಬಳಿ ಸ್ಫೋಟ
ಚೀನಾದ ಶಿಕ್ಷಕರಿಬ್ಬರು ಸೇರಿ ಐವರ ಸಾವು

ಇಸ್ಲಾಮಾಬಾದ್,ಏ.26–ಕರಾಚಿ ವಿಶ್ವವಿದ್ಯಾನಿಲಯದ ಕನ್ಫ್ಯೂಷಿಯಸ್ ಇನ್ಸ್ಟಿಟ್ಯೂಟ್ ಬಳಿ ನಡೆದ ಸ್ಫೋಟದಲ್ಲಿ ವ್ಯಾನ್‌ಗೆ ಬೆಂಕಿ ತಗುಲಿದ ಪರಿಣಾಮ ಇಬ್ಬರು ಚೀನಾದ ಶಿಕ್ಷಕರು ಸೇರಿದಂತೆ ಐವರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ.

ವ್ಯಾನ್ ಕರಾಚಿ ವಿವಿ ಆವರಣದಲ್ಲಿರುವ ಅವರ ನಿವಾಸದಿಂದ ಕನ್ಫ್ಯೂಷಿಯಸ್ ಇನ್ಸ್ಟಿಟ್ಯೂಟ್‌ಗೆ ಚೀನಾದ ಪ್ರಜೆಗಳನ್ನು ಹೊತ್ತೊಯ್ಯುತ್ತಿತ್ತು. ಸ್ಫೋಟದಲ್ಲಿ ಕನಿಷ್ಠ ಇಬ್ಬರು ಚೀನಾದ ಶಿಕ್ಷಕರು ಪ್ರಾಣ ಕಳೆದು ಕೊಂಡಿದ್ದಾರೆ ಎಂದು ವಿವಿ ವಕ್ತಾರರು ತಿಳಿಸಿದ್ದಾರೆ. ಸ್ಫೋಟವನ್ನು ಖಂಡಿಸಿದ ಪ್ರಧಾನಿ ಶೆಹಬಾಜ್ ಷರೀಫ್ ಸಂತ್ರಸ್ತರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ ಮತ್ತು ಗಾಯಾಳುಗಳು ಶೀಘ್ರ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ. ಸ್ಫೋಟದ ಕುರಿತಾಗಿ ತನಿಖೆ ನಡೆಸಲಾಗುತ್ತಿದೆ ಎಂದರು.

ಎಂಎಸ್‌ಪಿ ದರದಲ್ಲಿ ಭತ್ತ, ರಾಗಿ, ಜೋಳ ಸೇರಿದಂತೆ ಇನ್ನಿತರ
ಧಾನ್ಯ ಖರೀದಿಗೆ ಆಗ್ರಹಿಸಿ ರಾಜ್ಯ ರೈತ ಸಂಘ ಪ್ರತಿಭಟನೆ

ಮೈಸೂರು,ಏ.26(ಪಿಎಂ)–ಭತ್ತ, ರಾಗಿ ಮತ್ತು ಜೋಳ ಸೇರಿದಂತೆ ಇನ್ನಿತರ ಧಾನ್ಯಗಳನ್ನು ಕನಿಷ್ಠ ಬೆಂಬಲ ಬೆಲೆಯಡಿ (ಎಂಎಸ್‌ಪಿ) ಯಾವುದೇ ಮಿತಿ ಇಲ್ಲದೇ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಖರೀದಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯದಲ್ಲಿ ಭತ್ತ, ರಾಗಿ, ಜೋಳ, ಮುಸುಕಿನ ಜೋಳ ಮೊದಲಾದ ಧಾನ್ಯಗಳನ್ನು ಎಂಎಸ್‌ಪಿ ಬೆಲೆಗಿಂತಲೂ ಕಡಿಮೆ ದರಕ್ಕೆ ರೈತರಿಂದ ಖರೀದಿಸಿ ಲೂಟಿ ಮಾಡಲಾಗುತ್ತಿದೆ ಎಂದು ಆಪಾದಿಸಿದರು.

ಸಮರ್ಪಕ ವಿದ್ಯುತ್ ಪೂರೈಸುತ್ತಿಲ್ಲ: ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸದ ಕಾರಣ ಬೇಸಿಗೆ ಬಿಸಿಲಿಗೆ ಬೆಳೆಗಳು ಒಣಗುತ್ತಿದ್ದು, ರೈತರಿಗೆ ಇದರಿಂದ ನಷ್ಟವಾಗುತ್ತಿದೆ. ತಾರತಮ್ಯ ವಿದ್ಯುತ್ ನೀತಿ ವಿರೋಧಿಸಿ ವಿದ್ಯುತ್ ಬಿಲ್ ಪಾವತಿಸದೆ ಕರ ನಿರಾಕರಿಸಿದ ಚಳುವಳಿಗಾರರ ಮನೆಯ ಬಾಕಿ ಇರುವ ವಿದ್ಯುತ್ ಬಿಲ್ಲನ್ನು ಸಂಪೂರ್ಣ ಮನ್ನಾ ಮಾಡುವಂತೆ ಒತ್ತಾಯಿಸಿದ್ದ ಹಿನ್ನೆಲೆಯಲ್ಲಿ 2018ರಲ್ಲಿ ಅಂದಿನ ಸರ್ಕಾರ ಹಳೇ ಬಾಕಿಯನ್ನು ಸಂಪೂರ್ಣ ಮನ್ನಾ ಮಾಡಿತ್ತು. ಆದರೆ ಈಗಿನ ಸರ್ಕಾರ ಹಳೇ ಬಾಕಿಯನ್ನೂ ಪಾವತಿಸುವಂತೆ ಒತ್ತಡಹೇರುವ ಮೂಲಕ ವಿದ್ಯುತ್ ಸಂಪರ್ಕವನ್ನೇ ಕಡಿತಗೊಳಿಸಲು ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಯೋಜನೆಯ ವಿದ್ಯುತ್ ಸಂಪರ್ಕ ಕಡಿತ ಮಾಡುವ ಕ್ರಮ ಕೈಬಿಡಬೇಕು. ಅಲ್ಲದೆ, ಈ ಕುಟುಂಬದವರಿಗೆ ವಿಧಿಸಿರುವ ವಿದ್ಯುತ್ ಬಿಲ್ಲನ್ನು ಸಂಪೂರ್ಣ ಮನ್ನಾ ಮಾಡಬೇಕು. ಜೊತೆಗೆ ವಿದ್ಯುತ್ ಬಳಕೆಯ ಯೂನಿಟ್ ಅನ್ನು ಹೆಚ್ಚಳ ಮಾಡಿ, ಉಚಿತ ವಿದ್ಯುತ್ ನೀಡುವ ಯೋಜನೆಯನ್ನು ಮುಂದುವರೆಸಬೇಕು ಎಂದು ಆಗ್ರಹಿಸಿದರು.

ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕು. ಟ್ರ್ಯಾಕ್ಟರ್ ಹಾಗೂ ಇನ್ನಿತರ ಕೃಷಿ ಉಪಕರಣಗಳ ಗರಿಷ್ಠ ಮಾರುಕಟ್ಟೆ ಧಾರಣೆ (ಎಂಆರ್‌ಪಿ) ಅನ್ನು ಆಯಾಯ ಕಂಪನಿಗಳ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಬೇಕು.



ಮೈಸೂರು ಡಿಸಿ ಕಚೇರಿ ಎದುರು ಮಂಗಳವಾರ ರಾಜ್ಯ ರೈತ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಅಲ್ಲದೆ, ರಾಜ್ಯ ಸರ್ಕಾರ ಇದರ ಮೇಲೆ ಸಂಪೂರ್ಣ ಹಿಡಿತ ಸಾಧಿಸಬೇಕು. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೊಳಿಸಬೇಕು. ರೈತರ ಜಮೀನು ಖಾತೆಯ ಪೋಡಿ ಮತ್ತು ಹದ್ದುಬಸ್ತು ಮಾಡಲು ಶುಲ್ಕವನ್ನು ಅಧಿಕ ಪ್ರಮಾಣದಲ್ಲಿ ಹೆಚ್ಚಿಸಿದ್ದು, ಇದನ್ನು ಇಳಿಸಬೇಕು ಎಂದು ಒತ್ತಾಯಿಸಿದರು.

ಗ್ರಾಮೀಣ ಭಾಗದಲ್ಲಿ ಮನೆಯ ಅಥವಾ ಖಾಲಿ ನಿವೇಶನದ ಇ–ಸ್ವತ್ತು ಪಡೆಯಲು ಅಧಿಕ ಪ್ರಮಾಣದ ತೆರಿಗೆ ಪಾವತಿಗೆ ಒತ್ತಡ ಹೇರುವುದನ್ನು ಕೈಬಿಡಬೇಕು. ರೈತ ಚಳುವಳಿಗಾರರ ಮೇಲೆ ಸುಳ್ಳು ಮೊಕದ್ದಮೆ ದಾಖಲಿಸುತ್ತಿದ್ದು, ಇದನ್ನು ಕೈಬಿಟ್ಟು ಈಗಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕು. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಕೃಷಿ ಕ್ಷೇತ್ರಕ್ಕೂ ವಿಸ್ತರಿಸಬೇಕು. ಸಮರ್ಪಕವಾಗಿ ಬಿತ್ತನೆ ಬೀಜ ಪೂರೈಸಬೇಕು. ನಿಗದಿತ ಕೋಟಾಕ್ಕಿಂತ ಕಡಿಮೆ ತಂಬಾಕು ಮಾರಾಟ ಮಾಡಿದ ಬೆಳಗಾರರಿಗೆ ಪರವಾನಗಿ ನವೀಕರಣ ವೇಳೆ ವಿಧಿಸುತ್ತಿರುವ ದಂಡದ ಕ್ರಮ ಕೈಬಿಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರಸಗೊಬ್ಬರದ ಬೆಲೆ ಇಳಿಸಬೇಕು. ದರಖಾಸ್ತು ಅರ್ಜಿ ಸಲ್ಲಿಸಲು ಮತ್ತೊಮ್ಮೆ ಅವಕಾಶ ಕಲ್ಪಿಸಿ, ಮಂಜೂರಾದ ಭೂಮಿಯನ್ನು ದುರಸ್ತಿಪಡಿಸಬೇಕು. ಹುಣಸೂರು ತಾಲೂಕಿನ ಉದ್ದೂರು ಕಾವಲ್ ಸೊಸೈಟಿಯ ಜಮೀನು ಹೊಂದಿರುವ ಸಂಬಂಧ ಉಳಿದ ರೈತರಿಗೂ ಸಾಗುವಳಿ ಪತ್ರ ನೀಡಲು ಜಿಲ್ಲಾಧಿಕಾರಿಗಳು ಕ್ರಮವಹಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಖರೀದಿ ಕೇಂದ್ರದಲ್ಲಿ ಖರೀದಿಸುವ ಬೆಳೆಗಳಿಗೆ ಮಾತ್ರ ಎಂಎಸ್‌ಪಿ ಅನ್ವಯ ಮಾಡುತ್ತಿದ್ದು, ಉಳಿದ ಬೆಳೆಗಳಿಗೆ ಮಾಡುತ್ತಿಲ್ಲ. ಇದು ಸರಿಯಲ್ಲ. ಎಲ್ಲದಕ್ಕೂ ಎಂಎಸ್‌ಪಿ ಅನ್ವಯ ಮಾಡಬೇಕು. ಜೊತೆಗೆ ಖರೀದಿ ಕೇಂದ್ರಗಳಲ್ಲಿ ಇಂತಿಷ್ಟು ಪ್ರಮಾಣದಲ್ಲಿ ಮಾತ್ರ ಖರೀದಿಸುವ ಮಿತಿಯನ್ನು ಕೈಬಿಡಬೇಕು. ಅಲ್ಲದೆ, ಎಲ್ಲಾ ಬೆಳೆಗಳನ್ನು ಎಂಎಸ್‌ಪಿ ಬೆಲೆಯಲ್ಲಿ ಸರ್ಕಾರ ಖರೀದಿ ಮಾಡಬೇಕು ಎಂದು ಒತ್ತಾಯಿಸಿದರು.

ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಜಿಲ್ಲಾ ಮಹಿಳಾ ಅಧ್ಯಕ್ಷೆ ನೇತ್ರಾವತಿ, ವಿಭಾಗೀಯ ಸಂಘಟನಾ ಕಾರ್ಯದರ್ಶಿ ಸರಗೂರು ನಟರಾಜ್, ಮುಖಂಡರಾದ ಮರಂಕಯ್ಯ, ಮಂಡಕಳ್ಳಿ ಮಹೇಶ್, ದಸಂಸದ ಮುಖಂಡರಾದ ಚೋರನಹಳ್ಳಿ ಶಿವಣ್ಣ, ಕಲ್ಲಹಳ್ಳಿ ಕುಮಾರ್ ಸೇರಿದಂತೆ ನೂರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇನ್ನಿತರೆ ಬೇಡಿಕೆ ಈಡೇರಿಸಲೂ ಒತ್ತಾಯ

ಏ.28ರಂದು ಕೈಗಾರಿಕಾ ಸಚಿವರ ಕಾರ್ಯಕ್ರಮ ಸ್ಥಳದಲ್ಲಿ ಪ್ರತಿಭಟನೆ

ಮೈಸೂರು: ಕೋಚನಹಳ್ಳಿಯಲ್ಲಿ ರೈತರ ಭೂಮಿ ಖರೀದಿಯಲ್ಲಿ ಭಾರೀ ಅನ್ಯಾಯ ನಡೆದಿದ್ದು, ರೈತರಿಗೆ ನಾಳೆಯೊಳಗೆ ನ್ಯಾಯ ದೊರಕಿಸಿಕೊಡದಿದ್ದರೆ, ಏ.28 ರಂದು ಮೈಸೂರಿನಲ್ಲಿ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಪಾಲ್ಗೊಳ್ಳುವ ಕೈಗಾರಿಕಾ ಅದಾಲತ್ ಸ್ಥಳದಲ್ಲಿ ಪ್ರತಿಭಟನೆ ನಡೆಸಲಾಗುವುದೆಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಸಿದರು.

ಕೋಚನಹಳ್ಳಿ ರೈತರು ನ್ಯಾಯಕ್ಕೆ ಆಗ್ರಹಿಸಿ ವರ್ಷಕ್ಕೂ ಅಧಿಕ ಕಾಲದಿಂದಲೂ ಹೋರಾಟ ಮಾಡುತ್ತಿದ್ದಾರೆ. ಈಗಲಾದರೂ ಶೀಘ್ರ ನ್ಯಾಯ ದೊರಕಿಸಿಕೊಡಬೇಕು. ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಅಂದು ಕೈಗಾರಿಕಾ ಅದಾಲತ್ ನಡೆಯಲಿದ್ದು, ಇದೇ ವೇಳೆ ಭವನದ ಹೊರಾವರಣದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.

ಶೀಘ್ರದಲ್ಲಿ ಭ್ರಷ್ಟಾಚಾರದ ವಿರುದ್ಧ ಸರ್ಕಾರಿ ಕಚೇರಿಗಳಲ್ಲಿ ಬಾರ್‌ಕೋಲ್ ಚಳುವಳಿ ಮಾಡಲಿದ್ದೇವೆ. ಬಾರ್‌ಕೋಲ್ ಸಾಂಕೇತಿಕವಾಗಿಯಷ್ಟೇ ಹಿಡಿದುಕೊಳ್ಳಲಿದ್ದೇವೆ. 31 ಜಿಲ್ಲೆಗಳಲ್ಲಿ ಇಂದು ಪ್ರತಿಭಟನೆ ನಡೆಸಿದ್ದು, ಸರ್ಕಾರ ಸ್ಪಂದಿಸದಿದ್ದರೆ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ದಿಗ್ಬಂಧನ ಹಾಕುವ ಹೋರಾಟ ನಡೆಸಲಿದ್ದೇವೆ ಎಂದರು.

IN THE COURT OF THE IV ADDL., CIVIL JUDGE (SR. DN) AND C.J.M AT MYSURU

F.D.P.No.81/2018

PETITIONERS : Padma and others V/s RESPONDENTS : Mahadeva and others D6. Sri. Umesh S/o Sannaramegowda Aged about 42 years.R/at Ballenahalli Village,Bookanakere Hobli, K.R.Pete Taluk,Mandya District.

PAPER PUBLICATION

Whereas the Petitioners institute the petition against the respondents.You are hereby summoned to appear before this Hon'ble Court in person or by a pleader duly instructed. and able to answer all material questions relating to the petition, or who shall be accompanied by some person able to answer all such questions, on 21.06.2022 at 11.00 O'clock to answer the claim. and you are direct to produce on that day all the documents upon which you intend to rely in support of your defense.Take notice that, in default of your appearance on the day before mentioned, the petition will be heard and determined in your absence as ex-parte. Given under my hand and seal of the court 21th day of June 2022

C-SCHEDULE: The Land bearing Sy.77/1 measuring 20 guntas situated at Varakodu Village. Varuna Hobli, Mysore Taluk, which is bounded on: East by : Land of Thamadigowda. West by : Land of Karunesha. South by: Land of Marigowda, North by :Land of Karunesha. **D-SCHEDULE:** The Land bearing Sy.77/5 measuring 21 guntas situated at Varakodu Village, Varuna Hobli, Mysore Taluk, which is boundedon: East by : Land of Karunesha, West by : Land of Nanjundegowda. Southby: Land of Karunesha. North by : Road.

E-SCHEDULE: The house No.21 measuring East-West 33½ feet North-South, 23½ feet situated at badagalahundi village, varuna hobli, Mysore Taluk, Which is bounded on: East by: House of Halappa, West by:Road South by : Road . North by:House of Thamalamma .

Sd/-
By Order of the Court
Chief Ministerial Officer
Principal Senior Civil Judge and C.J.M At Mysuru

Sd/-
Ramakrishna B.A., LL.B.,
Advocate. No.913/1990-91.
#1131/1A, 1st Floor,Dr.B.R. Ambedkar Road,

ನಕ್ಕರೆ ಅದೇ ಸ್ವರ್ಗ

ಭಾಷಣಕಾರ : "ನಾನು ಎಷ್ಟು ಹೊತ್ತು ಭಾಷಣ ಮಾಡಬಹುದು?"
ಸಭಿಕರೋರ್ವರು : "ನೀವು ಎಷ್ಟು ಹೊತ್ತು ಬೇಕಾದರೂ ಭಾಷಣ ಮಾಡಿ ಸಾರ್, ನಾವು ಅರ್ಧಗಂಟೆ ಮಾತ್ರ ಕೂರ್ತ್ಕೋತೀವಿ"

ಮೈಸೂರು ಮಿತ್ರ

ಬುಧವಾರ, 27 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಂದು ಉತ್ತಮ ಆರಂಭವು ಯಾವಾಗಲು ಉತ್ತಮ ಅಂತ್ಯ ಕಾಣುತ್ತದೆ.

– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತುಪ್ಪ ತಿಂದ ಮಾತಿಗೆ ತಪ್ಪು ಮಾತು ಬಂತು

ನಿಮ್ಮ ಪತ್ರಗಳು

ಪರೀಕ್ಷೆಗಳೇ ಕೊನೆ ಅಲ್ಲ, ಸೋತರು, ಗೆದ್ದರು ಎದುರಿಸುವ ಮನಸ್ಥಿತಿ ರೂಢಿಸಿಕೊಳ್ಳಿ

ಮಾನ್ಯರೆ,

ಪರೀಕ್ಷೆ ಎಂಬುದು ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆ ಘಟ್ಟದಲ್ಲಿ ಮಹತ್ತರವಾದ ಪಾತ್ರವಾಗಿದೆ. ಕೋವಿಡ್‌ನಿಂದಾಗಿ ಮಕ್ಕಳ ಕಲಿಕಾ ವಿಧಾನ ಸಂಪೂರ್ಣ ಬದಲಾಗಿದೆ. ಇದರ ನಡುವೆ ಮೊದಲಿನಂತೆ ಗಮನವಿಟ್ಟು ಓದಲು ಏಕಾಗ್ರತೆ ತುಂಬಾನೇ ಮುಖ್ಯವಾಗಿದೆ. ಏ. 22ರಿಂದ ಪಿ.ಯು.ಸಿ ಪರೀಕ್ಷೆ ಆರಂಭವಾಗಿದೆ. ಎಲ್ಲಾ ಮಕ್ಕಳಿಗೆ ಪರೀಕ್ಷೆ ಎಂದೊಡನೆ ಭಯ ಆವರಿಸುವುದು ಸಾಮಾನ್ಯ. ಎಲ್ಲಿ ಫೇಲಾಗುವೇನೊ, ಕಡಿಮೆ ಅಂಕ ಗಳಿಸುವೆನೊ ಎಂಬ ಆತಂಕಕ್ಕೆ ಒಳಗಾಗುತ್ತಿದ್ದಾರೆ. ಒಳ್ಳೆ ಅಂಕ ಗಳಿಸಲು ನಿದ್ದೆಗೆಟ್ಟು ಓದಿರುತ್ತಾರೆ ಅಥವಾ ಪೋಷಕರು ಮಕ್ಕಳ ಮೇಲೆ ಅಂಕಗಳ ವಿಷಯದಲ್ಲಿ ಹೇರುವ ಒತ್ತಡ ಎಲ್ಲವೂ ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುತ್ತದೆ. ಪರೀಕ್ಷೆಗೆ ಸಿದ್ಧರಾಗಲು ಮಕ್ಕಳ ಮನಸ್ಸು ಎಷ್ಟು ಮುಖ್ಯವೋ ಮಕ್ಕಳ ಸುತ್ತಮುತ್ತಲಿನ ವಾತಾವರಣ ಕೂಡ ಅಷ್ಟೇ ಮುಖ್ಯವಾಗಿದೆ. ಮಕ್ಕಳು ಅಥವಾ ಪೋಷಕರು ಬೇರೆಯವರಿಗೆ ಹೋಲಿಕೆ ಮಾಡಿ ನೋಡುವುದನ್ನು ಬಿಡಬೇಕು. ಒಬ್ಬರಂತೆ ಇನ್ನೊಬ್ಬರ ಸಾಮರ್ಥ್ಯ ಇರಲು ಸಾಧ್ಯವಿಲ್ಲ. ಮಕ್ಕಳಿಗೆ ತಮ್ಮ ಶ್ರಮ, ಸಾಮರ್ಥ್ಯದ ಮೇಲೆ ಮೊದಲು ನಂಬಿಕೆ ಇರಬೇಕು. ಪೋಷಕರು ಮಕ್ಕಳ ಓದಿಗೆ ಅವಶ್ಯವಾಗಿರುವುದನ್ನು ಒದಗಿಸಿ ಬೆಂಬಲವಾಗಿರಬೇಕು. ನಂತರ ಓದುವ ವಿಶ್ವಾಸ ಮಕ್ಕಳಲ್ಲಿ ಹೆಚ್ಚಾಗುತ್ತದೆ. ಪರೀಕ್ಷೆಯಲ್ಲಿ ಪಾಸಾದವರೆಲ್ಲ ಬುದ್ಧಿವಂತರಲ್ಲ, ಫೇಲಾದವರೆಲ್ಲಾ ದಡ್ಡರಲ್ಲ. ಅವರ ಓದುವ ಕ್ರಮ ಮುಖ್ಯವಾಗಿರುತ್ತದೆ. ಯಾವ ವಿದ್ಯಾರ್ಥಿ ಮೊದಲಿನಿಂದಲು ಅಭ್ಯಾಸ ಮಾಡಿರುವುದಿಲ್ಲವೊ ಆ ಮಕ್ಕಳಲ್ಲಿ ಆತ್ಮವಿಶ್ವಾಸ ಕಡಿಮೆ ಇರುತ್ತದೆ. ಮೊದಲಿನಿಂದಲೂ ಅಭ್ಯಾಸ ಮಾಡಿದ್ದರೆ ಪರೀಕ್ಷೆ ಸಮಯದಲ್ಲಿ ಮನನ ಮಾಡಿಕೊಳ್ಳಲು ಸುಲಭವಾಗುತ್ತದೆ. ಶಾಂತ ಮನಸ್ಸಿನಿಂದ ಯಾವುದೇ ವಿಷಯ ಓದುತ್ತಿದ್ದರೂ ಪಾಯಿಂಟ್ಸ್ ಮಾಡಿಕೊಂಡು ಅಭ್ಯಾಸ ಮಾಡುವುದರಿಂದ ನೆನಪು ಮಾಡಿಕೊಳ್ಳುವುದು ಸುಲಭವಾಗುತ್ತದೆ. ಪರೀಕ್ಷೆಗೆ ಸಮಯವೆಂಬುದು ತುಂಬಾ ಮುಖ್ಯ. ಆಸಕ್ತಿ ಕಡಿಮೆ ಇರುವ ವಿಷಯಕ್ಕೆ ಬೇರೆ ವಿಷಯಗಳಿಗಿಂತ ಹೆಚ್ಚಿನ ಸಮಯ ಮೀಸಲಿಡಿ. ಹಳೆ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಿ. ಪರೀಕ್ಷೆ ಕೊಠಡಿಯಲ್ಲಿ ಪ್ರಶ್ನೆ ಪತ್ರಿಕೆ ಕೊಟ್ಟ ತಕ್ಷಣ ಪ್ರಶ್ನೆಗಳನ್ನು ಸಂಪೂರ್ಣವಾಗಿ ಓದಿ ಅರ್ಥ ಮಾಡಿಕೊಂಡು ನಂತರ ಗೊತ್ತಿರುವ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ ಬೇರೆ ಪ್ರಶ್ನೆಗಳ ಕಡೆ ಗಮನಹರಿಸಿ ಸಮಯದ ಕಡೆ ಗಮನ ನೀಡಿ. ಪರೀಕ್ಷೆಗಳೇ ಕೊನೆ ಅಲ್ಲ, ಸೋತರು, ಗೆದ್ದರು ಎದುರಿಸುವ ಮನಸ್ಥಿತಿ ರೂಢಿಸಿಕೊಳ್ಳಬೇಕು.

–ಅನುಷ ಬಿ.ಎನ್, ಕಾಳೇನಹಳ್ಳಿ

ಸ್ಮಾರಕಗಳಾಗುತ್ತಿವೆ ವೃತ್ತಗಳು

ಮಾನ್ಯರೆ,

ಮೈಸೂರಲ್ಲಿ ಇತ್ತೀಚೆಗೆ ಸರ್ಕಲ್‌ಗಳು (ವೃತ್ತಗಳು) ಸ್ಮಾರಕಗಳಾಗುತ್ತಿವೆ. ಆಯಾ ಪ್ರದೇಶದಲ್ಲಿ ಯಾರೇ ಸಾವನ್ನಪ್ಪಿದರೆ, ಅವರ ಫೋಟೋದೊಂದಿಗೆ ಶ್ರದ್ಧಾಂಜಲಿ ಸಲ್ಲಿಸುವ ಫಲಕ ಆ ಕ್ಷಣದಲ್ಲಿ ಪ್ರಮುಖ ವೃತ್ತದಲ್ಲಿ ಪ್ರದರ್ಶನಗೊಳ್ಳುತ್ತದೆ. ಸಾವಿನ ವಿಷಯದಲ್ಲಿ ಎಲ್ಲರಿಗೂ ನೋವಿದೆ, ನಿಜ. ಆದರೆ ಅದನ್ನು ಸಾರ್ವಜನಿಕ ಸ್ಥಳದಲ್ಲಿ ಅದೂ ವೃತ್ತದಲ್ಲಿ ಹಾಕಿ, ಅಂದಗೆಡಿಸುವುದು ಯಾವ ನ್ಯಾಯ? ನಗರ ಪಾಲಿಕೆ ಇದಕ್ಕೆ ಒಂದು ಪರಿಹಾರ ಕಂಡುಕೊಳ್ಳಬೇಕಿತ್ತು. ಆದರೆ ಅದೂ ಸಹ ನನಗೂ, ಈ ವಿಷಯಕ್ಕೂ ಸಂಬಂಧ ಇಲ್ಲ ಎಂದು ಕೈಕಟ್ಟಿ ಕೂತಿರುವಂತಿದೆ. ಸಾವಿನ ವಿಷಯದಲ್ಲಿ ಸಾಂತ್ವನದ ಮಾರ್ಗವಾಗಿ ಇದಕ್ಕೆ ಪ್ರದೇಶವಾರು ಫಲಕಗಳ ವ್ಯವಸ್ಥೆ ಮಾಡಬಹುದಿತ್ತು. ಅದರ ಬಗ್ಗೆ ಪಾಲಿಕೆ ಚಿಂತನೆ ಕೂಡ ನಡೆಸಿಲ್ಲವೇನೋ? ಮೊದಲಿಗೆ ನಗರ ಪಾಲಿಕೆ ಅಧಿಕಾರಿ ವರ್ಗ ಹಾಗೂ ಜನಪ್ರತಿನಿಧಿಗಳಿಗೆ ಸಾಂಸ್ಕೃತಿಕ ನಗರಿಯ ಅಂದ ಕಾಪಾಡಿಕೊಂಡು ಹೋಗುವ ಬದ್ಧತೆಯೇ ಇಲ್ಲದಂತಾಗಿದೆ. ಮೈಸೂರೆಂಬ ಐತಿಹಾಸಿಕ ನಗರವನ್ನು ಆ ತಾಯಿ ಚಾಮುಂಡೇಶ್ವರಿಯೇ ಕಾಪಾಡಬೇಕಿದೆ.

– ನರೇಶ್,ಯಾದವಗಿರಿ, ಮೈಸೂರು.

ದೇವಲಾಪುರದಲ್ಲಿ ಬಸ್ ನಿಲುಗಡೆ ಕಲ್ಪಿಸಿ

ಮಾನ್ಯರೇ,

ಸರಗೂರಿನಿಂದ ಮೈಸೂರಿಗೆ ಹೋಗುವ ಬಸ್ಸುಗಳು ದೇವಲಾಪುರ ಗ್ರಾಮದಲ್ಲಿ ನಿಲ್ಲಿಸುತ್ತಿಲ್ಲ. ಆ ಕಾರಣದಿಂದಾಗಿ ಸರಿಯಾದ ಸಮಯಕ್ಕೆ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ತೆರಳಲು ಆಗುತ್ತಿಲ್ಲ. ಅಲ್ಲದೆ, ಕಾರ್ಮಿಕರು ತಮ್ಮ ಕೆಲಸಗಳಿಗೆ ರೈತರು ತಾವು ಬೆಳೆದ ಹಣ್ಣು ತರಕಾರಿಗಳನ್ನು ತೆಗೆದುಕೊಂಡು ಹೋಗಲು ತುಂಬಾ ತೊಂದರೆಯಾಗಿದೆ. ಆದ್ದರಿಂದ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ದೇವಲಾಪುರಕ್ಕೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆ ಮನವಿ.

–ಸಹನ ಡಿ.ಎಂ., ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು

ಶಾಲಾ ಶುಲ್ಕ ಅನಗತ್ಯ ಒತ್ತಡ ಬೇಡ

ಮಾನ್ಯರೆ,

ಪ್ರಸಕ್ತ ಶೈಕ್ಷಣಿಕ ವರ್ಷ ಮುಗಿಯುವ ಹಂತ ತಲುಪಿದ್ದು, ಹೊಸ ಶೈಕ್ಷಣಿಕ ವರ್ಷ ಆರಂಭಕ್ಕೆ ಕ್ಷಣಗಣನೆ ಆರಂಭವಾಗಿದೆ. ಶಾಲಾ ದಾಖಲಾತಿ, ಪ್ರವೇಶ ಶುಲ್ಕ, ಸಮವಸ್ತ್ರ ಶುಲ್ಕ, ಡೊನೇಷನ್ ಮುಂತಾದ ಚಟುವಟಿಕೆಗಳು ಆರಂಭವಾಗಲಿದೆ. ಕೊರೊನಾ ಹಾವಳಿಯಿಂದ ಶೈಕ್ಷಣಿಕ ವರ್ಷ ಅದಲು ಬದಲಾಗಿದ್ದು, ಪೋಷಕರು ಮತ್ತು ವಿದ್ಯಾರ್ಥಿಗಳಲ್ಲಿ ಹಣ ಹೊಂದಿಸಿಕೊಳ್ಳುವ ಬಗ್ಗೆ ಗಮನಹರಿಸಬೇಕಾದ ಅವಶ್ಯಕತೆ ಇದೆ.

ಕೊರೊನಾ ಕಾರಣದಿಂದ ಹಲವಾರು ಜನರು ಉದ್ಯೋಗವಿಲ್ಲದೆ ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದಾರೆ. ಇಂತಹ ಸಮಯದಲ್ಲಿ ಖಾಸಗಿ ಶಾಲೆಗಳು ಮಕ್ಕಳ ಶಿಕ್ಷಣದ ವಿಚಾರವಾಗಿ ಹಣಕ್ಕೆ ಪ್ರಾಮುಖ್ಯತೆ ಕೊಡದೆ, ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಪೋಷಕರ ಬಳಿ ನ್ಯಾಯಯುತವಾಗಿ, ಯಾವುದೇ ಒತ್ತಡ ಹೇರದೇ ವಿಶೇಷವಾಗಿ ಬಡವರಿಗೆ ಹಣ ಕಟ್ಟಲು ಹೆಚ್ಚಿನ ಸಮಯಾವಕಾಶ ನೀಡಬೇಕು.

ಕೂಲಿ ಮಾಡಿ ಜೀವನ ಮಾಡುವ ಜನ, ದಿನದ ದುಡಿಮೆ ಮಾಡಿ ಜೀವನ ಮಾಡುವ ಜನಕ್ಕೆ ಖಾಸಗಿ ಶಾಲೆಯವರು ರಿಯಾಯಿತಿ ನೀಡಬೇಕು. ಬಡ ಮಕ್ಕಳ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಬೇಕು. ಇದರಿಂದ ಅವರ ಮೇಲೆ ಅನಗತ್ಯ ಹಣದ ಒತ್ತಡ ಕಡಿಮೆಯಾಗುತ್ತದೆ ಮತ್ತು ಮಕ್ಕಳಿಗೆ ಉಚಿತ ಸಮವಸ್ತ್ರ, ಪುಸ್ತಕ, ಮಧ್ಯಾಹ್ನದ ಊಟ ಉಚಿತವಾಗಿ ದೊರೆಯುತ್ತದೆ. ಹಲವಾರು ಪ್ರಸಿದ್ಧ ವ್ಯಕ್ತಿಗಳು ಸರ್ಕಾರಿ ಶಾಲೆಯಲ್ಲಿ ಓದಿ ದೇಶ ಮೆಚ್ಚುವಂತಹ ಕೆಲಸ ಮಾಡಿದ್ದಾರೆ. ಉದಾಹರಣೆಗೆ ಸರ್ ಎಂ ವಿಶ್ವೇಶ್ವರಯ್ಯ ಸಹ ಸರ್ಕಾರಿ ಶಾಲೆಯಲ್ಲಿ ಓದಿ ಜಗತ್ತಿನ ಶ್ರೇಷ್ಠ ಇಂಜಿನಿಯರ್ ಎಂದು ಹೆಸರು ಗಳಿಸಿದರು. ಅನಗತ್ಯವಾಗಿ ಪೋಷಕರ ಮೇಲೆ ಶಾಲಾ ಶುಲ್ಕಕ್ಕೆ ಒತ್ತಡ ಹೇರುವ ಖಾಸಗಿ ಶಾಲೆಗಳನ್ನು ಸರ್ಕಾರ ನಿಯಂತ್ರಿಸಬೇಕು.

–ರಾ. ಸುಮಾ ಭಟ್, ಚಿಕ್ಕಮಗಳೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಫೇಸ್‌ಬುಕ್ ಪ್ರಪಂಚ

ಫೇಸ್‌ಬುಕ್, ಟ್ವಿಟರ್, ವಾಟ್ಸಪ್ ಇತ್ಯಾದಿಗಳೆಲ್ಲ ಈಚೆಗೆ ಬಂದು ನಮ್ಮ ಬದುಕಿನಲ್ಲಿ ಸೇರಿಕೊಂಡ ಅಂಶಗಳಾದರೂ ಅವುಗಳಿಲ್ಲದೆ ನಾವು ಬಾಳಲಾರೆವು ಎನ್ನುಷ್ಟು ಮಟ್ಟಿಗೆ ಅವು ಬೆಳೆದಿವೆ. ಅವುಗಳದೇ ಪ್ರಪಂಚಗಳು ಮನುಷ್ಯರ ಮನಸ್ಸುಗಳಲ್ಲಿ ಹುಟ್ಟಿವೆ. ಶ್ರೀ ಜಯಪ್ರಕಾಶರಾವ್ ಪುತ್ತೂರು ಅವರು ರಚಿಸಿರುವ, ಸಪ್ನ ಬುಕ್‌ಹೌಸ್ ಅವರು ಪ್ರಕಟಿಸಿರುವ ಫೇಸ್‌ಬುಕ್ ಪ್ರಪಂಚ ಎಂಬ ಪುಸ್ತಕವನ್ನು ನೋಡಿದಾಗ ಅದರ ಬಗೆಗೆ ನಾಲ್ಕು ಮಾತು ಬರೆಯೋಣವೆನಿಸಿತು. ಅದರ ಫಲ ಈ ಲೇಖನ.

ಇದು ಫೇಸ್‌ಬುಕ್ಕಿನ ವ್ಯಾಪ್ತಿಯನ್ನೋ ಮಹಿಮೆಯನ್ನೋ ವರ್ಣಿಸುವ ಪುಸ್ತಕವಲ್ಲ. ಜಯಪ್ರಕಾಶ ರಾವ್ ಅವರು Saluting our Elders ಎಂಬ ಶೀರ್ಷಿಕೆಯಲ್ಲಿ ಹಿರಿಯರ ಬಗೆಗೆ ಬರೆದ ಫೇಸ್‌ಬುಕ್ ಲೇಖನಗಳನ್ನು ಪರಿಚಯಾತ್ಮಕ ಪ್ರಬಂಧಗಳನ್ನಾಗಿ ಪರಿವರ್ತಿಸಿ ಪುಸ್ತಕ ರೂಪದಲ್ಲಿ ಕೊಟ್ಟಿರುವ ಕೊಡುಗೆ. ಇದರಲ್ಲಿ ಉನ್ನತ ಉದಾರ ವ್ಯಕ್ತಿತ್ವವನ್ನುಳ್ಳ ಐವತ್ತೆಂಟು ಹಿರಿಯರ ಅಂತರಂಗ ದರ್ಶನವುಳ್ಳ ಲೇಖನಗಳು ಅಡಕಗೊಂಡಿವೆ. ಅವರಲ್ಲಿ ಕೆಲವರು ನನಗೆ ಪರಿಚಿತರು. ಹೆಚ್ಚು ಸಂಖ್ಯೆಯವರು ಅಪರಿಚಿತರು. ಆದರೆ ಒಬ್ಬೊಬ್ಬರ ಬಗೆಗೆ ಇರುವ ಪುಟ್ಟ ಲೇಖನಗಳನ್ನು ಓದಿದಾಗಲೂ ಅವರು ನಮಗೆ ಸುಪರಿಚಿತರಾಗಿ ಬಿಡುತ್ತಾರೆ. ಅದಕ್ಕೆ ಕಾರಣ ಜಯಪ್ರಕಾಶರ ಪಳಗಿದ ಬರೆಹ. ವ್ಯಕ್ತಿಚಿತ್ರವನ್ನು ಕಟ್ಟಿಕೊಡಲು ಭಾಷೆಯನ್ನು ಹೇಗೆ ಬಳಸಿಕೊಳ್ಳಬೇಕು, ಅದರ ನುಡಿಗಟ್ಟುಗಳನ್ನು ಹೇಗೆ ದುಡಿಸಿಕೊಳ್ಳಬೇಕು ಎಂಬುದು ಅವರಿಗೆ ಗೊತ್ತು. ನೂರು ಪುಟಗಳ ಪುಸ್ತಕ ಮಾಡುವ ಕೆಲಸವನ್ನು ಮೂರು ಪುಟಗಳ ಕಿರು ಲೇಖನ ಮಾಡಬಲ್ಲದು ಎಂದು ಅವರು ತೋರಿಸಿ ಕೊಟ್ಟಿದ್ದಾರೆ. Brevity is the soul of wit ಎಂಬ ಗಾದೆ ಇಲ್ಲಿ ನೆನಪಿಗೆ ಬರುತ್ತದೆ. ಇಲ್ಲಿ ನಮಗೆ ವಿಶ್ವದ ಶ್ರೇಷ್ಠ ವಿಜ್ಞಾನಿಗಳೂ, ಕೇವಲ ಪೊಲೀಸ್ ದಫೇದಾರ್ ಆಗಿದ್ದವರೂ ಅಪ್ರತಿಮ ಪ್ರತಿಭಾವಂತರೂ ಜನಪ್ರಿಯ ಕಲಾವಿದರೂ ಆತ್ಮೀಯರೇ ಆಗಿಬಿಡುತ್ತಾರೆ.

ಜಯಪ್ರಕಾಶರ ಬರವಣಿಗೆಯಲ್ಲಿ ನಾನು ಹೆಚ್ಚು ಇಷ್ಟಪಡುವ ಅಂಶವೇನೆಂದರೆ ರೊದ್ದಂ ನರಸಿಂಹ ಅವರಂತಹ ದೊಡ್ಡ ವಿಜ್ಞಾನಿಯನ್ನು ಪರಿಚಯಿಸುವಾಗ ತೋರಿಸುವ ಶ್ರದ್ಧೆ, ಅದರ, ಪ್ರೀತಿಗಳನ್ನು, ಎಲೆಮರೆಯ ಕಾಯಿಗಳೆನ್ನಬಹುದಾದ ದಫೇದಾರ್ ಕೃಷ್ಣಮೂರ್ತಿ, ಸಾಹಿತ್ಯ ಪ್ರಚಾರಕ ಕು.ಗೋ, ಗಾಂಧಿವಾದಿ ಕೋಚಣ್ಣ ರೈ ಇತರರುಗಳನ್ನು ಪರಿಚಯಿಸುವಾಗಲೂ ತೋರಿಸುತ್ತಾರೆ. ಪಾಂಡಿತ್ಯ ಪ್ರದರ್ಶನಕ್ಕಾಗಿ ಆಡಂಬರದ ಶೈಲಿಯನ್ನು ಇವರು ಎಲ್ಲೂ ಆಶ್ರಯಿಸಿಲ್ಲ. ಅವರು ಕೊಡುವ ವ್ಯಕ್ತಿಚಿತ್ರಣಕ್ಕೆ ಒಂದು ಉದಾಹರಣೆ–

"ಸಾಹಿತಿ ಎನ್.ನಾರಾಯಣ ಬಲ್ಲಾಳ ಪಾದರಸದಂತೆ ಚುರುಕುತನದ ವ್ಯಕ್ತಿ. ನಗು ಮುಖದ ಎತ್ತರ ನಿಲುವಿನ ಸುಂದರ ಸ್ನೇಹಜೀವಿ. ಮಾತಿನ ಮೋಡಿ ಮತ್ತು ಬಿಗುಮಾನವಿಲ್ಲದ ಆತ್ಮೀಯತೆಯಿಂದ ಎಲ್ಲರನ್ನೂ ತಮ್ಮತ್ತ ಆಕರ್ಷಿಸುವ ವ್ಯಕ್ತಿತ್ವ. ಪರೋಪಕಾರಿ. ಜೀವನದಲ್ಲಿ ನಡೆದ ಘಟನೆಗಳನ್ನು ಮರೆಯದೇ ಆಗಾಗ ಹಿತೈಷಿಗಳೊಂದಿಗೆ ಪ್ರಸ್ತಾಪಿಸುವ ಸಹೃದಯ. ಉಡುಪಿಯಲ್ಲಿ ಬಲ್ಲಾಳರು ಮಾತನಾಡಿಸದ ವ್ಯಕ್ತಿಯಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡ ಅಪರೂಪದ ವ್ಯಕ್ತಿ ಬಲ್ಲಾಳರು. ಇದುವರೆಗೆ ಸುಮಾರು 15 ಕೃತಿಗಳನ್ನು ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಕರ್ನಾಟಕದ ಸಾಹಿತಿ ಮಾಹಿತಿ ಕೋಶಗಳ 10 ಭಾಗಗಳನ್ನು ಕೂಡ ಸಂಕಲಿಸಿದ್ದಾರೆ" (ಪು.78).

ಜಯಪ್ರಕಾಶ್ ಅವರು ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ನಿಕಟವರ್ತಿಗಳಾಗಿ ಅವರನ್ನು ಚೆನ್ನಾಗಿ ಅರಿತುಕೊಂಡಿದ್ದವರು. ಅವರ ಬಗೆಗೆ ಈ ಪುಸ್ತಕದಲ್ಲಿರುವ ಲೇಖನ ಸ್ಫೂರ್ತಿದಾಯಕವಾಗಿದೆ. "ಯಾರದಾದರೂ ಕಾರ್ಯ ನಿರ್ವಹಣೆ ಹಾಗೂ ಶ್ರದ್ಧೆ ಕಡಿಮೆ ಎಂದು ಕಂಡುಬಂದಲ್ಲಿ ಕಲಾಂ ಹೇಳುತ್ತಿದ್ದುದು 'ಫೆಂಟಾಸ್ಟಿಕ್ ಫೆಲೋ'. ಕೆಲವೊಮ್ಮೆ ಕೇಳಿಸಿಕೊಂಡವರು ಈ ಮಾತುಗಳನ್ನು ಪ್ರಶಂಸೆ ಎಂದು ತಿಳಿದುಕೊಂಡು ಬೇಸ್ತು ಬಿದ್ದದ್ದು ಇದೆ. (ಪು.178). ಇಂಥ ಅಂತರಂಗದ ವಿಷಯಗಳು ನಮಗೆ ತಿಳಿಯುವುದು ಜಯಪ್ರಕಾಶ್ ಅವರಿಂದ ಮಾತ್ರ ಸಾಧ್ಯ. ಅವರು ವೃತ್ತಿಯಲ್ಲಿ ನಾನಾ ಸ್ಥಾನಗಳನ್ನು ಅಲಂಕರಿಸಿದ್ದು, ನಿವೃತ್ತಿಯನ್ನು ಪಡೆದ ಮೇಲೂ ಕಾರ್ಯನಿರತರೇ ಆಗಿದ್ದಾರೆ. ಪೊಲೀಸ್ ಅಕಾಡೆಮಿ, ಪೊಲೀಸ್ ಟ್ರೇನಿಂಗ್ ಸ್ಕೂಲ್ ಇತ್ಯಾದಿಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆಯನ್ನು ಸಲ್ಲಿಸಿ ತಮ್ಮ ಪ್ರತಿಭೆಯ ಸದುಪಯೋಗವನ್ನು ಮಾಡಿಕೊಳ್ಳುತ್ತಿದ್ದಾರೆ. ಲೇಖಕರಾಗಿ ಮಾತ್ರವಲ್ಲ, ಅನುವಾದಕರಾಗಿಯೂ ಅಪಾರ ಸಿದ್ಧಿಯನ್ನು ಗಳಿಸಿದ್ದಾರೆ. Wings of Fire ಎಂಬ ಗ್ರಂಥವನ್ನು **ಅಗ್ನಿಯ ರೇಖೆಗಳು** ಎಂದು ಅನುವಾದಿಸಿದ್ದಾರೆ. ಅದು ಈಗಾಗಲೇ ಹದಿನಾಲ್ಕು ಮುದ್ರಣಗಳನ್ನು ಕಂಡಿದೆ ಎಂದರೆ ಜಯಪ್ರಕಾಶರ ಅನುವಾದ ನೈಪುಣ್ಯದ ಅಂದಾಜು ಮಾಡಬಹುದು. ಅವರ **ಕಲಾಂ ಜೀವನ ಧರ್ಮ** ಎಂಬ ಪುಸ್ತಕವು ಮುದ್ರಿತವಾದ ಕೆಲವೇ ದಿನಗಳಲ್ಲಿ ಮರು ಮುದ್ರಣವನ್ನು ಕಂಡಿರುವುದೂ ಅವರ ಅಪೂರ್ವ ಪ್ರತಿಭೆಗೆ ಸಾಕ್ಷಿ.

> 'ಫೇಸ್‌ಬುಕ್ ಪ್ರಪಂಚ'ಕ್ಕೆ ಕೊಟ್ಟಿರುವ ಉಪ ನಾಮಧೇಯ 'ಶ್ರೀಸಾಮಾನ್ಯರು ಬಹುಮಾನ್ಯರು'. ಇದರಲ್ಲಿ ಇಬ್ಬರೂ ಇದ್ದಾರೆ. ಅಥವಾ ಶ್ರೀಸಾಮಾನ್ಯರು ಎಂದು ನಾವು ಹೇಳುವ ಜನರೂ ಬಹುಮಾನ್ಯರಾಗಿರಲು ಅರ್ಹತೆಯನ್ನು ಹೊಂದಿದ್ದಾರೆ ಎಂಬುದು ಇದರ ಧ್ವನಿತಾರ್ಥವಿರಬಹುದು. ಯಾಕೂಬ್ ಖಾದರ್ ಗುಲ್ವಾಡಿ ಎಂಬ ಗುಜರಿ ವ್ಯಾಪಾರಿ ಚಲನಚಿತ್ರ ನಿರ್ದೇಶಕರಾಗಿ ರಿಸರ್ವೇಶನ್ ಮತ್ತು ಟ್ರಿಪಲ್ ತಲಾಖ್ ಎಂಬ ಎರಡು ಚಿತ್ರಗಳನ್ನೇ ನಿರ್ಮಿಸಿದರು. ಆ ಚಿತ್ರಗಳು ಅಂತಾರಾಷ್ಟ್ರೀಯ ಪ್ರದರ್ಶನ ಭಾಗ್ಯ ಹಾಗೂ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದವು ಎಂಬ ಮಾಹಿತಿ ಸಾಮಾನ್ಯರಲ್ಲಿರುವ ಬಹುಮಾನ್ಯತೆಯನ್ನು ತೋರಿಸುವುದು. ಆರನೆಯ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದ ಈ ವ್ಯಕ್ತಿ ನಾನಾ ದೇಶಗಳ ಪ್ರವಾಸ ಮಾಡಿ ಅದರ ಬಗೆಗೆ ಮೂರು ಪುಸ್ತಕಗಳನ್ನು ಬರೆದಿದ್ದಾನೆಂದರೆ ಅದು ನಿಜವಾಗಿ ಅಸಾಮಾನ್ಯತೆಯ ಕುರುಹಲ್ಲವೆ?

ಜಯಪ್ರಕಾಶ ರಾವ್ ಅವರ ಸಾಹಿತ್ಯಾಸಕ್ತಿಗೆ ಮೂಲ ಸ್ರೋತಸ್ಸು ಕಡಲತೀರದ ಭಾರ್ಗವ ಕೊ.ಟ.ಶಿವರಾಮ ಕಾರಂತರು. ಇವರು ಅವರನ್ನು ಸಾಕ್ಷಾತ್ತಾಗಿ ಕಂಡವರು, ಅವರ ಮಾತನ್ನು ಬೆರಗಿನಿಂದ ಕೇಳಿದವರು. ಅವರ ಯಕ್ಷಗಾನ ನೃತ್ಯವನ್ನು ಆಶ್ಚರ್ಯದಿಂದ ನೋಡಿದವರು ಮತ್ತು ಅವರ ಕಾದಂಬರಿಗಳನ್ನು ಕುತೂಹಲದಿಂದ ಓದಿದವರು. ಬೇರೆಯವರ ಅರಿವಿಗೆ ಬಾರದ ಕಾರಂತರ ಹೃದಯ ಪ್ರಪಂಚದ ಎಳೆಗಳು ಇವರಿಗೆ ಗೊತ್ತು.

ಫೇಸ್‌ಬುಕ್ ಪ್ರಪಂಚಕ್ಕೆ ಮುನ್ನುಡಿಯನ್ನು ಬರೆದಿರುವ ಪ್ರೊ. ಉದಯಕುಮಾರ್ ಹಬ್ಬು ಅವರು ಹೇಳಿರುವ ಈ ಮಾತುಗಳು ಗಮನಾರ್ಹ. "ಸಾಮಾನ್ಯವಾಗಿ ಹಿರಿಯರೆಲ್ಲ ಮೂಲೆಗುಂಪಾಗುತ್ತಿರುವ, ವೃದ್ಧಾಶ್ರಮಕ್ಕೆ ತಳ್ಳಲ್ಪಟ್ಟ ಹಿರಿಯ ಚೇತನಗಳೆ. ಈ ಗ್ಲೋಬಲೈಸೇಶನ್ ಕಾಲದಲ್ಲಿ ಹಿರಿಯರನ್ನು, ವಯಸ್ಸಾದ ಸಾಧಕರನ್ನು ಗುರುತಿಸಿ ಸಮಾಜಕ್ಕೆ ಪರಿಚಯಿಸುವ ಈ ವಿಶಿಷ್ಟ ಕೆಲಸವನ್ನು ಜಯಪ್ರಕಾಶ ರಾವ್ ಅವರು ಕೈಗೆತ್ತಿಕೊಂಡು ಯೋಗ್ಯ, ಪ್ರಶಂಸನೀಯ ಕೆಲಸ ಮಾಡಿದ್ದಾರೆ. ಇಂತಹ ಹಿರಿಯರಲ್ಲಿ ಲೋಕದ ಅನುಭವದ ಉಗ್ರಾಣ ಹಾಗೂ ಖಜಾನೆಯೇ ಇರುತ್ತದೆ. ಅವರ ಲೋಕಾನುಭವದ ಜ್ಞಾನವು ಯುವಕರಿಗೆ ಮತ್ತು ಸಾಮಾನ್ಯರಿಗೆ ದಾರಿದೀಪ". ಇದಕ್ಕಾಗಿ ಜಯಪ್ರಕಾಶ ರಾವ್ ಅಭಿನಂದನಾರ್ಹರು.

ಈ ಪುಸ್ತಕದ ಹಿನ್ನುಡಿ 'ಮನಃಪೂರ್ವಕ ನುಡಿಗಳು' ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಸಮರ್ಪಿತವಾಗಿದೆ. ಅವರು ಬರೆದಿರುವ ಕೆಲವು ನುಡಿಗಳು "ಶ್ರೀ ಜಯಪ್ರಕಾಶ್ ಅವರದು. ನೆಲ ಮತ್ತು ಮುಗಿಲುಗಳನ್ನು ಆವರಿಸಿ ನಿಲ್ಲುವ ಚೈತನ್ಯ. ಬದುಕಿನ ಎಲ್ಲವನ್ನೂ ಒಳಗೊಳ್ಳುತ್ತಾ ಹಿಗ್ಗುತ್ತಾ ಬಂದವರು ಅವರು. ಕವಿ, ಅನುವಾದಕ, ಉಪನ್ಯಾಸಕ, ತರಬೇತುದಾರ, ಪತ್ರಕರ್ತ, ಸಂಪನ್ಮೂಲ ವ್ಯಕ್ತಿ, ಸಂಘಟಕ ಹೀಗೆ ಎಲ್ಲವೂ ಆದ ಬಹುಮುಖ ಪ್ರತಿಭೆ.

"ವ್ಯಕ್ತಿತ್ವದ ಆಯ್ಕೆಯಲ್ಲಿಯೂ ಬಸವಣ್ಣನವರ ವಚನಕ್ಕೆ ಭಾಷ್ಯ ಬರೆದಂತೆ ಯಾರನ್ನೂ 'ಇವನಾರವ' ಎನ್ನದೆ, ಎಲ್ಲರನ್ನೂ 'ಇವ ನಮ್ಮವ' ಎಂಬ ಭಾವದಿಂದ ಕಂಡಿದ್ದಾರೆ. ನಿಜವಾದ ಜಾತ್ಯತೀತ ಮನೋಭಾವ ಮತ್ತು ವಿಶ್ವ ಮಾನವತೆಗೆ ದಾಖಲೆ ಒದಗಿಸುವಂತೆ ಎಲ್ಲ ಜಾತಿ–ಮತ–ಪಂಥ, ಪ್ರದೇಶ–ಅಧಿಕಾರ–ಅಂತಸ್ತುಗಳನ್ನು ಮೀರಿ ಮಾನವ್ಯದ ಮಂದಾರ ಪರಿಮಳವನ್ನು ಆಘ್ರಾಣಿಸುವ ಅವಕಾಶವನ್ನು ಓದುಗರಿಗೆ ನೀಡಿದ್ದಾರೆ.

'ಫೇಸ್‌ಬುಕ್ ಪ್ರಪಂಚಕ್ಕೆ ಕೊಟ್ಟಿರುವ ಉಪ ನಾಮಧೇಯ 'ಶ್ರೀಸಾಮಾನ್ಯರು ಬಹುಮಾನ್ಯರು'. ಇದರಲ್ಲಿ ಇಬ್ಬರೂ ಇದ್ದಾರೆ. ಅಥವಾ ಶ್ರೀಸಾಮಾನ್ಯರು ಎಂದು ನಾವು ಹೇಳುವ ಜನರೂ ಬಹುಮಾನ್ಯರಾಗಿರಲು ಅರ್ಹತೆಯನ್ನು ಹೊಂದಿದ್ದಾರೆ ಎಂಬುದು ಇದರ ಧ್ವನಿತಾರ್ಥವಿರಬಹುದು. ಯಾಕೂಬ್ ಖಾದರ್ ಗುಲ್ವಾಡಿ ಎಂಬ ಗುಜರಿ ವ್ಯಾಪಾರಿ ಚಲನಚಿತ್ರ ನಿರ್ದೇಶಕರಾಗಿ **ರಿಸರ್ವೇಶನ್** ಮತ್ತು **ಟ್ರಿಪಲ್ ತಲಾಖ್** ಎಂಬ ಎರಡು ಚಿತ್ರಗಳನ್ನೇ ನಿರ್ಮಿಸಿದರು. ಆ ಚಿತ್ರಗಳು ಅಂತಾರಾಷ್ಟ್ರೀಯ ಪ್ರದರ್ಶನ ಭಾಗ್ಯ ಹಾಗೂ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದವು ಎಂಬ ಮಾಹಿತಿ ಸಾಮಾನ್ಯರಲ್ಲಿರುವ ಬಹುಮಾನ್ಯತೆಯನ್ನು ತೋರಿಸುವುದು. ಆರನೆಯ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದ ಈ ವ್ಯಕ್ತಿ ನಾನಾ ದೇಶಗಳ ಪ್ರವಾಸ ಮಾಡಿ ಅದರ ಬಗೆಗೆ ಮೂರು ಪುಸ್ತಕಗಳನ್ನು ಬರೆದಿದ್ದಾನೆಂದರೆ ಅದು ನಿಜವಾಗಿ ಅಸಾಮಾನ್ಯತೆಯ ಕುರುಹಲ್ಲವೆ?

ಶ್ರೀಸಾಮಾನ್ಯರಲ್ಲಿ ಬಹುಮಾನ್ಯತೆಯನ್ನು ಪಡೆದವರಲ್ಲಿರುವ ಏಕಮಾತ್ರ ಮಹಿಳೆ ಡಾ. ಸಾವಿತ್ರಿ ದೈತೋಟ. ಇವರು ಅಲೋಪತಿ ವೈದ್ಯೆ. ಆದರೂ ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲೂ ನಂಬಿಕೆ ಇರಿಸಿದವರಾಗಿದ್ದಾರೆ. ಮನೆತನದ ಹಿನ್ನೆಲೆಯಿಂದ ಆಯುರ್ವೇದ ಜ್ಞಾನವನ್ನೂ ಪಡೆದಿದ್ದಾರೆ. ಅಧಿಕ ವೆಚ್ಚದ ವಿದೇಶಿ ವಿಧಾನಕ್ಕಿಂತ ಸುಲಭ ದೇಶಿ ವಿಧಾನವನ್ನು ಆಪ್ತವೆಂದೂ ತೋರಿಸಲು ಡಾ. ಸಾವಿತ್ರಿ ದೈತೋಟ ಪ್ರಯತ್ನಿಸಿದ್ದಾರೆ. ಶಂಕರಾನಂದ ಸೇವಾ ಟ್ರಸ್ಟ್ ಎಂಬ ಸಂಸ್ಥೆ ಇವರಿಂದ ಸ್ಥಾಪಿತವಾಗಿ ಶ್ಲಾಘನೀಯ ಸೇವೆಯನ್ನು ಸಲ್ಲಿಸಿದೆ. ಇಂತಹ ಇತರ ಮಹಿಳೆಯರನ್ನೂ ಗುರುತಿಸಿ ಅವರ ಸಿದ್ಧಿಗಳನ್ನು ಗುರುತಿಸುವ ಕೆಲಸವಾಗಬೇಕು. ಉತ್ತಮ ಗ್ರಂಥವನ್ನು ಕನ್ನಡಿಗರಿಗೆ ಕೊಟ್ಟಿರುವ ಶ್ರೀ ಜಯಪ್ರಕಾಶ ರಾವ್ ಅಭಿನಂದನಾರ್ಹರು.

ಜೂನ್‌ನಲ್ಲಿ ಕೋವಿಡ್ 4ನೇ ಅಲೆ ಸಂಭವ

ಮೈಸೂರು ಜಿಲ್ಲೆಯಲ್ಲಿ ನಿತ್ಯ ಕೊರೊನಾ ಪರೀಕ್ಷೆ

ಕಳೆದ ವಾರದಲ್ಲಿ 1,800 ಮಂದಿಯ ಪರೀಕ್ಷೆ; ಈ ಪೈಕಿ 9 ಮಂದಿಗೆ ಪಾಸಿಟಿವ್

ಮೈಸೂರು, ಏ.26(ಆರ್‌ಕೆ)– ಜೂನ್ ತಿಂಗಳ ಕೋವಿಡ್ ರೂಪಾಂತರಿ 4ನೇ ಅಲೆ ಅಪ್ಪಳಿಸಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುವುದರಿಂದ ಎಚ್ಚೆತ್ತ ಮೈಸೂರು ಜಿಲ್ಲಾಡಳಿತ, ಆರ್‌ಟಿ ಪಿಸಿಆರ್, ರ‍್ಯಾಪಿಡ್ ಟೆಸ್ಟ್ ತೀವ್ರಗೊಳಿಸಿದೆ.



4ನೇ ಅಲೆ ಮುನ್ಸೂಚನೆಯಿಂದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಕೊರೊನಾ ಪರಿಸ್ಥಿತಿ ನಿಭಾಯಿಸಲು ತಯಾರಿ ನಡೆಸುತ್ತಿದ್ದು, 1ರಿಂದ 3ನೇ ಅಲೆಯ ಅನುಭವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮೈಸೂರಿನ ಜಿಲ್ಲಾ ಕೋವಿಡ್ ಆಸ್ಪತ್ರೆ, ಕೆ.ಆರ್. ಆಸ್ಪತ್ರೆ, ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಆರ್‌ಟಿ ಪಿಸಿಆರ್, ರ‍್ಯಾಪಿಡ್ ಟೆಸ್ಟ್‌ಗಳನ್ನು ಮಾಡುತ್ತಿದ್ದು, ಕೆಲ ಖಾಸಗಿ ಆಸ್ಪತ್ರೆಗಳಲ್ಲೂ ಉಸಿರಾಟದ ತೊಂದರೆ, ಶ್ವಾಸ ಕೋಶದ ತೊಂದರೆಗಳಿರುವ ಒಳರೋಗಿಗಳಿಗೆ ಕೊರೊನಾ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ. ಕಳೆದ 1 ವಾರದ ಅವಧಿಯಲ್ಲಿ 1,800 ಮಂದಿಗೆ ಪರೀಕ್ಷೆ ಮಾಡಲಾಗಿದ್ದು, ಆ ಪೈಕಿ 9 ಮಂದಿಗೆ ಮಾತ್ರ ಪಾಸಿಟಿವ್ ಬಂದಿದ್ದು, ಅವರು ದೆಹಲಿ, ಮುಂಬೈ ಸೇರಿದಂತೆ ಹೊರ ರಾಜ್ಯಗಳಿಂದ ಬಂದವರು. ಜಿಲ್ಲೆ ಯಲ್ಲಿ ಪ್ರತಿನಿತ್ಯ 200ರಿಂದ 250 ಕೋವಿಡ್ ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಂಡಕಳ್ಳಿಯಲ್ಲಿರುವ ಮುಕ್ತವಿಶ್ವ ವಿದ್ಯಾನಿಲಯದ ಶೈಕ್ಷಣಿಕ ಭವನ, ತಾಲೂಕುವಾರು ಕೋವಿಡ್ ಕೇರ್ ಸೆಂಟರ್‌ಗಳಿದ್ದು, ಅಲ್ಲಿ ಸೋಂಕಿತರ ದಾಖಲಿಸಿಕೊಂಡು ಚಿಕಿತ್ಸೆ ನೀಡಲು ಬೇಕಾದ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಕೆ.ಆರ್., ಚೆಲುವಾಂಬ, ಜಿಲ್ಲಾಸ್ಪತ್ರೆ, ಎಸ್‌ಎಂಟಿ, ಇಎಸ್‌ಐ, ಹೆಚ್.ಡಿ.ಕೋಟೆ, ನಂಜನಗೂಡು ಆಸ್ಪತ್ರೆಗಳೂ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 15 ಕಡೆ ಆಕ್ಸಿಜನ್ ಪ್ಲಾಂಟ್‌ಗಳಿದ್ದು, ನಿತ್ಯ ಆನ್ ಮಾಡಿ ಪ್ರಾತ್ಯಕ್ಷಿಕೆ ಮೂಲಕ ಅವುಗಳ ಕಾರ್ಯಕ್ಷಮತೆ ಖಾತರಿ ಪಡಿಸಿಕೊಳ್ಳಲಾಗುತ್ತಿದೆ ಎಂದರು.

> ನಿರಂತರ ಕೊರೊನಾ ಲಸಿಕೆ ನೀಡುತ್ತಿದ್ದು, 60 ವರ್ಷ ಮೇಲ್ಪಟ್ಟವರು, ಆರೋಗ್ಯ ಕಾರ್ಯಕರ್ತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಬೂಸ್ಟರ್ ಡೋಸ್ ನೀಡಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಶುಲ್ಕ ಪಡೆದು ಅರ್ಹ ಎಲ್ಲಾ ಫಲಾನುಭವಿಗಳಿಗೂ ಬೂಸ್ಟರ್ ಲಸಿಕೆ ಹಾಕಲಾಗುತ್ತಿದೆ. ಲಸಿಕೆ ಪಡೆದಿದ್ದೇವೆಂದು ನಿರ್ಲಕ್ಷ್ಯ ವಹಿಸದೇ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು, ಸ್ಯಾನಿಟೈಸರ್ ಬಳಸುವ ಕನಿಷ್ಠ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
>
> 
>
> –ಡಾ.ಕೆ.ಹೆಚ್.ಪ್ರಸಾದ್, ಡಿಹೆಚ್‌ಓ

ಸಾಮಾನ್ಯ ಬೆಡ್‌ಗಳು, ಆಕ್ಸಿಜನ್ ಬೆಡ್, ವೆಂಟಿಲೇಟರ್ ಸಹಿತ ಐಸಿಯುಗಳು ಸಿದ್ಧವಿದ್ದು, ನಂಜನಗೂಡಿನಲ್ಲಿ ಟೆಲಿ ಐಸಿಯು ವಾರ್ಡ್ ಸಿದ್ಧಪಡಿಸಿದ್ದು, ಕೆ.ಆರ್. ಆಸ್ಪತ್ರೆಯಿಂದ ವೈದ್ಯರು ವಿಡಿಯೋ ಕಾನ್ಫರೆನ್ಸ್ ಮೂಲಕ ನಿರ್ವಹಣೆ ಮಾಡುವ ವಿಧಾನದ ಪ್ರಕ್ರಿಯೆ ಪ್ರಗತಿ ಯಲ್ಲಿದೆ. ಆಕ್ಸಿಜನ್ ಕಾನ್ಸಂಟ್ರೇಟರ್, ಆಂಬುಲೆನ್ಸ್, ವೈದ್ಯಕೀಯ, ವೈದ್ಯಕೇತರ ಸಿಬ್ಬಂದಿ 'ಡಿ' ಗ್ರೂಪ್, ಟೆಕ್ನೀಷಿಯನ್‌ರಂತಹ ಸಿಬ್ಬಂದಿ ಸಂಭವನೀಯ 4ನೇ ಅಲೆ ಎದುರಿಸಲು ಪೂರ್ಣ ಪ್ರಮಾಣದಲ್ಲಿ ಸಿದ್ಧರಾಗಿದ್ದು, ಔಷಧ, ಪ್ರಯೋಗಾಲಯ, ಡಯಾಗ್ನೈಸ್ ಮಾಡಲು ಉಪಕರಣಗಳು, ವೈದ್ಯ ಸಮೂಹ ಸಜ್ಜಾಗಿದೆ ಎಂದ ಡಿಹೆಚ್‌ಒ, ಸಾರ್ವಜನಿಕರು ನಮ್ಮೊಂದಿಗೆ ಸಹಕರಿಸಿ ಕೋವಿಡ್ ನಿಯಂತ್ರಣಕ್ಕೆ ಕೈಜೋಡಿಸಬೇಕು ಎಂದು ಪ್ರಸಾದ್ ಹೇಳಿದರು.

ಎಸ್‌ಎಂಟಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಜಿಲ್ಲಾ ಕೋವಿಡ್ ಆಸ್ಪತ್ರೆ, ಎಲ್ಲಾ ತಾಲೂಕುಗಳ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಬೆಡ್, ಐಸಿಯು ಬೆಡ್‌ಗಳನ್ನು ಪರಿಶೀಲಿಸಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ದೃಢಪಡಿಸಿಕೊಳ್ಳಲಾಗಿದೆ. ಸಿಟಿ ಸ್ಕ್ಯಾನ್, ಇನ್ನಿತರ ಡಯಾಗ್ನೋಸ್ಟಿಕ್ ಉಪಕರಣಗಳೂ ಸಹ ಸಿದ್ಧವಿರುವುದರಿಂದ ಕೊರೊನಾ ಸೋಂಕಿತರ ಚಿಕಿತ್ಸೆಗೆ ಜಿಲ್ಲಾಡಳಿತವು ಪೂರ್ಣಪ್ರಮಾಣದಲ್ಲಿ ತಯಾರಿ ನಡೆಸಿದೆ ಎಂದು ಡಾ.ಪ್ರಸಾದ್ ಹೇಳಿದರು.

ಸರ್ಕಾರದ ಅನುದಾನ ಬಳಸದಿದ್ದರೆ ಶಿಸ್ತು ಕ್ರಮ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಜಯರಾಂ ಎಚ್ಚರಿಕೆ



ಮೈಸೂರು, ಏ.26(ಆರ್‌ಕೆ)–ಸರ್ಕಾರದಿಂದ ಬರುವ ವಿವಿಧ ಅಭಿವೃದ್ಧಿ ಯೋಜನೆಗಳ ಅನುದಾನವನ್ನು ಸಮರ್ಪಕವಾಗಿ ಬಳಸದೇ ವಾಪಸ್ ಹೋಗಲು ಕಾರಣರಾಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಜಯರಾಂ ಅವರು ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯಿತಿ ಕಚೇರಿ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಕಾರ್ಯ ವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಸರ್ಕಾರವು ವಿವಿಧ ಯೋಜನೆಗಳಡಿ ಮಂಜೂರು ಮಾಡುವ ಅನುದಾನವನ್ನು ನಿಗದಿತ ಅವಧಿಯೊಳಗಾಗಿ ಅದೇ ಉದ್ದೇಶಕ್ಕೆ ಖರ್ಚು ಮಾಡಬೇಕು ಎಂದು ತಿಳಿಸಿದರು.

ಅಭಿವೃದ್ಧಿಗಾಗಿ ಕೊಡುವ ಹಣವನ್ನು ನಿರ್ಲಕ್ಷ್ಯ ವಹಿಸದೇ ಸಮರ್ಪಕವಾಗಿ ಬಳಸಿ ಸರ್ಕಾರದ ಯೋಜನೆಗಳನ್ನು ಕಾರ್ಯ ರೂಪಕ್ಕೆ ತಂದು ಸಾರ್ವಜನಿಕರಿಗೆ ತಲುಪಿಸುವುದು ಅಧಿಕಾರಿಗಳ ಆದ್ಯ ಕರ್ತವ್ಯ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಅವು ಸಕಾಲದಲ್ಲಿ ಅರ್ಹ ಫಲಾನುಭವಿಗಳಿಗೆ ತಲುಪಬೇಕು. ಒಂದು ವೇಳೆ ಕಾರ್ಯಗತ ಮಾಡದೇ ಅನುದಾನ ಉಳಿಸಿದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಕ್ರಮ ವಹಿಸುವುದು ಅನಿವಾರ್ಯವಾಗುತ್ತದೆ ಎಂದು ಜಯರಾಂ ಅವರು ಖಡಕ್ ಎಚ್ಚರಿಕೆ ನೀಡಿದರು.

ರೈತರಿಗೆ ಸಹಕಾರಿಯಾಗುವ ಕೊಳವೆ ಬಾವಿ, ಪಂಪ್‌ಸೆಟ್, ಹನಿ ನೀರಾವರಿ ಯೋಜನೆಗಳು, ವಿದ್ಯುತ್ ಸಂಪರ್ಕ ಕಲ್ಪಿಸಿ ನಿರಂತರ ವಿದ್ಯುತ್ ಪೂರೈಕೆ, ಕೃಷಿ ಉಪಕರಣಗಳು, ರಸಾಯನಿಕ ಗೊಬ್ಬರ, ಕೀಟ–ಕಳೆನಾಶಕ ಔಷಧಿಯನ್ನು ಸರಿಯಾದ ಸಮಯದಲ್ಲಿ ರೈತರಿಗೆ ತಲುಪಿಸಿ ಬೇಸಾಯಕ್ಕೆ ಅಗತ್ಯ ನೆರವು ನೀಡಬೇಕೆಂದು ಅವರು ಸೆಸ್ಕ್, ಕೃಷಿ, ತೋಟಗಾರಿಕೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ರಸ್ತೆ, ಕುಡಿಯುವ ನೀರು, ಒಳ ಚರಂಡಿ, ಬೀದಿ ದೀಪಗಳಂತಹ ನಗರಾಭಿವೃದ್ಧಿಗಾಗಿ ವಿವಿಧ ಹಂತಗಳಲ್ಲಿ ಬಿಡುಗಡೆಯಾಗುವ ಅನುದಾನವನ್ನು ಬಳಸಿಕೊಂಡು ಕಾಮಗಾರಿ ಪೂರ್ಣಗೊಳಿಸಿ, ಆ ಬಗ್ಗೆ ಅನುಪಾಲನಾ ವರದಿ ಸಲ್ಲಿಸಬೇಕು. ಯೋಜನೆಗೆ ಡಿಪಿಆರ್ ತಯಾರಿಸುವಾಗ ಜನರಿಗೆ ಅನುಕೂಲವಾಗುವುದನ್ನು ಗಮನದಲ್ಲಿರಿಸಿಕೊಂಡು ಸ್ಥಳೀಯ ಜನ ಪ್ರತಿನಿಧಿಗಳ ಸಲಹೆ ಪಡೆಯಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು. ವಿವಿಧ ಸಾಮಾಜಿಕ ಭದ್ರತಾ ಪಿಂಚಣಿಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಸಂದಾಯವಾಗುವಂತೆ ಕ್ರಮ ವಹಿಸಿ, ಕಂದಾಯ ಇಲಾಖೆ ಅಧಿಕಾರಿಗಳು ರೈತರಿಗೆ ಸಂಬಂಧಪಟ್ಟ ಸೇವೆಗಳನ್ನು ವಿಳಂಬ ಮಾಡದೇ ಒದಗಿಸುವಂತೆಯೂ ಅವರು ಸಲಹೆ ನೀಡಿದರು. ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರು ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ಸೋಂಕಿತರಿಗೆ ಚಿಕಿತ್ಸೆ, ಆರೈಕೆಗೆ ಹೆಚ್ಚು ಗಮನ ಹರಿಸಲಾಯಿತು. ಇದೀಗ ನಾಲ್ಕನೇ ಅಲೆ ಮುನ್ಸೂಚನೆ ಇರುವುದರಿಂದ ಜಿಲ್ಲೆಯಲ್ಲಿ ಅಗತ್ಯ ಎಲ್ಲಾ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಪ್ರಕೃತಿ ವಿಕೋಪ ನಿರ್ವಹಣೆಗಾಗಿ ಮೀಸಲಿರಿಸಿರುವ ಹಣ ಬಳಸಿ ಪರಿಹಾರೋಪಾಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅಪಾಯ ಸಂಭವಿಸದಂತೆ ಕ್ರಮ ವಹಿಸಲಾಗುತ್ತಿದ್ದು, ಬೆಳೆ ನಾಶ, ಆಸ್ತಿ ನಷ್ಟ ಪರಿಹಾರಕ್ಕೂ ಅನುದಾನ ಮೀಸಲಿರಿಸಲಾಗಿದೆ ಎಂದು ಅವರು ವಿವರಿಸಿದರು.

ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಅಡಿಷನಲ್ ಎಸ್ಪಿ ಆರ್. ಶಿವಕುಮಾರ್, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಪಸ್ಥಿತರಿದ್ದರು.

ರಸ್ತೆ ಅಪಘಾತದಲ್ಲಿ ಅಪರಿಚಿತ ಸಾವು



ಮೈಸೂರು, ಏ.26–ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಅಪರಿಚಿತ ವ್ಯಕ್ತಿಯೋರ್ವ ಸಾವನ್ನಪ್ಪಿದ್ದು, ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಏ.23ರಂದು ಮೈಸೂರು ತಾಲೂಕು ಇಲವಾಲ ಹೋಬಳಿ ಹೊಸ ಕಾಮನಕೊಪ್ಪಲು ಗ್ರಾಮದ ಗೇಟ್ ಬಳಿ, ರಟ್ಟನಹಳ್ಳಿ ಕ್ರಾಸ್ ಸಮೀಪ ಸಂಭವಿಸಿದ ರಸ್ತೆ ಅಪಘಾತದಲ್ಲಿ ಸುಮಾರು 50–55 ವರ್ಷದ ಅಪರಿಚಿತ ಸಾವನ್ನಪ್ಪಿದ್ದಾರೆ. ಮೃತನ ಎಡ ಕೈನಲ್ಲಿ 'ಜಗದೀಶ್', 'ರಾಜೇಶ್ವರಿ' ಎಂದು ಹಸಿರು ಹಚ್ಚೆ ಇದೆ. ವಾರಸುದಾರರು 0821–2402222, 9480805046, 9480805031, 0821–2444800 ಮೂಲಕ ಸಂಪರ್ಕಿಸಲು ಕೋರಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಬುಧವಾರ 27 ಏಪ್ರಿಲ್ 2022

ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ



ಮೈಸೂರು,ಏ.26(ಪಿಎಂ)– ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ವರನಟ ಡಾ.ರಾಜ್‌ಕುಮಾರ್ ಅವರ ಜನ್ಮದಿನಾಚರಣೆ ಆಚರಿಸಲಾಯಿತು.

ಮೈಸೂರು ಮಹಾನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅವರ ಕಚೇರಿಯ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಎಸ್‌ಬಿಎಂ ಮಂಜು, ಡಾ ರಾಜಕುಮಾರ್ ಎಂದೊಡನೆ ನಮ್ಮ ಮನಸ್ಸಿನಲ್ಲಿ ಸಂಸ್ಕಾರ ಮತ್ತು ಸನ್ನಡತೆ ವ್ಯಕ್ತಿತ್ವ ಮೂಡುತ್ತದೆ ಎಂದು ಸ್ಮರಿಸಿದರು.

ರಾಜಕುಮಾರ್ ಅವರು ಬುದ್ಧನಿಂದ ಹಿಡಿದು ಬಾಂಡ್ ಪಾತ್ರದವರೆಗೂ ನಟನೆ ಮಾಡಿದ್ದಾರೆ. ರಾಜ್‌ಕುಮಾರ್ ಎಂದರೆ ಅದೊಂದು ಆಧ್ಯಾತ್ಮ. ದೇವತಾ ಮನುಷ್ಯರಂತೆ ಇದ್ದ ಅವರು ಶಾಂತಿ–ಸೌಹಾರ್ದತೆಯ ಪ್ರತೀಕವಾಗಿದ್ದರು. ಕರ್ನಾಟಕದಲ್ಲಿ ವಿಶ್ವಮಾನವ ಸಂದೇಶ ಮತ್ತು ಸದ್ಭಾವನೆ ಹರಡಬಲ್ಲವರು ರಾಜ್‌ಕುಮಾರ್ ಒಬ್ಬರೇ ಎಂದು ರಾಷ್ಟ್ರಕವಿ ಕುವೆಂಪು ಬಣ್ಣಿಸಿದ್ದರು ಎಂದರು. ಯಾವುದೇ ಪ್ರಶಸ್ತಿ ತಮಗೆ ಒಲಿದು ಬಂದರೂ ನನಗಿಂತ ಯೋಗ್ಯರಿಗೆ ಮೊದಲು ಅದು ಸಂದಬೇಕು ಎಂಬ ಉದಾತ್ತ ಮನೋಧರ್ಮ ಹೊಂದಿದ್ದವರು ರಾಜ್‌ಕುಮಾರ್ ಎಂದರು. ಚಾಮರಾಜ ಕ್ಷೇತ್ರ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ರವಿ ರಾಜಕೀಯ, ಎಸ್.ಆರ್.ರವಿ, ಟ್ರಸ್ಟ್ ಕಾರ್ಯದರ್ಶಿ ಎ.ರವಿ, ದಂತ ವೈದ್ಯ ಲೋಕೇಶ್, ಮಹಾದೇವ್, ಲೋಹಿತ್, ರಾಮಣ್ಣ ಮತ್ತಿತರರು ಹಾಜರಿದ್ದರು.

ಚಾಮುಂಡೇಶ್ವರಿ, ನರಸಿಂಹರಾಜ, ಚಾಮರಾಜ, ಕೆ.ಆರ್. ಕ್ಷೇತ್ರಗಳಲ್ಲಿ ಜನತಾ ಜಲಧಾರೆ ಸಂಚಾರ

ಇಲವಾಲದಲ್ಲಿ ಏ.30ರಂದು ಶಾಸಕ ಸಾ.ರಾ.ಮಹೇಶ್ ಚಾಲನೆ

ಮೈಸೂರು, ಏ.26–ಈಗಾಗಲೇ ರಾಜ್ಯಾದ್ಯಂತ ರಾಜ್ಯದ ನದಿಗಳು ಮತ್ತು ಜಲ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಿ ಯಶಸ್ವಿಯಾಗಿರುವ ಜನತಾ 'ಜಲಧಾರೆ' ಮೈಸೂರಿನ ಚಾಮುಂಡೇಶ್ವರಿ, ಕೃಷ್ಣರಾಜ, ನರಸಿಂಹರಾಜ ಹಾಗೂ ಚಾಮರಾಜ ಕ್ಷೇತ್ರಗಳಲ್ಲಿ ಸಂಚರಿಸಲಿದ್ದು, ಮಾಜಿ ಸಚಿವರು ಹಾಗೂ ಶಾಸಕರೂ ಆದ ಸಾ.ರಾ. ಮಹೇಶ್ ಅವರು ಶನಿವಾರ (ಏ.30) ಬೆಳಗ್ಗೆ 9 ಗಂಟೆಗೆ ಇಲವಾಲ ಗಣಪತಿ ದೇವಸ್ಥಾನದ ಆವರಣದಲ್ಲಿ ಚಾಲನೆ ನೀಡಲಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದ ಆವರಣ ದಲ್ಲಿ ನಡೆದ ಜನತಾ 'ಜಲಧಾರೆ' ಪೂರ್ವಭಾವಿ ಸಭೆಯಲ್ಲಿ ಈ ವಿಷಯ ತಿಳಿಸಿದ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಜಿಲ್ಲೆಯಾದ್ಯಂತ ಜನತಾ ಜಲಧಾರೆ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದ್ದು, ಹೆಚ್.ಡಿ.ಕೋಟೆ ಹಾಗೂ ಟಿ.ನರಸೀಪುರ ಗಳಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಚಾಲನೆ ನೀಡಿ ಯಶಸ್ವಿಗೊಳಿಸಿದ್ದಾರೆ. ಹುಣಸೂರಿನಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕೆ.ಆರ್.ನಗರದಲ್ಲಿ ಶಾಸಕ ಸಾ.ರಾ.ಮಹೇಶ್ ಅವರು ಜನತಾ ಜಲಧಾರೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ ಎಂದರು.



ಚಾಮುಂಡೇಶ್ವರಿ ಕ್ಷೇತ್ರ ಮತ್ತು ಮೈಸೂರು ನಗರದಲ್ಲಿ ಜಿಲ್ಲಾಧ್ಯಕ್ಷರಾದ ನರಸಿಂಹಸ್ವಾಮಿ, ನಗರ ಅಧ್ಯಕ್ಷ ಚಲುವೇಗೌಡ, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಬೀರಿ ಹುಂಡಿ ಬಸವಣ್ಣ, ಜಿಲ್ಲಾ ಯುವ ಜೆ.ಡಿ.ಎಸ್. ಅಧ್ಯಕ್ಷ ಗಂಗಾಧರಗೌಡ, ಮಹಿಳಾ ಘಟಕದ ನಗರ ಅಧ್ಯಕ್ಷೆ ಪ್ರೇಮಾ ಶಂಕರೇಗೌಡ, ಮಾಜಿ ಮೇಯರ್ ಗಳು, ನಗರ ಪಾಲಿಕೆ ಸದಸ್ಯರು, ಜಿಲ್ಲಾ ಪಂಚಾಯ್ತಿ ತಾಲೂಕು ಪಂಚಾಯ್ತಿ ಮಾಜಿ ಸದಸ್ಯರು ಹಾಗೂ ಮುಖಂಡರ ನೇತೃತ್ವದಲ್ಲಿ ಜನತಾ ಜಲಧಾರೆ ಜಾಥಾ ಇಲವಾಲದಿಂದ ಪ್ರಾರಂಭವಾಗಿ ಮೈಸೂರು ನಗರದ ಮೂರು ಕ್ಷೇತ್ರಗಳಲ್ಲಿ ಸಂಚರಿಸಿ ನಾಗನಹಳ್ಳಿಯಲ್ಲಿ ಬೀಳ್ಕೊಡಲಾಗುವುದು ಎಂದು ಅವರು ವಿವರಿಸಿದರು.

ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಆಗಮಿಸಿ ಯಶಸ್ವಿಗೊಳಿಸಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ ಕೈಬಲಪಡಿಸ ಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಮೈಸೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷ ನರಸಿಂಹಸ್ವಾಮಿ, ಜಿಲ್ಲಾ ಯುವ ಜೆ.ಡಿ.ಎಸ್ ಅಧ್ಯಕ್ಷ ಗಂಗಾಧರಗೌಡ, ನಗರ ಜೆ.ಡಿ.ಎಸ್. ಅಧ್ಯಕ್ಷ ಚಲುವೇಗೌಡ, ನಗರ ಮಹಿಳಾ ಘಟಕದ ಅಧ್ಯಕ್ಷೆ ಪ್ರೇಮಾ ಶಂಕರೇಗೌಡ, ಚಾಮುಂಡೇಶ್ವರಿ ಕ್ಷೇತ್ರದ ಜೆ.ಡಿ.ಎಸ್. ಅಧ್ಯಕ್ಷ ಬೀರಿಹುಂಡಿ ಬಸವಣ್ಣ, ಮಾಜಿ ಮೇಯರ್ ರವಿಕುಮಾರ್, ಸೋಮು ಶೇಖರ್, ನಗರಪಾಲಿಕೆ ಸದಸ್ಯರಾದ ಶ್ರೀಧರ, ಎಸ್.ಬಿ.ಎಂ. ಮಂಜು, ಅಶ್ವಿನಿ ಅನಂತು, ಮುಖಂಡರಾದ ಅಬ್ದುಲ್ಲಾ, ಪ್ರಕಾಶ್ ಪ್ರಿಯ ದರ್ಶನ್, ಅಪೆಕ್ಸ್ ಶ್ರೀನಿವಾಸ್, ಅಮ್ಮ ಸಂತೋಷ್, ವಕೀಲ ಗಂಗಾಧರಗೌಡ, ಬಣ್ಣ ಅರಗು ಕಾರ್ಖಾನೆ ಮಾಜಿ ಅಧ್ಯಕ್ಷ ಕೃಷ್ಣ, ಶ್ರೀರಾಂಪುರದ ರಮೇಶ್, ಉಮೇಶ್, ರವಿಕುಮಾರ್, ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ರೈತ ಕಲ್ಯಾಣ ಸಂಘಕ್ಕೆ ಹೊಸ ಪದಾಧಿಕಾರಿಗಳ ಸೇರ್ಪಡೆ

ಮಣ್ಣಿನ ಸಂರಕ್ಷಣೆ ಸಂಬಂಧ ಅರಿವು



ನೀಡುವ ಮಣ್ಣು ವಿಷಯುಕ್ತವಾಗುತ್ತಿದ್ದು, ಅನ್ನದಾತರು ಇನ್ನಾದರೂ ರಾಸಾಯನಿಕ ತ್ಯಜಿಸಿ, ಸಾವಯವ ಕೃಷಿಗೆ ಆದ್ಯತೆ ನೀಡಬೇಕೆಂದು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಚಂದನ್ ಗೌಡ ಮನವಿ ಮಾಡಿದರು.

ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನ ದಲ್ಲಿ ಆಯೋಜಿಸಲಾಗಿದ್ದ ರೈತ ಕಲ್ಯಾಣ ಸಂಘದ ನೂತನ ಪದಾಧಿಕಾರಿಗಳ ಸೇರ್ಪಡೆ ಮತ್ತು ಪದಗ್ರಹಣ ಕಾರ್ಯ ಕ್ರಮದಲ್ಲಿ ಅವರು ಮಾತನಾಡಿದರು.

ಹೆತ್ತ ತಾಯಿಯಷ್ಟೇ ಪ್ರಾಮುಖ್ಯತೆಯನ್ನು ಹೊತ್ತತಾಯಿ ಭೂಮಿಗೂ ನೀಡಬೇಕಿದೆ ಎಂದ ಅವರು, ಯಥೇಚ್ಛವಾದ ರಾಸಾಯನಿಕ ಬಳಕೆ ಯಿಂದಾಗಿ ಇಂದು ನಾವು ಸೇವಿಸುವ ಆಹಾರ ಪದಾರ್ಥಗಳೂ ವಿಷಯುಕ್ತವಾಗುತ್ತಿದೆ. ಆದರೆ ಸಾವಯವ ಕೃಷಿ ಪದ್ಧತಿಗೆ ರೈತರು ಮುಂದಾದರೆ, ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ಪಡೆಯಬಹುದು ಹಾಗೂ ಮಣ್ಣಿನ ರಕ್ಷಣೆಯನ್ನೂ ಮಾಡಬಹುದು ಎಂದರು.

ನಾವು ಸತ್ತರೆ ಮಣ್ಣಿಗೆ. ಮಣ್ಣೇ ಸತ್ತರೇ ಎಲ್ಲಿಗೆ ಎಂದು ಪ್ರಶ್ನಿಸಿದ ಚಂದನ್ ಗೌಡ, ಇಡೀ ದೇಶಾದ್ಯಂತ ರಾಸಾಯನಿಕ ಮುಕ್ತ ಅಭಿಯಾನಕ್ಕೆ ಮುಂದಾಗಬೇಕು.ಮಣ್ಣಿನ ಸುವಂತೆ ಮಾಡಬೇಕಿದೆ ಎಂದರು.

ರಾಜ್ಯ ರೈತ ಕಲ್ಯಾಣ ಸಂಘದ ವತಿ ಯಿಂದ, ಹಳೇ ಮೈಸೂರು ಪ್ರಾಂತ್ಯ ದಿಂದಲೇ ರಾಸಾಯನಿಕ ಮುಕ್ತ ಅಭಿಯಾನಕ್ಕೆ ಚಾಲನೆ ನೀಡುತ್ತಿದ್ದು, ರಾಜ್ಯದ ಪ್ರತಿ ಹಳ್ಳಿ, ಹಳ್ಳಿಗೂ ತೆರಳಿ ಈ ಬಗ್ಗೆ ಜಾಗೃತಿ ಮೂಡಿ ಸಲಾಗುವುದು ಎಂದು ಹೇಳಿದ ಅಮು, ರೈತರ ಸಮಸ್ಯೆಗಳನ್ನು ಸರ್ಕಾರದ ಮುಂದಿಟ್ಟು ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ಸಹ ಶ್ರಮಿಸುವುದಾಗಿ ಭರವಸೆ ನೀಡಿದರು.

ರೈತ ಕಲ್ಯಾಣ ಸಂಘ ಹಾಗೂ ಭೂಮಿಪುತ್ರ ರೈತಮಿತ್ರ ಸಂಸ್ಥೆ ವತಿಯಿಂದ ಬೆಳೆನಾಶ ಸೇರಿದಂತೆ ಈಗಾಗಲೇ ಹಲವು ಸಮಸ್ಯೆಗಳಿಂದ ನೊಂದಿರುವ ಸಾಕಷ್ಟು ರೈತರ ಮನೆಗೆ ತೆರಳಿ ಸಾಂತ್ವನ ಹೇಳಿ, ವೈಯಕ್ತಿಕ ಪರಿಹಾರದ ಜೊತೆಗೆ, ಸರ್ಕಾರ ದಿಂದ ಸಿಗಬೇಕಾದ ಪರಿಹಾರವನ್ನೂ ಮಂಜೂರು ಮಾಡಿಸಲಾಗಿದೆ ರೈತರು ಯಾವುದೇ ಸಮಸ್ಯೆಗಳಿದ್ದರೂ ನೇರವಾಗಿ ನಮ್ಮ ಸಂಘವನ್ನು ಸಂಪರ್ಕಿಸಬಹುದು ಎಂದರು.

ಈ ಸಂದರ್ಭದಲ್ಲಿ ನಂಜನಗೂಡು, ಹುಲ್ಲಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮದ ಸಾಕಷ್ಟು ರೈತರು ಸಂಘಕ್ಕೆ ಸೇರ್ಪಡೆಯಾದರು.

ಬೇಸಿಗೆ ಬಂಡಿಯಲ್ಲಿ 'ನೈಪುಣ್ಯ' ವಿದ್ಯಾರ್ಥಿಗಳ ಸಾಹಸ



ಮೈಸೂರು, ಏ.26– ಮೈಸೂರಿನ ಆರ್.ಟಿ.ನಗರದ 'ನೈಪುಣ್ಯ' ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿರುವ 'ಬೇಸಿಗೆ ಬಂಡಿ' ಶಿಬಿರದಲ್ಲಿ ವಿದ್ಯಾರ್ಥಿಗಳು ನಾನಾ ಸಾಹಸ ಕ್ರೀಡೆಗಳಲ್ಲಿ ಭಾಗವಹಿಸಿ ರೋಚಕ ಅನುಭವ ಪಡೆದುಕೊಂಡರು.

ಪಾಂಡವಪುರ ಬಳಿಯ ಕುಂತಿಬೆಟ್ಟದಲ್ಲಿ ಕಡಿದಾದ ಬೆಟ್ಟ, ಬಂಡೆಗಳನ್ನು "ಹಗ್ಗದ ಸಹಾಯದಿಂದ ಹತ್ತುವ ಮೂಲಕ 100ಕ್ಕೂ ಹೆಚ್ಚು ಮಕ್ಕಳು ತಮ್ಮ ಸಾಹಸ ಪ್ರವೃತ್ತಿಯನ್ನು ಹೆಚ್ಚಿಸಿಕೊಳ್ಳುವ ಆತ್ಮವಿಶ್ವಾಸ ಗಳಿಸಿಕೊಂಡರಲ್ಲದೇ ನೈಜ ಶಿಕ್ಷಣವೆಂದರೆ ನಾಲ್ಕುಗೋಡೆಗಳ ಮಧ್ಯೆ ಕಲಿಯುವ ಪಾಠವಷ್ಟೇ ಅಲ್ಲ, ಹೊರ ಪ್ರಪಂಚದ ಒಡ ನಾಟ, ಪ್ರಕೃತಿಯ ವೈಭವ ಸವಿದು ಮಾನಸಿಕ ಹಾಗೂ ದೈಹಿಕ ಗಟ್ಟಿತನವನ್ನು ಹೆಚ್ಚಿಸಿಕೊಳ್ಳು ವುದೂ ಶಿಕ್ಷಣದ ಒಂದು ಭಾಗ ಎಂಬ ವಿಷಯ ಮನವರಿಕೆ ಮಾಡಿಕೊಂಡರು.

ಆಧುನಿಕ ತಂತ್ರಜ್ಞಾನದ ಪರಿಧಿಯೊಳಗೆ ಸಿಲುಕಿಕೊಂಡಿರುವ ನಗರೀಕರಣ ನಮ್ಮ ಮಕ್ಕಳ ಸಹಜ ಬೆಳವಣಿಗೆಯನ್ನು ಅದುಮಿಟ್ಟುಕೊಳ್ಳುತ್ತಿದೆ. ಪ್ರಕೃತಿಯ ಸೊಬಗು ಸವಿಯುವ ಜತೆಗೆ ಹೊರಗಿನ ಜಗತ್ತಿನ ಅನುಭವ ಪಡೆಯುವ ಸಹಜ ಸಾಹಸದ ಆಟೋಟಗಳ ಚಟುವಟಿಕೆ ಯಿಂದ ಮಕ್ಕಳು ಬಹುದೂರ ಉಳಿಯು ವಂತಾಗಿದೆ. ಈ ನಿಟ್ಟಿನಲ್ಲಿ ನೈಪುಣ್ಯ ಶಾಲೆ ಮಕ್ಕಳ ವಯೋಸಹಜ ಬಾಲ್ಯದ ಬೆಳವಣಿಗೆಗೆ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದೂ ಪ್ರಾಥಮಿಕ ಶಿಕ್ಷಣದ ಭಾಗವಾಗಬೇಕೆಂದು ಪರಿಗಣಿಸಿ "ಇಂದು ಕುಂತಿಬೆಟ್ಟದಲ್ಲಿ ಬಂಡೆ ಹತ್ತುವ, ರೀವರ್ ರಾಫ್ಟಿಂಗ್ (ಟ್ರೆಕಿಂಗ್, ರಾಪ್ಲಿಂಗ್, ಕಯಾಕಿಂಗ್, ಕುಟ್ರಿರಾಫ್ಟಿಂಗ್)ಮೂಲಕ ಜಲ ಸಾಹಸ ಕ್ರೀಡೆಯ ಪರಿಚಯ ಮಾಡಿಕೊಳ್ಳುವ ಮೂಲಕ ರೋಮಾಂಚನದ ಸಂಭ್ರಮ ಅನುಭವಿಸಿದರು.



ನ್ಯಾಷನಲ್ ಅಡ್ವೆಂಚರ್ ಫೌಂಡೇಷನ್ ನಿರ್ದೇಶಕಿ ಶ್ರೀಮತಿ ರುಕ್ಮಿಣಿ ಚಂದ್ರನ್ ಅವರ ಮಾರ್ಗದರ್ಶನದಲ್ಲಿ ನಡೆದ ಸಾಹಸ ಕ್ರೀಡೆಗೆ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ಪ್ರಿನ್ಸಿಪಾಲ್ ಶ್ರೀಮತಿ ಶಿಲ್ಪಾ ಅವರ ನೇತೃತ್ವದ ಶಿಕ್ಷಕರ ತಂಡ ಸಾಥ್ ನೀಡಿತು.

ಸಮಾಜಕ್ಕೆ ಹಿತವಾಗುವ ನಡವಳಿಕೆಗಳೇ ಸಂಸ್ಕಾರ

ಮೈಸೂರು, ಏ.26–ಸಮಾಜಕ್ಕೆ ಹಿತವಾಗುವಂತಹ ನಡವಳಿಕಗಳೇ ಸಂಸ್ಕಾರ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ. ಎಚ್.ಆರ್. ಮಹದೇವಸ್ವಾಮಿ ತಿಳಿಸಿದರು.



ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 'ಜ್ಞಾನವಾರಿಧಿ–73' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ "ಸಂಸ್ಕಾರ ಮತ್ತು ಅದರ ಪ್ರಾಮುಖ್ಯತೆ" ವಿಷಯ ಕುರಿತು ಉಪನ್ಯಾಸ ನೀಡುತ್ತಾ ಸಂಸ್ಕಾರ ಜನನದಿಂದಲೇ ಪೂರ್ವಯೋಜಿತವಾಗಿ ಅಸ್ತಿತ್ವದಲ್ಲಿರುತ್ತದೆ ಎಂದರು.

ವ್ಯಕ್ತಿಯ ನೈತಿಕತೆ, ಸ್ವಭಾವ, ನಡವಳಿಕೆ, ಸದ್ಗುಣಗಳು, ಹಿರಿಯರನ್ನು ಗೌರವಿಸುವುದು, ಸಾಮಾಜಿಕ ಶಿಷ್ಟಾಚಾರಗಳ ಪಾಲನೆ ಇವೆಲ್ಲವೂ ಸಂಸ್ಕಾರವನ್ನೇ ಅವಲಂಬಿಸಿರುತ್ತವೆ. ಆತ್ಮ ಪರಿಶುದ್ಧವಾಗಿರಬೇಕು, ದೇಹ ಬಲಿಷ್ಠವಾಗಿರಬೇಕು. ಮೌಲ್ಯ, ಸಂಸ್ಕೃತಿ ಮತ್ತು ನೈತಿಕತೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಗುಣಗಳ ಗುಣಾಕಾರ ಮತ್ತು ದೋಷಗಳ ಭಾಗಾಕಾರವೇ ಸಂಸ್ಕಾರ. ಮುಂದಿನ ಜನಾಂಗಕ್ಕೆ ಈ ಸಂಸ್ಕಾರಗಳನ್ನು ಕೊಂಡೊಯ್ಯುವ ಜವಾಬ್ದಾರಿ ಇಂದಿನ ಯುವಜನರ ಮೇಲಿದೆ ಎಂದು ಅವರು ತಿಳಿಸಿದರು.

ಪ್ರಾಣಿ–ಪಕ್ಷಿಗಳಲ್ಲಿರುವ ಸಹಬಾಳ್ವೆಯ ಗುಣಗಳನ್ನು ಮನುಷ್ಯ ಅಳವಡಿಸಿಕೊಳ್ಳಬೇಕು. ಸಂಸ್ಕಾರಗಳೆಂದರೆ ನಿಯಮಗಳಲ್ಲ, ಅವು ಜೀವನ ವಿಧಾನಗಳು. ಹಾಯ್–ಬಾಯ್ ಸಂಸ್ಕಾರ ನಮ್ಮದಲ್ಲ. ಹಿರಿಯರಿಗೆ ತಲೆಬಾಗಿ ನಮಸ್ಕರಿಸುವುದು ಭಾರತೀಯ ಸಂಸ್ಕಾರ. ಸಂಸ್ಕಾರವುಳ್ಳ ವ್ಯಕ್ತಿ ಮಾತ್ರ ದೇಶದ ಆಸ್ತಿಯಾಗಬಲ್ಲ. ವಿಜ್ಞಾನದ ಹೆಸರಿನಲ್ಲಿ ಅನೇಕ ಸಂಸ್ಕಾರಗಳನ್ನು ಇಂದು ಮೂಢನಂಬಿಕೆಯ ಸಾಲಿಗೆ ತಳ್ಳಿರುವುದು ವಿಷಾದನೀಯ. ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸಿದ್ದರು. ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಆರ್.ಎಸ್. ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

ತಾಳೆ ಎಣ್ಣೆ ರಫ್ತು ನಿಷೇಧ ವಿಸ್ತರಿಸಲು ಇಂಡೋನೇಷ್ಯಾ ಚಿಂತನೆ

ಜಕಾರ್ತ,ಏ.26– ಇಂಡೋನೇಷ್ಯಾ ಅಡುಗೆ ಎಣ್ಣೆಯ ಉತ್ಪಾದನೆಯಲ್ಲಿ ಬಳಸುವ ಉತ್ಪನ್ನಗಳ ಕೊರತೆ ಎದುರಿಸುತ್ತಿದ್ದು, ಇದೀಗ ತಾಳೆ ಎಣ್ಣೆ ರಫ್ತಿನ ಮೇಲೆ ನಿಷೇಧವನ್ನು ವಿಸ್ತರಿಸಲು ಚಿಂತನೆ ನಡೆಸಿದೆ. ವಿಶ್ವದ ಅತಿದೊಡ್ಡ ತಾಳೆ ಎಣ್ಣೆ ರಫ್ತು ಮಾಡುವ ಇಂಡೋನೇಷ್ಯಾ ಸಂಸ್ಕರಿಸಿದ, ಬಿಳುಪುಗೊಳಿಸಿದ ಹಾಗೂ ಡಿಯೋಡರೈಸ್ಡ್(ಆರ್‌ಬಿಡಿ) ಪಾಮ್ ಓಲಿನ್‌ನ ಸಾಗಣೆಯನ್ನು ನಿಲ್ಲಿಸಲು ಯೋಜಿಸಿದೆ. ಆದರೂ ಗುರುವಾರದಿಂದ ಪಾಮ್ ಓಲಿನ್ ಅಥವಾ ಇತರ ಉತ್ಪನ್ನಗಳ ರಫ್ತಿಗೆ ಅವಕಾಶ ನೀಡುತ್ತದೆ ಎಂದು ವರದಿಗಳು ತಿಳಿಸಿವೆ.

ವಿಶ್ಲೇಷಕರ ಅಂದಾಜಿನ ಪ್ರಕಾರ, ಇಂಡೋನೇಷ್ಯಾದ ತಾಳೆ ಎಣ್ಣೆ ಉತ್ಪನ್ನಗಳ ಒಟ್ಟು ರಫ್ತಿನಲ್ಲಿ ಆರ್‌ಬಿಡಿ ಪಾಮ್ ಓಲಿನ್ ಎಣ್ಣೆ ಸುಮಾರು ಶೇ.40 ರಷ್ಟು ಇದೆ. ಇದರ ರಫ್ತು ನಿಷೇಧದಿಂದ ಇಂಡೋನೇಷ್ಯಾದ ಗಳಿಕೆಯ ಮೇಲೆ ಗಮನಾರ್ಹ ಪರಿಣಾಮ ಬೀರುವ ಸಾಧ್ಯತೆ ಇದೆ.

ಇಂಡೋನೇಷ್ಯಾ ಸಾಮಾನ್ಯವಾಗಿ ತಿಂಗಳಿಗೆ ಸುಮಾರು 2.5 ಶತಕೋಟಿ ಡಾಲರ್ (ಸುಮಾರು 19 ಸಾವಿರ ಕೋಟಿ ರೂ.)ನಿಂದ 3 ಶತಕೋಟಿ ಡಾಲರ್(22 ಸಾವಿರ ಕೋಟಿ ರೂ.) ತಾಳೆ ಎಣ್ಣೆ ಉತ್ಪನ್ನಗಳನ್ನು ರಫ್ತು ಮಾಡುತ್ತದೆ.

ಕಾಂಗ್ರೆಸ್ ಸೇರಲು ಚುನಾವಣಾ ತಂತ್ರಜ್ಞ ಪ್ರಶಾಂತ್ ಕಿಶೋರ್ ನಿರಾಕರಣೆ

ನವದೆಹಲಿ, ಏ. 26– ಕೇಂದ್ರದಲ್ಲಿ ಮತ್ತೊಮ್ಮೆ ಅಧಿಕಾರದ ಗದ್ದುಗೆಯೇರುವ ಕನಸು ಕಾಣುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಖ್ಯಾತ ಚುನಾವಣಾ ತಂತ್ರಜ್ಞ ಪ್ರಶಾಂತ್ ಕಿಶೋರ್ ಸೇರ್ಪಡೆಯಾಗಲಿದ್ದಾರೆ ಎಂಬಂತಹ ಮಾತುಗಳು ಬಹಳ ದಿನಗಳಿಂದ ಕೇಳಿಬರುತಿತ್ತು. ಈ ಸಂಬಂಧ ಪಕ್ಷದ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಕೂಡಾ ಪಕ್ಷದ ಮುಖಂಡರೊಂದಿಗೆ ಹಲವು ಸುತ್ತಿನ ಮಾತುಕತೆ ಸಹ ನಡೆಸಿದ್ದರು. ಆದರೆ, ಕೊನೆಗೆ ಏನಾಯಿತೊ, ಈಗ ಪ್ರಶಾಂತ್ ಕಿಶೋರ್ ಕಾಂಗ್ರೆಸ್ ಸೇರ್ಪಡೆಯಾಗುತ್ತಿಲ್ಲ ಎಂಬಂತಹ ಸುದ್ದಿ ಇಂದು ಹೊರಬಿದ್ದಿದೆ.

ಪ್ರಶಾಂತ್ ಕಿಶೋರ್ ಕಾಂಗ್ರೆಸ್ ಸೇರ್ಪಡೆ ಅವಕಾಶವನ್ನು ನಿರಾಕರಿಸಿದ್ದಾರೆ ಎಂದು ಪಕ್ಷದ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲ ತಿಳಿಸಿದ್ದಾರೆ. ಐ–ಪ್ಯಾಕ್ ಭಾಗವಾಗಿ ಕಾಂಗ್ರೆಸ್ ಸೇರ್ಪಡೆ ಯಾಗಲು ಪ್ರಶಾಂತ್ ಕಿಶೋರ್ ಅವಕಾಶ ನಿರಾಕರಿಸುವುದಾಗಿ ಅವರು ತಿಳಿಸಿದ್ದಾರೆ.



ಇತ್ತೀಚಿಗೆ ನಡೆದ ಪಂಚ ರಾಜ್ಯ ಚುನಾ ವಣೆಯಲ್ಲಿ ಹೀನಾಯ ಸೋತಿದ್ದ ಪಕ್ಷಕ್ಕೆ ಪುನರ್ ಜನ್ಮ ನೀಡುವ ನಿಟ್ಟಿನಲ್ಲಿ ಪ್ರಶಾಂತ್ ಕಿಶೋರ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲು ಸೋನಿಯಾಗಾಂಧಿ ಕೆಲ ತಿಂಗಳುಗಳಿಂದ ಪ್ರಯತ್ನ ನಡೆಸಿದ್ದರು. ಆದರೆ, ಈ ವಿಚಾರ ಅನೇಕ ಸಲ ವಿಳಂಬವಾಯಿತು. ಕಾಂಗ್ರೆಸ್ ಸೇರುವ ಅವಕಾಶ ವನ್ನು ನಿರಾಕರಿಸುತ್ತಿದ್ದೇನೆ. ಚುನಾವಣೆಯಲ್ಲಿ ಐ–ಪ್ಯಾಕ್ಸ್ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ ಎಂದು ಪ್ರಶಾಂತ್ ಕಿಶೋರ್ ಟ್ವೀಟ್ ಮೂಲಕ ತಿಳಿಸಿದ್ದಾರೆ.

ನಾನು ಕಾಂಗ್ರೆಸ್ ಸೇರ್ಪಡೆಯಾಗುವುದಕ್ಕಿಂತಲೂ ಹೆಚ್ಚಾಗಿ ಆ ಪಕ್ಷದ ನಾಯಕತ್ವದ ಅಗತ್ಯವಿದೆ. ಪರಿವರ್ತನೆಯ ಸುಧಾರಣೆಗಳ ಮೂಲಕ ಕೆಲವು ಆಳವಾದ ಬೇರೂರಿರುವ ರಚನಾತ್ಮಕ ಸಮಸ್ಯೆಗಳನ್ನು ಪರಿಹರಿಸಲು ಸಾಮೂಹಿಕ ಇಚ್ಛೆಯ ಅಗತ್ಯವಿದೆ ಎಂಬುದು ನನ್ನ ವಿನಮ್ರ ಅಭಿಪ್ರಾಯವಾಗಿದೆ ಎಂದು ಪ್ರಶಾಂತ್ ಕಿಶೋರ್ ಹೇಳಿದ್ದಾರೆ.

ಮೇ 5ಕ್ಕೆ ಮೈಸೂರಲ್ಲಿ ಸೌಹಾರ್ದ ಕೂಟ; ತನ್ವೀರ್

ನಾವೆಲ್ಲಾ ಭಾರತಾಂಬೆಯ ಮಕ್ಕಳು ಸಂದೇಶ ಸಾರುವ ಉದ್ದೇಶ

ಮೈಸೂರು, ಏ.26(ಎಸ್‌ಬಿಡಿ)– ಮೈಸೂರಿನಲ್ಲಿ ಮೇ 5ರಂದು 'ಸೌಹಾರ್ದ ಕೂಟ' ಏರ್ಪಡಿಸಿರುವುದಾಗಿ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ತಿಳಿಸಿದರು.

ತಮ್ಮ ಕ್ಷೇತ್ರದ 36ನೇ ವಾರ್ಡ್‌ನಲ್ಲಿ ಸ್ಥಳೀಯ ಕಾರ್ಪೊರೇಟರ್ ರಜನಿ ಅಣ್ಣಯ್ಯ ಅವರೊಂದಿಗೆ ಮಂಗಳವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ತನ್ವೀರ್ ಸೇಠ್, ಧರ್ಮದ ವಿಚಾರವಾಗಿ ಪ್ರಸ್ತುತ ವಿದ್ಯಮಾನಗಳು ಹಾಗೂ ಗೊಂದಲ ಗಳ ನಡುವೆ ಎಲ್ಲರನ್ನೂ ಒಟ್ಟುಗೂಡಿಸುವ ನಿಟ್ಟಿನಲ್ಲಿ ಮೇ 5ರಂದು 'ಸೌಹಾರ್ದ ಕೂಟ' ಆಯೋಜಿಸಲಾಗಿದೆ. ಈ ಮೂಲಕ ನಾವೆಲ್ಲಾ ಭಾರತೀಯರು, ಭಾರತಾಂಬೆಯ ಮಕ್ಕಳು ಎಂಬ ಸಂದೇಶ ಸಾರುವುದು ನಮ್ಮ ಉದ್ದೇಶ ಎಂದು ಹೇಳಿದರು.



ಮೈಸೂರಿನ 36ನೇ ವಾರ್ಡ್‌ನಲ್ಲಿ ಶಾಸಕ ತನ್ವೀರ್ ಸೇಠ್ ಹಾಗೂ ಪಾಲಿಕೆ ಸದಸ್ಯೆ ರಜನಿ ಅಣ್ಣಯ್ಯ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಜೆಡಿಎಸ್ ನೂತನ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ನರಸಿಂಹರಾಜ ಕ್ಷೇತ್ರದಿಂದ ಸ್ಪರ್ಧಿಸಬಹುದೆಂಬ ಚರ್ಚೆ ವಿಚಾರವಾಗಿ ಪ್ರತಿಕ್ರಿಯಿಸಿ, ಯಾರೇ ನನ್ನ ಪ್ರತಿಸ್ಪರ್ಧಿಯಾದರೂ ಹೋರಾಟಕ್ಕೆ ನಾವು ಸಿದ್ಧರಿದ್ದೇವೆ. ಸಂವಿಧಾನದಲ್ಲಿ 25 ವರ್ಷ ಮೇಲ್ಪಟ್ಟ ಹಾಗೂ ಮಾನಸಿಕವಾಗಿ ಚೆನ್ನಾಗಿರಬೇಕೆಂಬ ಮಾನದಂಡ ತಿಳಿಸಲಾಗಿದೆ. ಈ ವರ್ಗಕ್ಕೆ ಸೇರುವವರು ಯಾರಾದರೂ ಚುನಾವಣೆ ಯಲ್ಲಿ ಸ್ಪರ್ಧಿಸಬಹುದು ಎಂದರು.

ತಮ್ಮ ಬೆಂಬಲಿಗರು ಜೆಡಿಎಸ್ ಸೇರಿದ್ದರ ಬಗ್ಗೆ ಮಾತನಾಡಿ, ರಾಜಕೀಯ ನಿಂತ ನೀರಲ್ಲ, ಅದು ಹರಿಯುತ್ತಿರಬೇಕು. ಪ್ರತಿಪಕ್ಷದವರು, ಪ್ರತಿಸ್ಪರ್ಧಿಗಳು ಎಷ್ಟು ಜಾಗೃತರಾಗುತ್ತಾರೋ ಹಾಗೆಯೇ ನಾವೂ ಕೂಡ ಜಾಗೃತರಾಗಬೇಕು. ಚುನಾವಣೆ ಸಮೀಪಿಸುವಾಗ ಇಂತಹ ಬೆಳವಣಿಗೆಗಳು ಸಹಜ. ಕಾಂಗ್ರೆಸ್ ವತಿಯಿಂದ 27 ವರ್ಷಗಳಿಂದ ಇಫ್ತಾರ್ ಕೂಟವನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಇದರಲ್ಲೂ ರಾಜಕೀಯ ಮಾಡಿರುವುದು ಯಾರೆಂದು ಜನರಿಗೆ ತಿಳಿದಿದೆ. ಇಂದು ಜೆಡಿಎಸ್, ನಾಳೆ ಬಿಜೆಪಿಯವರು, ನಾಡಿದ್ದು ಮತ್ಯಾರೋ ಇಫ್ತಾರ್ ಕೂಟ ಮಾಡಬಹುದು. ಆದರೆ ಅವರ ಧಾರ್ಮಿಕ ಭಾವನೆ ಹಾಗೂ ಮನಃಸ್ಥಿತಿ ಭಗವಂತನಿಗೆ ತಿಳಿದಿರುತ್ತದೆ ಎಂದು ಹೇಳಿದರು.

ನರಸಿಂಹರಾಜ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರದ ಮಹಾತ್ಮಗಾಂಧಿ ನಗರ ಯೋಜನೆ, ರಾಜ್ಯ ಸರ್ಕಾರದ ವಿಶೇಷ ಅನುದಾನ ಮತ್ತು ಮುಡಾ ಹಾಗೂ ನಗರ ಪಾಲಿಕೆ ಅನುದಾನ ದಲ್ಲಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಕೊರೊನಾ ಸಂದರ್ಭದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಸಾಧ್ಯವಾಗಿರಲಿಲ್ಲ. 36ನೇ ವಾರ್ಡ್ ಉಪ ಚುನಾವಣೆ ಸಂದರ್ಭದಲ್ಲಿ ಜನರಿಗೆ ನೀಡಿದ್ದ ಆಶ್ವಾಸನೆ ಈಡೇರಿಸುವ ನಿಟ್ಟಿನಲ್ಲಿ ವಿವಿಧ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಇದೇ ವೇಳೆ ತಿಳಿಸಿದರು.

ಇಂಟರ್ ನ್ಯಾಷನಲ್ ಇನ್ಸಿಟ್ಯೂಟ್ ಫಾರ್ ಅಸಿಸ್ಟೆಡ್ ರಿಪ್ರೊಡಕ್ಷನ್ ಟೆಕ್ನಾಲಜಿ, ರಿಸರ್ಚ್ ಸೆಂಟರ್‌ನ ಪ್ರಥಮ ಪದವಿ ಪ್ರದಾನ ಸಮಾರಂಭ

ಮೈಸೂರು, ಏ.26(ಎಸ್‌ಬಿಡಿ)– ಮೈಸೂರಿನ ಇಂಟರ್ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ಅಸಿಸ್ಟೆಡ್ ರಿಪ್ರೊಡಕ್ಷನ್ ಟೆಕ್ನಾಲಜಿ ಮತ್ತು ರಿಸರ್ಚ್ ಸೆಂಟರ್‌ನ ಪ್ರಥಮ ಪದವಿ ಪ್ರದಾನ ಸಮಾರಂಭ ಇತ್ತೀಚೆಗೆ ನೆರವೇರಿತು.

ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಅಸಿಸ್ಟೆಡ್ ರಿಪ್ರೊಡಕ್ಷನ್ ಅಂಡ್ ಎಂಬ್ರಿಯಾಲಜಿ ಕೋರ್ಸ್ ಅವಶ್ಯವಾಗಿದೆ. ಈ ಸಂಸ್ಥೆ ಬೆಳೆದು ಜಾಗತಿಕವಾಗಿ ಗುರುತಿಸಿಕೊಳ್ಳಲಿ. ಇಂತಹ ಕೌಶಲ್ಯ, ವೃತ್ತಿ ಆಧರಿತ ಕೋರ್ಸ್‌ಗಳು ಮತ್ತು ತಂತ್ರಜ್ಞಾನ ಸಮಾಜವನ್ನು ಹೆಚ್ಚು ತಲುಪಬೇಕು. ಈ ನಿಟ್ಟಿನಲ್ಲಿ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಹಲವು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿದೆ ಎಂದು ತಿಳಿಸಿದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಇಂಟರ್ ನ್ಯಾಷನಲ್ ಇನ್ಸಿಟ್ಯೂಟ್ ಫಾರ್ ಅಸಿಸ್ಟೆಡ್ ರಿಪ್ರೊಡಕ್ಷನ್ ಟೆಕ್ನಾಲಜಿ ಮತ್ತು ರಿಸರ್ಚ್ ಸೆಂಟರ್‌ನ ಪ್ರಥಮ ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಪ್ರಮಾಣ ಪತ್ರ ನೀಡಿದರು.

ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ಎಂ.ಎ.ಶೇಖರ್ ಮಾತನಾಡಿ, ಧೈರ್ಯ, ಸಹಾನುಭೂತಿ ಹಾಗೂ ಪ್ರಾಮಾಣಿಕತೆ ಜೀವನದ ಯಶಸ್ಸಿನ ಮಂತ್ರಗಳು. ಕನಸು ಕಾಣುವುದನ್ನು ಎಂದಿಗೂ ನಿಲ್ಲಿಸಬಾರದು. ಕಂಡ ಕನಸುಗಳನ್ನು ನನಸು ಮಾಡಲು ಹಗಲಿರುಳು ಶ್ರಮಿಸಬೇಕು. ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅಂತಹವರ ಪ್ರೇರಣಾತ್ಮಕ ಭಾಷಣ ಗಳನ್ನು ಹೆಚ್ಚು ಆಲಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ಲಾನಿಂಗ್ ಮಾನಿಟರಿಂಗ್ ಅಂಡ್ ಇವ್ಯಾಲ್ಯುಯೇಷನ್ ಬೋರ್ಡ್ (ಪಿಎಂಇಬಿ) ನಿರ್ದೇಶಕ ಡಾ.ಎನ್.ಎ.ಲೋಕನಾಥ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯದ ಬಗ್ಗೆ ನಂಬಿಕೆ ಇಡಬೇಕು. ನಿಷ್ಠೆ, ಪ್ರಾಮಾಣಿಕತೆಯೊಂದಿಗೆ ಕಷ್ಟಪಟ್ಟು ಕೆಲಸ ಮಾಡಿ, ತಮ್ಮ ಪೋಷಕರು ಹಾಗೂ ದೇಶಕ್ಕೆ ಹೆಮ್ಮೆ ತರುವಂತೆ ಮುನ್ನಡೆಯಬೇಕು. ನೆಲ್ಸನ್ ಮಂಡೇಲಾ ಅವರು ಹೇಳಿರುವಂತೆ 'ಶಿಕ್ಷಣ' ಜಗತ್ತನ್ನು ಬದಲಿಸುವ ಅತ್ಯಂತ ಶಕ್ತಿಶಾಲಿ ಆಯುಧ. ಅಂದರೆ ಜಗತ್ತು ಬದಲಿಸುವ ಶಕ್ತಿ ನಿಮ್ಮ ಕೈಯ್ಯಲ್ಲಿದೆ ಎಂದು ಮನದಟ್ಟು ಮಾಡಿದರು.

ತರಬೇತಿ ಪಡೆದ ಎಂಬ್ರಾಯಾಲಜಿಸ್ಟ್‌ಗಳ ಕೊರತೆ ನೀಗಿಸುವ ಉದ್ದೇಶ ದೊಂದಿಗೆ ಆರಂಭಿಸಿದ ಅಸಿಸ್ಟೆಡ್ ರಿಪ್ರೊಡಕ್ಷನ್ ಅಂಡ್ ಎಂಬ್ರಾಯಾಲಜಿ ಕೋರ್ಸ್ ಅನ್ನು ಪೂರೈಸಿದ ವಿವಿಧ ರಾಜ್ಯಗಳ ಒಟ್ಟು 40 ವಿದ್ಯಾರ್ಥಿಗಳಿಗೆ ಇದೇ ವೇಳೆ ಪದವಿ ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಹೆಚ್.ವಿ. ಸಂತೃಪ್ತ್, ಪ್ರಿನ್ಸಿಪಾಲ್ ಡಾ.ಶಿಲ್ಪಾ ಸಂತೃಪ್ತ್, ಕೋರ್ಸ್ ನಿರ್ದೇಶಕ ಡಾ.ಎಂ.ಎಸ್. ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 27 ಏಪ್ರಿಲ್ 2022

ಹೊಸಹೊಳಲು ಚಿಕ್ಕಕೆರೆ ಅಭಿವೃದ್ಧಿ ವಿರೋಧಕ್ಕೆ ಖಂಡನೆ



ಕೆ.ಆರ್.ಪೇಟೆ,ಏ.26(ಶ್ರೀನಿವಾಸ್)– ತಾಲೂಕಿನ ಹೊಸಹೊಳಲು ಗ್ರಾಮದ ಚಿಕ್ಕಕೆರೆ ಅಭಿವೃದ್ಧಿಗೆ ರಾಜ್ಯ ಸರ್ಕಾರವು 5 ಕೋಟಿ ರೂಗಳನ್ನು ಬಿಡುಗಡೆ ಮಾಡಿದೆ. ಇದರಿಂದಾಗಿ ಗ್ರಾಮದಲ್ಲಿರುವ ಬೇಲೂರು–ಹಳೇಬೀಡು ಮಾದರಿಯ ಹೊಯ್ಸಳರ ಶಿಲ್ಪಕಲೆ ಹೊಂದಿರುವ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯವನ್ನು ವೀಕ್ಷಿಸಲು ಬರುವ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗುತ್ತಿದೆ. ಆದರೆ ಹೊರಗಿನಿಂದ ಕೆಲವು ವ್ಯಕ್ತಿಗಳು ಕೆರೆಯ ಅಭಿವೃದ್ಧಿ ಕಾಮಗಾರಿಗೆ ವಿರೋಧ ವ್ಯಕ್ತಪಡಿಸುತ್ತಿರುವುದನ್ನು ಹೊಸಹೊಳಲು ಗ್ರಾಮಸ್ಥರು ಖಂಡಿಸಿದ್ದು, ಕೆರೆ ಅಭಿವೃದ್ಧಿಗೆ ಸಂಪೂರ್ಣ ಬೆಂಬಲ ವ್ಯಕ್ತ ಪಡಿಸಿದ್ದಾರೆ.

ಈ ಸಂಬಂಧ ಹೊಸಹೊಳಲು ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಭೆ ಸೇರಿದ್ದ ಗ್ರಾಮಸ್ಥರು ಹೊಸಹೊಳಲು ಚಿಕ್ಕಕೆರೆ ಒತ್ತುವರಿ ತೆರವು ಮಾಡಿ ಅಭಿವೃದ್ಧಿಪಡಿಸಬೇಕೆಂದು ಸುಮಾರು 25 ವರ್ಷಗಳಿಂದ ಒತ್ತಾಯ ಮಾಡುತ್ತಿದ್ದೇವೆ. ಇದರ ಪರಿಣಾಮವಾಗಿ ಸಚಿವ ಡಾ.ಕೆ.ಸಿ.ನಾರಾಯಣಗೌಡ ಸಣ್ಣ ನೀರಾವರಿ ಇಲಾಖೆಯ ಮೂಲಕ 5 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಿರುವುದು ಸಂತಸದ ವಿಚಾರವಾಗಿದೆ. ಈ ಅನುದಾನದಿಂದ ಒಟ್ಟು 28 ಎಕರೆ ವಿಸ್ತೀರ್ಣ ಹೊಂದಿರುವ ಚಿಕ್ಕಕೆರೆಯನ್ನು ಒತ್ತುವರಿ ತೆರವುಗೊಳಿಸಿ, ಹೂಳೆತ್ತಿ, ಸುತ್ತಲೂ ವಾಕಿಂಗ್ ಟ್ರ್ಯಾಕ್ ನಿರ್ಮಾಣ ಮಾಡಲಾಗುತ್ತದೆ. ಬೋಟಿಂಗ್, ಕಾರಂಜಿ, ಸೇರಿದಂತೆ ಹಲವು ಅಭಿವೃದ್ಧಿ ಕೆಲಸಗಳನ್ನು ಕೈಗೊಂಡು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಕಾಮ ಗಾರಿ ಆರಂಭಿಸಲಾಗಿದೆ. ಆದರೆ ನಮ್ಮೂರಿನ ಕೆರೆ ಅಭಿವೃದ್ಧಿಗೆ ಹೊರಗಿನ ವ್ಯಕ್ತಿಗಳು ವಿರೋಧ ವ್ಯಕ್ತಪಡಿ ಸುತ್ತಿರುವುದನ್ನು ಗ್ರಾಮಸ್ಥರು ಖಂಡಿಸಿದರು.

ಕೆರೆ ಅಭಿವೃದ್ಧಿಗೆ ಗ್ರಾಮಸ್ಥರ ಸಂಪೂರ್ಣ ಬೆಂಬಲ ವಿದೆ. ಚಿಕ್ಕಕೆರೆ ನೀರನ್ನು ರೈತರು ಯಾವುದೇ ಬೆಳೆಯನ್ನು ಬೆಳೆಯಲು ಬಳಕೆ ಮಾಡುತ್ತಿಲ್ಲ. ಹಾಗಾಗಿ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಬೆಂಬಲ ನೀಡುವುದಾಗಿ ಹೊಸಹೊಳಲು ಗ್ರಾಮಸ್ಥರು ಘೋಷಣೆ ಮಾಡಿದರು. ಆದರೆ ಗುತ್ತಿಗೆದಾರರು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಪ್ರವಾಸಿ ತಾಣಗಳ ಪಟ್ಟಿಯಲ್ಲಿರುವ ಹೊಸಹೊಳಲು ಗ್ರಾಮಕ್ಕೆ ಪ್ರವಾಸಿಗರನ್ನು ಸೆಳೆಯುವಂತಹ ಗುಣಮಟ್ಟದ ಕೆಲಸ ಮಾಡಬೇಕು. ಕಾಮಗಾರಿ ನಡೆಯುವಾಗ ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿ ಗುಣಮಟ್ಟ ಪರೀಕ್ಷೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕಾಮಗಾರಿಗೆ ಅಡ್ಡಿಪಡಿಸಲು ಯತ್ನಿಸುತ್ತಿರುವ ಹೊರಗಿನ ವ್ಯಕ್ತಿಗಳು ತಾಲೂಕಿನ ಅಭಿವೃದ್ಧಿ ವಿರೋಧಿಗಳಾಗಿದ್ದಾರೆ. ಅಲ್ಲದೆ ಅವರ ಗ್ರಾಮಗಳಲ್ಲಿ ಸಾಕಷ್ಟು ಸಮಸ್ಯೆಗಳಿದ್ದರೂ ತಲೆಕೆಡಿಸಿಕೊಳ್ಳದೇ ಹೊಸಹೊಳಲು ಕೆರೆ ಅಭಿವೃದ್ಧಿ ವಿಚಾರಕ್ಕೆ ಅಡ್ಡಿಪಡಿಸಲು ಮುಂದಾಗಿರುವುದಕ್ಕೆ ಸಭೆಯಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಲಾಯಿತು.

ಸಭೆಯಲ್ಲಿ ಯಜಮಾನ್ ಚಿಕ್ಕೇಗೌಡ, ರಾಮೇಗೌಡ, ಮಂಜೇಗೌಡ, ನಾಗೇಗೌಡ, ಕುಮಾರಗೌಡ, ಪ್ರಕಾಶ್, ನಿವೃತ್ತ ಶಿಕ್ಷಕ ಶಿವಣ್ಣ, ಎಸ್‌ಎಸ್‌ಎನ್ ಬ್ಯಾಂಕ್ ಅಧ್ಯಕ್ಷ ಚಂದ್ರೇಗೌಡ, ನಿರ್ದೇಶಕ ಯೋಗೀಶ್‌ಗೌಡ, ತಾಪಂ ಮಾಜಿ ಸದಸ್ಯ ರಾಜು, ಹರೀಶ್, ಜಯಮ್ಮ, ರಾಜು, ಪುರಸಭಾ ಸದಸ್ಯರಾದ ಹೆಚ್.ಆರ್.ಲೋಕೇಶ್, ಮಂಜುನಾಥ್, ಹೆಚ್.ಜೆ.ಶ್ರೀನಿವಾಸ್, ಮುಖಂಡರಾದ ವೆಂಕಟೇಶ್, ಶ್ರೀನಿವಾಸ್, ಬಲರಾಮೇಗೌಡ, ಮಂಜು, ಅನಂತು, ಗಂಟೆ ಗೋಪಾಲ್, ಹೆಚ್.ಎಸ್.ರಘು, ಮಂಜುನಾಥಗೌಡ, ಸುರೇಶ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಎಳನೀರು ಸಂಸ್ಕರಣಾ ಘಟಕಕ್ಕೆ ಸಚಿವ ವಿ.ಮುನಿರತ್ನ ಭೇಟಿ



ಭಾರತೀನಗರ,ಏ.26(ಅಣ್ಣೂರು ಸತೀಶ್)– ಇಲ್ಲಿಗೆ ಸಮೀಪದ ಭತ್ತದಹೊಸಹಳ್ಳಿ ಗೇಟ್ ಬಳಿಯಿರುವ ರಾಜ್ಯದ ಮೊದಲ ಎಳನೀರು ಸಂಸ್ಕರಣಾ ಘಟಕಕ್ಕೆ ತೋಟಗಾರಿಕೆ ಸಚಿವ ವಿ.ಮುನಿರತ್ನ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರೈತರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಘಟಕಕ್ಕೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ರೈತರು ಇದನ್ನು ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಪ್ರೋತ್ಸಾಹ ಧನ ಕೊಡಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಘಟಕಕ್ಕೆ ಮುನಿರತ್ನ ಅವರು ಭೇಟಿ ನೀಡಿದ ವೇಳೆ ಘಟಕದಲ್ಲಿ ತಯಾರು ಮಾಡುತ್ತಿರುವ ಉತ್ಪನ್ನಗಳ ರುಚಿ ಸವಿಯುವ ಮೂಲಕ ಗಮನ ಸೆಳೆದರು. ಇದೇ ವೇಳೆ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಮಂಜುನಾಥ್, ರಾಜು, ಸಹಾಯಕ ನಿರ್ದೇಶಕಿ ಕೆ.ಎಂ.ರೇಖಾ, ಅಧಿಕಾರಿಗಳಾದ ಸಂಪತ್ತು, ಪದ್ಮ ಇತರ ಅಧಿಕಾರಿಗಳು ಇದ್ದರು.

ಸಂಸದೆ ಸುಮಲತಾ ಬಿಜೆಪಿ ಸೇರುತ್ತಾರೆಂಬುದು ಸತ್ಯಕ್ಕೆ ದೂರ

ಶ್ರೀರಂಗಪಟ್ಟಣ;ಏ.26(ವಿನಯ್ ಕಾರೇಕುರ)–ಸಂಸದೆ ಸುಮಲತಾ ಅಂಬರೀಶ್ ಬಿಜೆಪಿ ಸೇರುತ್ತಾರೆ ಎಂಬ ವದಂತಿ ಶುದ್ಧ ಸುಳ್ಳು ಎಂದು ಕಾಂಗ್ರೆಸ್ ಮುಖಂಡ ಹಾಗೂ ಸಂಸದೆ ಸುಮಲತಾ ಆಪ್ತ ದರ್ಶನ್ ಲಿಂಗರಾಜು ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದರು ಸದ್ಯಕ್ಕೆ ಯಾವ ಪಕ್ಷವನ್ನೂ ಸೇರುತ್ತಿಲ್ಲ. ಸ್ವಾಭಿಮಾನಿ ಪಡೆಯಿಂದ ಜಿಲ್ಲೆಯಲ್ಲಿ ಎಲ್ಲಾ ಪಕ್ಷಗಳ ಮುಖಂಡರು, ವಿವಿಧ ಸಂಘ ಸಂಸ್ಥೆಗಳು ಜಿಲ್ಲೆಯ ಜನರಿಂದ ಅಭೂತಪೂರ್ವ ಯಶಸ್ಸಿನಿಂದ ಗೆಲವು ಸಾಧಿಸಿ ಜಿಲ್ಲೆಯ ಜನರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಸದ್ಯ ಸಂಸದರು ಯಾವ ಪಕ್ಷಗಳ ಕಡೆಗೂ ಒಲವು ತೋರಿಲ್ಲ, ಮುಂದೆ ತೆಗೆದುಕೊಳ್ಳುವ ನಿರ್ಧಾರಗಳ ಬಗ್ಗೆ ಬೆಂಬಲಿಗರು ಹಾಗೂ ಮುಖಂಡರುಗಳೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು ಎಂದರು.

ರೈತರ ಸಮಸ್ಯೆ ಹಾಗೂ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಲು ಹಾಗೂ ಕಲಾಪದಲ್ಲಿ ಭಾಗವಹಿಸಲು ದೆಹಲಿಗೆ ತೆರಳುತ್ತಿದ್ದು, ಜಿಲ್ಲೆಯಲ್ಲಿ ಅವರು ಸಿಗುತ್ತಿಲ್ಲ ಎಂಬ ಆರೋಪ ಸರಿಯಲ್ಲ ಎಂದು ಸಮರ್ಥಿಸಿಕೊಂಡರು.

ಮೈಸೂರು–ಬೆಂಗಳೂರು ಹೆದ್ದಾರಿಯ ಗೌಡಹಳ್ಳಿ ಬಳಿ ಅಂಡರ್ ಪಾಸ್ ನಿರ್ಮಿಸುವ ಸಂಬಂಧ ಸುಮಲತಾ ಕೇಂದ್ರ ಸಚಿವರ ಜೊತೆ ಮಾತನಾಡಿ ಜಿಲ್ಲೆಯ ಎಲ್ಲಾ ಬೈಪಾಸ್ ರಸ್ತೆಗಳ ಸಮಸ್ಯೆ ಕುರಿತು ಮನವರಿಕೆ ಮಾಡಿದ್ದಾರೆ. ಇದೀಗ ನಮ್ಮ ತಾಲೂಕಿನ ಗೌಡಹಳ್ಳಿ ಬಳಿಯ ರಸ್ತೆಯ ಬಗ್ಗೆ ಪ್ರಮುಖವಾಗಿ ಚರ್ಚೆ ಮಾಡಿ ಅಂಡರ್ ಪಾಸ್ ರಸ್ತೆ ನಿರ್ಮಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಇದೀಗ ಮೈಸೂರು ಸಂಸದರು ಕೂಡ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ನಡೆಯುವ ಕೆಲಸಕ್ಕೆ ಎಲ್ಲರೂ ಒತ್ತು ಕೊಟ್ಟು ಅಭಿವೃದ್ಧಿ ಕೆಲಸಗಳಿಗೆ ಮುಂದಾಗಬೇಕು ಎಂದರು.

ನಮ್ಮ ತಂದೆ ಎಸ್.ಎಲ್.ಲಿಂಗರಾಜು ಹಿಂದಿನಿಂದಲೂ ಕಾಂಗ್ರೆಸ್ ಪಕ್ಷದಲ್ಲೇ ದುಡಿಯುತ್ತಿದ್ದು, 2023ರ ವಿಧಾನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಅವರು ಸಹ ಪ್ರಬಲ ಆಕಾಂಕ್ಷಿತ ಅಭ್ಯರ್ಥಿ. ಅವರ ಮಗನಾಗಿ ನಾನು ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ತಂದೆ ಲಿಂಗರಾಜು ಸಹ ಸಕ್ರಿಯವಾಗಿ ಪಕ್ಷದಲ್ಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ನಗರ ಘಟಕ ಮಾಜಿ ಅಧ್ಯಕ್ಷ ರಘು, ಪುರಸಭೆ ಮಾಜಿ ಸದಸ್ಯ ಈ. ಕುಮಾರ್ ಪಾಪಣ್ಣಿ, ಮುಖಂಡರಾದ ನಗುವನಹಳ್ಳಿ ಮಹದೇವಸ್ವಾಮಿ, ನೆಲಮನೆ ಯಶವಂತ್, ಬಲ್ಲೇನಹಳ್ಳಿ ರವಿ, ಚೇತನ್ ಇತರರು ಇದ್ದರು.


ಎನ್.ಕೆ.ನಾಗೇಶ್ ನಿಧನ



ಕೆ.ಆರ್.ಪೇಟೆ,ಏ.26– ತಾಲೂಕಿನ ಕೊತ್ತಮಾರನಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕ ಎನ್.ಕೆ. ನಾಗೇಶ್ (61) ಸೋಮವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಹುಟ್ಟೂರು ಕೊತ್ತಮಾರನಹಳ್ಳಿ ಗ್ರಾಮದಲ್ಲಿ ನಡೆಯಿತು.

ಬೊಪ್ಪಸಮುದ್ರ ಗ್ರಾಮದಲ್ಲಿ ಚಿರತೆ ಸೆರೆ



ಭಾರತೀನಗರ.ಏ.26(ಅಣ್ಣೂರು ಸತೀಶ್)– ಇಲ್ಲಿಗೆ ಸಮೀಪದ ಬೊಪ್ಪಸಮುದ್ರ ಗ್ರಾಮದಲ್ಲಿ ಚಿರತೆಯೊಂದು ಬೋನಿಗೆ ಬಿದ್ದಿರುವ ಘಟನೆ ಜರುಗಿದೆ.

2 ತಿಂಗಳಿಂದ ಗ್ರಾಮದಲ್ಲಿ 2 ಮೇಕೆ, 6 ನಾಯಿಗಳನ್ನು ತಿಂದು ಗ್ರಾಮಸ್ಥರಲ್ಲಿ ಆತಂಕವನ್ನುಂಟುಮಾಡಿದ್ದ ಚಿರತೆ ಕೊನೆಗೂ ಸೆರೆಸಿಕ್ಕಿದೆ. ಕಳೆದ 2 ತಿಂಗಳ ಹಿಂದೆ ಗ್ರಾಮದಲ್ಲಿ ಚಿರತೆ ಕಾಣಿಸಿಕೊಂಡಾಗ ಗ್ರಾಮಸ್ಥರು ಅರಣ್ಯ ಇಲಾಖೆಗೆ ದೂರು ನೀಡಿದ ಮೇರೆಗೆ ಗ್ರಾಮದ ಹೊರವಲಯದ ಮಲ್ಲೇಶ್ ಎಂಬವರ ಗದ್ದೆಯಲ್ಲಿ ಚಿರತೆಯ ಸೆರೆಗೆ ಬೋನ್ ಇಡಲಾಗಿತ್ತು.

ಕಳೆದ 15 ದಿನಗಳಿಂದಲೂ ಬೋನಿಗೆ ಬೀಳದೆ ಸತಾಯಿಸುತ್ತಿದ್ದ ಚಿರತೆ ಕೊನೆಗೂ ಮಂಗಳವಾರ ಮುಂಜಾನೆ ಬೋನಿಗೆ ಬಿದ್ದಿದೆ. ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯನ್ನು ನಾಗರಹೊಳೆ ಅರಣ್ಯ ಪ್ರದೇಶಕ್ಕೆ ಬಿಡಲು ಕ್ರಮಕೈಗೊಂಡಿದ್ದಾರೆ.

ಚಿರತೆಯ ಸೆರೆಯಿಂದ ಗ್ರಾಮಸ್ಥರು ಆತಂಕದಿಂದ ದೂರವಾಗಿದ್ದಾರೆ.

ಮೇಲುಕೋಟೆಯಲ್ಲಿ ರಾಮಾನುಜಾಚಾರ್ಯರ ಜಯಂತ್ಯುತ್ಸವ ಆರಂಭ



ಮೇಲುಕೋಟೆ,ಏ.26– ಪುಷ್ಪಾಲಂಕೃತರ ಸಮರಭೂಪಾಲ ವಾಹನೋತ್ಸವ ಮಂಗಳವಾರ ನೆರವೇರುವುದರೊಂದಿಗೆ ರಾಮಾನುಜಾಚಾರ್ಯರ 1005ನೇ ಜಯಂತ್ಯುತ್ಸವದ ಧಾರ್ಮಿಕ ಕೈಂಕರ್ಯಗಳು ಮೇಲುಕೋಟೆಯಲ್ಲಿ ಆರಂಭವಾದವು.

ರಾಮಾನುಜರ ಕರ್ಮಭೂಮಿಯಾದ ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯವನ್ನು ತಳಿರು, ತೋರಣ ಬಾಳೆಕಂದು ಚಪ್ಪರಗಳಿಂದ ಸಿಂಗಾರ ಮಾಡಲಾಗಿತ್ತು. ರಾಮಾನುಜಾಚಾರ್ಯರನ್ನು ಭವ್ಯವಾದ ಪುಷ್ಪಾಹಾರಗಳಿಂದ ಅಲಂಕರಿಸಿ ಮಂಗಳವಾದ್ಯದೊಂದಿಗೆ ಉತ್ಸವ ನೆರವೇರಿಸಿ ಸಮರಭೂಪಾಲ ವಾಹನೋತ್ಸವವನ್ನು ಸಂಭ್ರಮದಿಂದ ನೆರವೇರಿಸಲಾಯಿತು. ನೂರಾರು ಭಕ್ತರು ಆಚಾರ್ಯರ ಮೊದಲ ದಿನದ ಉತ್ಸವದ ವೈಭವವನ್ನು ಕಣ್ತುಂಬಿಕೊಂಡರು.

ಬೆಳಗ್ಗೆ 10 ಗಂಟೆಯ ವೇಳೆಗೆ ರಾಮಾನುಜಾಚಾರ್ಯರಿಗೆ ಅಭಿಷೇಕ ಆರಂಭವಾಯಿತು. ಯದುಗಿರಿ ಯತಿರಾಜ ಮಠದ ಪೀಠಾಧಿಪತಿ ಶ್ರೀಮನ್ನಾರಾಯಣ ರಾಮಾನುಜಜೀಯರ್ ಸ್ವಾಮೀಜಿ ನೇತೃತ್ವದಲ್ಲಿ ಅಭಿಷೇಕ ಮತ್ತು ಸೇವಾ ಕೈಂಕರ್ಯಗಳು ನೆರವೇರಿದವು. ಆಚಾರ್ಯರಿಗೆ ಹಾಲು, ಜೇನು, ಮೊಸರು ಹಾಗೂ ಮಂಗಳ ದ್ರವ್ಯಗಳಿಂದ ಅಭಿಷೇಕ ನೆರವೇರಿತು. ಸಂಜೆ ಬೆಳ್ಳಿಯ ಪಲ್ಲಕ್ಕಿಯಲ್ಲಿ ರಾಮಾನುಜರ ಉತ್ಸವ ದಿವ್ಯಪ್ರಬಂಧ ಗೋಷ್ಠಿಯೊಂದಿಗೆ ನೆರವೇರುವ ಮೂಲಕ ದೈವೀಕ ಸಾನ್ನಿಧ್ಯದ ವಾತಾವರಣ ಮೇಲುಕೋಟೆಯಲ್ಲಿ ಸೃಷ್ಟಿಯಾಗಿತ್ತು.

ಮೇ 5 ರಂದು ನಡೆಯುವ ರಾಮಾನುಜರ 1005ನೇ ಜಯಂತ್ಯುತ್ಸವಕ್ಕೆ ಸಕಲ ರೀತಿಯಲ್ಲೂ ದೇವಾಲಯ ಸಜ್ಜುಗೊಂಡಿದೆ. ರಾಮಾನುಜರ ಸನ್ನಿಧಿಯ ಅರ್ಚಕ ವಿದ್ವಾನ್ ಬಿ.ವಿ. ಆನಂದಾಳ್ವಾರ್ ಪರಿಶ್ರಮದಲ್ಲಿ ವಾಹನೋತ್ಸವಗಳು, ರಥೋತ್ಸವ ಹಾಗೂ ಇತರ ಸೇವಾಕೈಂಕರ್ಯಗಳು ನಡೆಯುತ್ತಿದ್ದು, ಸ್ಥಾನೀಕರು, ಕೈಂಕರ್ಯಪರರ ನೇಮಿಸೇವೆಗಳು ಸಹ ಆಚಾರ್ಯರ ತಿರುನಕ್ಷತ್ರ ಮಹೋತ್ಸವದ ವೈಭವವನ್ನು ಹೆಚ್ಚಿಸುತ್ತಿದೆ. 10 ದಿನಗಳ ಅವಧಿಯಲ್ಲಿ ರಾಮಾನುಜರಿಗೆ ವೈವಿಧ್ಯಮಯ ಪ್ರಸಾದಗಳು ನಿವೇದನ ರೂಪದಲ್ಲಿ ಸಮರ್ಪಣೆಯಾಗಲಿದೆ.



ಕೆ.ಎಂ.ದೊಡ್ಡಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ವೆಂಕಟೇಶ್ವರ ದೇವ ಸ್ಥಾನದ ಅಭಿವೃದ್ಧಿ ಕಾರ್ಯಕ್ಕೆ ಆರ್.ಕೆ.ವಿದ್ಯಾಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿನಯ್ ರಾಮಕೃಷ್ಣ ಧನಸಹಾಯ ನೀಡಿದ ಹಿನ್ನೆಲೆಯಲ್ಲಿ ಟ್ರಸ್ಟ್‌ನ ವತಿಯಿಂದ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಕಾರ್ಯಾಧ್ಯಕ್ಷ ವೆಂಕಟೇಶ್, ಖಜಾಂಚಿ ನಾಗಪ್ಪ, ಪದಾಧಿಕಾರಿಗಳಾದ ಕೆಂಚೇಗೌಡರ ಶ್ರೀನಿವಾಸ್, ವಿಶ್ವ, ಅಣ್ಣೂರು ಸತೀಶ್, ಬಿ.ಸಿ.ವೆಂಕಟೇಶ್, ಗೊಬ್ಬರದ ಅಂಗಡಿ ಕೃಷ್ಣ, ಪುಟ್ಟಣ್ಣ, ಚಿಕ್ಕೈದೇಗೌಡ ಸೇರಿದಂತೆ ಇತರರಿದ್ದರು.

ಈ ಬೇಸಿಗೆ ಧಗೆಯಲ್ಲಿ ನಿಂಬೆಗೆ ಭಾರೀ ಡಿಮ್ಯಾಂಡ್



ಇತರೆ ಹಣ್ಣುಗಳ ಬೆಲೆಯಲ್ಲೂ ಏರಿಕೆ; ತರಕಾರಿ ತಲೆನೋವಿಲ್ಲ



ಮೈಸೂರು, ಏ.26(ಎಂಕೆ)– ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಿಸಿಲಿನ ಧಗೆಯಂತೆ ನಿಂಬೆ ಹಣ್ಣಿನ ದರವು ಗಗನಕ್ಕೇರಿದ್ದು, ಗ್ರಾಹಕರ ಬಾಯಿ ಒಣಗಿಸಿದೆ.

ಪೂಜಾ ಕೈಂಕರ್ಯ, ಮಾಂಸದೂಟ, ತಂಪು ಪಾನಿಯ ಸೇರಿದಂತೆ ಹಲವು ಉತ್ಪನ್ನಗಳ ತಯಾರಿಕೆಗೂ ಅತ್ಯವಶ್ಯಕವಾಗಿರುವ ನಿಂಬೆ ಹಣ್ಣಿಗೆ ಭಾರೀ ಬೇಡಿಕೆ ಇದ್ದು, ಬಿಸಿಲಿನ ಕಾವು ಮತ್ತಷ್ಟು ಹೆಚ್ಚಿಸಿದೆ. ಕಳೆದ ವರ್ಷದ ಮಳೆಗಾಲದಲ್ಲಾದ ಅತಿವೃಷ್ಟಿ, ಬೆಳೆ ನಾಶದಿಂದ ಇಳುವರಿ ಕಡಿಮೆಯಾಗಿ ನಿಂಬೆ ಹಣ್ಣಿನ ಬೆಲೆ ಏರಿಕೆಯಾಗಿದೆ. ಅಧಿಕವಾಗಿ ನಿಂಬೆ ಬೆಳೆಯುವ ವಿಜಾಪುರ ಜಿಲ್ಲೆಯಿಂದ ಬರುತ್ತಿರುವ ಪ್ರಮಾಣವೂ ಕಡಿಮೆಯಾಗಿದೆ ಎಂದು ನಿಂಬೆ ಹಣ್ಣು ವ್ಯಾಪಾರಸ್ಥರು ತಿಳಿಸಿದ್ದಾರೆ.

ಮೈಸೂರಿನ ದೇವರಾಜ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆ ಸೇರಿದಂತೆ ವಿವಿಧೆಡೆ ದೊಡ್ಡ ಗಾತ್ರದ ಒಂದು ನಿಂಬೆ ಹಣ್ಣಿ 10 ರೂ. ಹಾಗೂ ಮಧ್ಯಮ ಗಾತ್ರ ನಿಂಬೆ ಹಣ್ಣುಗಳನ್ನು 20 ರೂ.ಗೆ 3–4ರಂತೆ ಮಾರಾಟ ಮಾಡಲಾಗುತ್ತಿದೆ. 8 ಸಾವಿರ ರೂ.ಕೊಟ್ಟು ಒಂದು ಮೂಟೆ ನಿಂಬೆ ಹಣ್ಣು ತಂದರೆ, ಅದರಲ್ಲಿ 1200 ರಿಂದ 1300(ಮಧ್ಯಮ ಗಾತ್ರ) ನಿಂಬೆ ಹಣ್ಣುಗಳಿರುತ್ತವೆ. ತೀರ ಸಣ್ಣಗಿದ್ದರೆ ಯಾರೂ ಕೇಳುವುದಿಲ್ಲ ಎಂದು ದೇವರಾಜ ಮಾರುಕಟ್ಟೆಯ ನಿಂಬೆ ಹಣ್ಣಿನ ವ್ಯಾಪಾರಿ ಚಂದನ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಹಣ್ಣುಗಳ ಬೆಲೆ ದುಬಾರಿ: ನಿಂಬೆ ಹಣ್ಣು ಸೇರಿದಂತೆ ಇನ್ನಿತರೆ ಹಣ್ಣುಗಳ ಬೆಲೆಯೂ ದುಬಾರಿಯಾಗಿದ್ದು, ಗ್ರಾಹಕರು ಬಿಸಿಲಿನ ಧಗೆಯಿಂದ ಪಾರಾಗಲು ಭಾರೀ ಹಣ ನೀಡಬೇಕಾಗಿದೆ. ಸೇಬು ಕೆ.ಜಿಗೆ 180 ರೂ., ದಾಳಿಂಬೆ 200 ರೂ., ಕಿತ್ತಳೆ 140–160 ರೂ., ಮೋಸಂಬಿ 100 ರೂ., ಪಪ್ಪಾಯಿ 30 ರೂ., ಕಲ್ಲಂಗಡಿ 30 ರೂ., ಅನಾನಸ್ 80 ರೂ., ಕರ್ಬೂಜ 60 ರೂ., ದ್ರಾಕ್ಷಿ 100 ರೂ., ಕಪ್ಪು ದ್ರಾಕ್ಷಿ 200 ರೂ., ಮಾವು 180–320 ರೂ., ಬಟರ್ ಫ್ರೂಟ್ 220 ರೂ. ಇದೆ ಎಂದು ಹಣ್ಣಿನ ವ್ಯಾಪಾರಿ ಮಹಮ್ಮದ್ ತಿಳಿಸಿದರೆ, ಬಾಳೆ ಹಣ್ಣಿನ ವ್ಯಾಪಾರಿ ಎಂ.ಜಿ.ಶಿವಕುಮಾರ್, ಏಲಕ್ಕಿ ಬಾಳೆ ಹಣ್ಣು ಕೆ.ಜಿಗೆ 70–80 ರೂ., ರಸ ಬಾಳೆ 80–90 ರೂ., ಪಚ್ಚಬಾಳೆ 28–30 ರೂ. ಹಾಗೂ ಕಾಡು ಬಾಳೆ 40–50 ರೂ. ಇದೆ ಎಂದು ಮಾಹಿತಿ ನೀಡಿದರು.

ತಲೆ ಬಿಸಿ ತರದ ತರಕಾರಿ ಬೆಲೆ: ಹಣ್ಣುಗಳ ಬೆಲೆ ಹೆಚ್ಚಳದ ನಡುವೆ ಟೊಮೆಟೊ ಹೊರತು ಪಡಿಸಿ ಇನ್ನುಳಿದ ತರಕಾರಿಗಳ ಬೆಲೆಯಲ್ಲಿ ಹೆಚ್ಚಳವಾಗದಿರುವುದು ಗ್ರಾಹಕರಿಗೆ ಸಮಾಧಾನ ತಂದಿದೆ. ಟೊಮೆಟೊ ಕೆ.ಜಿ.ಗೆ 30–40 ರೂ. ಇದ್ದರೆ, ಬೀನ್ಸ್ 60 ರೂ., ಕ್ಯಾರೆಟ್ 30 ರೂ., ಬಿಟ್‌ರೂಟ್ 20 ರೂ., ನುಗ್ಗೆಕಾಯಿ 35–40 ರೂ., ಗೆಡ್ಡೆ ಕೋಸು 30 ರೂ., ದಪ್ಪ ಮೆಣಸಿನಕಾಯಿ 80 ರೂ., ಆಲೂಗಡ್ಡೆ 25 ರೂ., ಹಿರೇಕಾಯಿ 20 ರೂ., ಆಗಲಕಾಯಿ 40 ರೂ., ಬದನೆಕಾಯಿ 12 ರೂ., ಎಲೆಕೋಸು 6 ರೂ., ಈರುಳ್ಳಿ 15–20 ರೂ., ಬೆಳ್ಳುಳ್ಳಿ 60–80 ರೂ. ಇದೆ ಎಂದು ತರಕಾರಿ ವ್ಯಾಪಾರಿ ಇಬ್ರಾಹಿಂ ಇಬು ತಿಳಿಸಿದರು.

ಮಾರ್ಚ್ ತಿಂಗಳ ವೇತನ ಬಿಡುಗಡೆಗೆ ಮರಿತಿಬ್ಬೇಗೌಡ ಆಗ್ರಹ



ಮೈಸೂರು, ಏ.26–ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮತ್ತು ಅನುದಾನಿತ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಕಳೆದ ಮಾರ್ಚ್ ತಿಂಗಳ ವೇತನ ಬಿಡುಗಡೆ ಮಾಡುವಂತೆ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮುಖ್ಯಮಂತ್ರಿಗಳಲ್ಲಿ ಆಗ್ರಹಿಸಿದ್ದಾರೆ.

ವೇತನ ಸಿಗದೆ ಸಿಬ್ಬಂದಿಗಳು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಪ್ರತಿ ತಿಂಗಳು ಮನೆ ಬಾಡಿಗೆ, ಸಾಲದ ಕಂತು, ವಿಮೆ, ನೀರು ಮತ್ತು ವಿದ್ಯುತ್ ಬಿಲ್ಲು ಸೇರಿದಂತೆ ಇನ್ನಿತರೆ ಬಿಲ್ಲುಗಳನ್ನು ಪಾವತಿಸಬೇಕಾಗಿರುತ್ತದೆ. ಆದ್ದರಿಂದ ಅವರಿಗೆ ವೇತನ ಬಿಡುಗಡೆ ಮಾಡುವಂತೆ ಅವರು ತಮ್ಮ ಹೇಳಿಕೆ ಮೂಲಕ ಒತ್ತಾಯಿಸಿದ್ದಾರೆ.

ಕೋವಿಡ್ ಸಮಯದಲ್ಲಿ ಜೀವದ ಹಂಗನ್ನು ತೊರೆದು ವೈದ್ಯಕೀಯ ಸಿಬ್ಬಂದಿ ಮತ್ತು ಶಿಕ್ಷಕರು ಕೆಲಸ ಮಾಡಿದ್ದಾರೆ. ಇವರಿಗೆ ಕೆ–2 ಮತ್ತು ಹೆಚ್.ಆರ್.ಎಂ.ಎಸ್. ಸಮಸ್ಯೆ ಉಂಟಾಗಿದೆ ಎಂಬ ಕಾರಣ ತಿಳಿಸಿ, ಇದುವರೆಗೂ ವೇತನ ಬಿಡುಗಡೆಗೊಳಿಸದೆ ಇರುವುದು ವಿಷಾದನೀಯ ಸಂಗತಿ. ಕೆ–2 ಮತ್ತು ಹೆಚ್.ಆರ್.ಎಂ.ಎಸ್. ಆಯಾ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿದೆ. ಸಚಿವಾಲಯದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ನೌಕರರು ಪ್ರತಿ ತಿಂಗಳು ನಿಗದಿತ ದಿನಾಂಕದಂದೇ ವೇತನ ಪಡೆಯುತ್ತಾರೆ. ಆದರೆ ಇತರೆ ಇಲಾಖೆಯ ನೌಕರರಿಗೆ ವೇತನ ಬಿಡುಗಡೆಗೊಳಿಸುವಲ್ಲಿ ನಿರ್ಲಕ್ಷ್ಯ ತೋರುತ್ತಿರುವುದು ಖಂಡನೀಯ ಎಂದು ಅವರು ತಿಳಿಸಿದ್ದಾರೆ.

ಎಚ್ಚೆತ್ತ ಮೈಸೂರು ನಗರ ಪಾಲಿಕೆ : ಗುತ್ತಿಗೆ ವಾಹನಗಳಿಗೆ ಬೈ... ಬೈ

● ಸ್ವಂತ ವಾಹನ ಹೊಂದಲು ನಿರ್ಧಾರ ● ಹಂತ ಹಂತವಾಗಿ ಹೊಸ ವಾಹನ ಖರೀದಿ ● ಇವುಗಳ ಇಂಧನಕ್ಕಾಗಿ ಪೆಟ್ರೋಲ್ ಬಂಕ್, ಸರ್ವೀಸ್ ಸೆಂಟರ್ ಸ್ಥಾಪನೆ







ಗಣೇಶ್. ಎ

ಮೈಸೂರು, ಏ.26– ಮೈಸೂರು ಮಹಾನಗರ ಪಾಲಿಕೆ ವಾಹನಗಳಿಗಾಗಿ ಎರಡು ಪೆಟ್ರೋಲ್ ಬಂಕ್ ಮತ್ತು ಎರಡು ಸರ್ವೀಸ್ ಸ್ಟೇಷನ್ ಸ್ಥಾಪನೆ ಮಾಡಲಾಗುತ್ತಿದ್ದು, ತಿಂಗಳಿನಲ್ಲಿ ಕಾಮಗಾರಿ ಆರಂಭವಾಗಲಿದೆ. ಮೈಸೂರು ಮಹಾನಗರ ಪಾಲಿಕೆಯ ವಾಹನಗಳ ಸ್ಥಿತಿಗತಿಗಳ ಕುರಿತು ಸಾರ್ವಜನಿಕ ವಲಯದಲ್ಲಿ ಭಾರೀ ಆಕ್ರೋಶ ವ್ಯಕ್ತವಾಗಿತ್ತು. ಕೆಲವು ಬಾರಿ ಅವುಗಳ ದುಸ್ಥಿತಿಯನ್ನು ನೋಡಿ, ಫೋಟೋ ಕ್ಲಿಕ್ಕಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿ ಪಾಲಿಕೆ ವಾಹನಗಳ ದುಸ್ಥಿತಿಯ ಬಗ್ಗೆ ಅಪಹಾಸ್ಯ ಮಾಡುತ್ತಿದ್ದರು.

ಪಾಲಿಕೆಯಲ್ಲಿ ಕಡಿಮೆ ಸಾಮರ್ಥ್ಯವುಳ್ಳ, 15 ವರ್ಷ ಪೂರೈಸಿದ ಹಳೇ ವಾಹನ ಮತ್ತು ಹೊರಗುತ್ತಿಗೆಯ ವಾಹನಗಳೇ ತುಂಬಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ ಪಾಲಿಕೆ ಆಯುಕ್ತರು, ಪಾಲಿಕೆಯಲ್ಲಿ ಸ್ವಂತ ವಾಹನಗಳಿದ್ದರೆ ಉತ್ತಮ ಎಂದು ನಿರ್ಧರಿಸಿ ಹೊಸ ವಾಹನಗಳ ಖರೀದಿಗೆ ಮುಂದಾಗಿದ್ದು, ಈಗಾಗಲೇ ಅನೇಕ ವಾಹನಗಳನ್ನು ಪಾಲಿಕೆ ಖರೀದಿ ಮಾಡಿದೆ.

ಸ್ವಚ್ಛ ಭಾರತ್ ಮಿಷನ್ ಅಡಿ 65 ಟ್ರಾಕ್ಟರ್‌ಗಳನ್ನು ಪಾಲಿಕೆ ಖರೀದಿ ಮಾಡಿದ್ದು, ಅದರಲ್ಲಿ 16 ಟ್ರಾಕ್ಟರ್‌ಗಳಿಗೆ ಮಾ.5 ರಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದ್ದರು. ಆ 16 ಟ್ರಾಕ್ಟರ್‌ಗಳು ರಸ್ತೆ ಬದಿಯ ಕಸ ತೆಗೆಯಲು ಬಳಕೆಯಾಗುತ್ತಿವೆ. ಬಾಕಿ 49 ಟ್ರಾಕ್ಟರ್‌ಗಳಿಗೆ ಟ್ರೈಲರ್ ಅಳವಡಿಕೆ ಕಾರ್ಯ ನಡೆಯುತ್ತಿದ್ದು ಮೇ ತಿಂಗಳ ಮೊದಲ ವಾರದಲ್ಲಿ ಅವುಗಳು ಸಹ ರಸ್ತೆಗಿಳಿಯಲಿವೆ.

ಹೊಸ ವಾಹನಗಳು : ಮೈಸೂರು ನಗರ ದಿನೇ ದಿನೇ ವೇಗವಾಗಿ ಬೆಳೆಯುತ್ತಿದ್ದು, ಅದನ್ನು ಗಮನದಲ್ಲಿಟ್ಟುಕೊಂಡು ಹೊರಗುತ್ತಿಗೆ ವಾಹನಗಳನ್ನು ಉಪಯೋಗಿಸುತ್ತಿದ್ದ ಪಾಲಿಕೆ, ಈ ವಾಹನಗಳಿಗೆ ಗುಡ್ ಬೈ ಹೇಳಿ ಸ್ವಂತ ವಾಹನಗಳ ಖರೀದಿಸಿದ್ದು, ಯಾವುದೇ ಮಧ್ಯವರ್ತಿಗಳಿಗೆ ಮಣೆ ಹಾಕದೆ ನೇರವಾಗಿ ಕಂಪನಿಗಳೊಂದಿಗೆ ಮಾತುಕತೆ ನಡೆಸಿ ಖರೀದಿಸುತ್ತಿದೆ. ಟಾಟಾ ಕಂಪನಿಯಿಂದ 130 ಟಾಟಾ ಏಸ್‌ಗಳ ಖರೀದಿಗೆ ಮುಂದಾಗಿದ್ದು ಅವುಗಳಿಗೆ ಟೆಂಡರ್ ಕರೆಯಲಾಗಿದೆ. ಟಾಟಾ ಏಸ್‌ಗಳು ಮೇ ಮೊದಲ ವಾರ ಪಾಲಿಕೆ ತಲುಪಲಿವೆ. ಮೊದಲು ಪಾಲಿಕೆಯಲ್ಲಿ 5 ಜೆಸಿಬಿಗಳಿದ್ದವು. ಈಗ ಮತ್ತೆ 5 ಜೆಸಿಬಿಗಳನ್ನು ಖರೀದಿ ಮಾಡಿರುವ ಪಾಲಿಕೆ 9 ವಲಯ ಕಚೇರಿಗಳಿಗೆ ತಲಾ ಒಂದೊಂದು ಜೆಸಿಬಿಯನ್ನು ನೀಡಿದ್ದು, ಒಂದನ್ನು ಪ್ಲಾಂಟ್‌ನಲ್ಲಿ ಉಳಿಸಿಕೊಂಡಿದೆ.

> 6 ಪಾಲಿಕೆಯಲ್ಲಿ 15 ವರ್ಷಗಳ ಹಳೆ ಆಟೋಗಳು ಪಾಲಿಕೆಯಲ್ಲಿ ಇದ್ದು, ಅವುಗಳ ಗುಣಮಟ್ಟ ಮತ್ತು ಸಾಮರ್ಥ್ಯ ಕ್ಷೀಣಿಸಿರುವ ಹಿನ್ನೆಲೆಯಲ್ಲಿ ಅವುಗಳ ಬದಲಾವಣೆ ಮಾಡಲಾಗುತ್ತಿದೆ. ಮೊದಲು ಹೊರಗುತ್ತಿಗೆ ವಾಹನ, ಚಾಲಕರು, ಇಂಧನಕ್ಕೆ ಹೆಚ್ಚು ಹಣ ವ್ಯಯಿಸಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ಯಾವುದೇ ಹೊರಗಿನ ವಾಹನಗಳನ್ನು ಪಾಲಿಕೆ ಬಳಸುವುದಿಲ್ಲ. ಪಾಲಿಕೆಯಲ್ಲಿ ನಮ್ಮದೇ ಸ್ವಂತ ವಾಹನಗಳಿರುವುದರಿಂದ ಹಣ ಉಳಿತಾಯವಾಗಲಿದೆ ಇವುಗಳಿಗಾಗಿ ಪೆಟ್ರೋಲ್ ಬಂಕ್ ಮತ್ತು ಸರ್ವೀಸ್ ಸ್ಟೇಷನ್ ನಿರ್ಮಿಸಲಾಗುತ್ತಿದ್ದು, ಅದಕ್ಕೆ ಈಗಾಗಲೇ ಟೆಂಡರ್ ಆಗಿದೆ. ತಿಂಗಳೊಳಗೆ ಕಾಮಗಾರಿ ಆರಂಭವಾಗಲಿದೆ.
>
> 
>
> –ಲಕ್ಷ್ಮೀಕಾಂತ ರೆಡ್ಡಿ, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ

ಇ–ಆಕ್ಷನ್‌ಗೆ ಆಟೋಗಳು : ಮೈಸೂರು ಮಹಾನಗರ ಪಾಲಿಕೆಯಲ್ಲಿ 15 ವರ್ಷಕ್ಕೂ ಹೆಚ್ಚು ಕಾಲ ಬಳಸಿದ ವಾಹನಗಳು ಹಾಳಾಗಿದ್ದು, ಅವುಗಳನ್ನು ಇ– ಆಕ್ಷನ್ ಮಾಡಲು ಈಗಾಗಲೇ ಪಾಲಿಕೆ ವತಿಯಿಂದ ಆರ್.ಟಿ.ಓಗೆ ಪತ್ರ ಬರೆಯಲಾಗಿದೆ. ಅದರಂತೆ 78 ಆಟೋಗಳು ಈ ಸಾಲಿಗೆ ಸೇರುತ್ತವೆ.

ಸಂಪೂರ್ಣ ಸ್ವಂತ ವಾಹನಗಳು : ಪಾಲಿಕೆಯಲ್ಲಿ ಹಲವಾರು ವರ್ಷಗಳಿಂದ ಹೊರಗುತ್ತಿಗೆ ವಾಹನಗಳನ್ನು ಬಳಸಲಾಗುತ್ತಿತ್ತು ಸದ್ಯ ಮೈಸೂರು ಮಹಾನಗರ ಪಾಲಿಕೆಯಲ್ಲಿ ಹೊರಗುತ್ತಿಗೆಯ 18 ಲಾರಿಗಳು ಮಾತ್ರವಿದ್ದು, ಅವುಗಳನ್ನು ಸಹ ಮೇ ಮೊದಲ ವಾರ ಕೈಬಿಡುವುದರ ಮೂಲಕ ಪಾಲಿಕೆಯಲ್ಲಿ ಸ್ವಂತ ವಾಹನಗಳು ತುಂಬಿರಲಿದೆ.

ಪೆಟ್ರೋಲ್ ಬಂಕ್ ಮತ್ತು ಸರ್ವೀಸ್ ಸ್ಟೇಷನ್ : ಸಾಕಷ್ಟು ಸ್ವಂತ ವಾಹನಗಳನ್ನು ಹೊಂದಿರುವ ಪಾಲಿಕೆ ಈ ವಾಹನಗಳಿಗಾಗಿ ಇಂಡಿಯನ್ ಆಯಿಲ್ ಜೊತೆಗೂಡಿ ಮೈಸೂರಿನ ಸೂವೇಜ್ ಫಾರಂ ಮತ್ತು ರಾಯನ ಕೆರೆ ಹುಂಡಿ ಬಳಿಯಲ್ಲಿ ಪೆಟ್ರೋಲ್ ಬಂಕ್‌ಗಳು ಮತ್ತು ಸರ್ವೀಸ್ ಸ್ಟೇಷನ್ ನಿರ್ಮಾಣ ಮಾಡಲು ಮುಂದಾಗಿದ್ದು, ಅದರ ಕಾಮಗಾರಿ ತಿಂಗಳಲ್ಲಿ ಆರಂಭವಾಗಲಿದೆ ಎನ್ನಲಾಗಿದೆ.

ಪ್ರಸ್ತುತ ಪಾಲಿಕೆ ವಾಹನಗಳು : ಕಾರ್,ಜೀಪ್, ವ್ಯಾನ್, ಮಿನಿ ಬಸ್ಸು–10, ಟ್ರಾಕ್ಟರ್–37, ಮಿನಿ ಟಿಪ್ಪರ್–18, ಹೆವಿ ಟಿಪ್ಪರ್–10, ಡಂಪರ್ ಪ್ಲೇಸರ್–7, ಕಾಂಪ್ಯಾಕ್ಟರ್–27, ಪ್ರಾಣಿ ತ್ಯಾಜ್ಯ ಸಾಗಿಸುವ ವಾಹನ–7, ಟ್ರಾಕ್ಟರ್ ಡೋಜರ್–3, ಜೆಸಿಬಿ–10, ಹಿಟಾಚಿ 80 ಚೈನ್ ಡೋಜರ್–1, ಹಿಟಾಚಿ 120 ಚೈನ್ ಡೋಜರ್–1, ಹಿಟಾಚಿ ಟಿಎಕ್ಸ್‌ಎಂ120 ಮಿನಿ–2, ಹುಂಡೈ ಚೈನ್ ಡೋಜರ್203–1, ಹುಂಡೈ ಚೈನ್ ಡೋಜರ್204–1, ತ್ರಿಚಕ್ರ ಆಟೋ ಟಿಪ್ಪರ್–93, ಟಾಟಾ ಏಸ್ ಟಿಪ್ಪರ್–155, ಫಾಗಿಂಗ್ ವಾಹನ–3, ಶವಸಾಗಿಸುವ ವಾಹನ–4, ಶ್ವಾನ ದಳ–1, ಲ್ಯಾಡರ್ ಜೀಪ್–2, ನೀರಿನ ಮಿನಿ ಲಾರಿ–1, ಬೀದಿ ಸ್ವಚ್ಛಗೊಳಿಸುವ ವಾಹನ–1, ಆಡಿಯೋ ವಿಡಿಯೋ ವಾಹನ–1.



ಆಸ್ತಿ ವಿಚಾರಕ್ಕೆ ಅಣ್ಣನ ಕೊಂದ ತಂಗಿ!

● ಊಟದಲ್ಲಿ ನಿದ್ರೆ ಮಾತ್ರೆ ಬೆರೆಸಿ, ಬಳಿಕ ಕುತ್ತಿಗೆ ಹಿಸುಕಿ ಕೊಲೆ
● ಕುಶಾಲನಗರ ತಾಲೂಕಿನ ಸುಂದರ ನಗರ ಗ್ರಾಮದಲ್ಲಿ ಘಟನೆ

ಮಡಿಕೇರಿ, ಏ.26– ಆಸ್ತಿ ವಿಚಾರಕ್ಕೆ ಸ್ನೇಹಿತ ಹಾಗೂ ಸಂಬಂಧಿಕನೊಂದಿಗೆ ಸೇರಿ ಸ್ವಂತ ಅಣ್ಣನನ್ನೇ ತಂಗಿ ಕೊಲೆ ಮಾಡಿರುವ ಘಟನೆ ಕುಶಾಲನಗರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಪಟ್ಟಣದ ಹೊರವಲಯದ ಸುಂದರನಗರ ಗ್ರಾಮದ ನಿವಾಸಿ ಸುರೇಶ್(38) ತನ್ನ ತಂಗಿಯಿಂದಲೇ ಕೊಲೆಯಾದ ವ್ಯಕ್ತಿ. ಭವ್ಯ (35), ಈಕೆಯ ಸ್ನೇಹಿತ ಮುಳ್ಳುಸೋಗೆ ಜನತಾ ಕಾಲೋನಿ ನಿವಾಸಿ ಮಹೇಶ್(45) ಹಾಗೂ ಸಂಬಂಧಿಕ ಹರೀಶ್(40) ಬಂಧಿತ ಹತ್ಯೆ ಆರೋಪಿಗಳು.

ಘಟನೆಯ ವಿವರ: ಏ.20ರಂದು ಸುಂದರ ನಗರ ನಿವಾಸಿ ಮಹದೇವಮ್ಮ ಅವರಿಗೆ ಇಬ್ಬರು ಮಕ್ಕಳು ಸುರೇಶ್ ಹಾಗೂ ಭವ್ಯ. ಭವ್ಯಳಿಗೆ ಮದುವೆಯಾಗಿ 12 ವರ್ಷಗಳ ಹಿಂದೆಯೇ ಗಂಡನಿಂದ ವಿಚ್ಛೇದನ ಪಡೆದು ತಾಯಿಯೊಂದಿಗೆ ವಾಸಿಸುತ್ತಿದ್ದಳು.

ಸುರೇಶ್ ಅವಿವಾಹಿತನಾಗಿದ್ದು, ಕುಶಾಲನಗರದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದನು. ಈತ ಇತ್ತೀಚೆಗೆ ಕುಟುಂಬಕ್ಕೆ ಸೇರಿದ್ದ ಸೈಟೊಂದನ್ನು ಮಾರಾಟ ಮಾಡಿದ್ದ. ಈ ವಿಚಾರ ತಿಳಿದ ಭವ್ಯ ಸೈಟ್ ಮಾರಾಟ ಮಾಡಿದ ಹಣದಲ್ಲಿ ನನಗೂ ಪಾಲು ನೀಡಬೇಕು ಎಂದು ಅಣ್ಣನೊಂದಿಗೆ ಜಗಳ ಮಾಡಿದ್ದಳು. ಆದರೆ, ಸುರೇಶ್ ತನ್ನ ತಂಗಿ ಭವ್ಯಳಿಗೆ ಹಣ ನೀಡಿರಲಿಲ್ಲ.

ಇದರಿಂದ ಕುಪಿತಗೊಂಡ ಭವ್ಯ, ಏ. 20ರ ಬುಧವಾರ ರಾತ್ರಿ ಮನೆಗೆ ಬಂದ ತನ್ನ ಅಣ್ಣ ಸುರೇಶ್‌ಗೆ ಊಟದಲ್ಲಿ ನಿದ್ರೆ ಮಾತ್ರೆಯನ್ನು ಬೆರಸಿದ್ದಾಳೆ. ಸುರೇಶ ನಿದ್ರೆಗೆ ಜಾರಿದಾಗ ಹರೀಶ್ ಹಾಗೂ ಮಹೇಶ್ ಜೊತೆ ಸೇರಿ ಭವ್ಯ ತನ್ನ ಅಣ್ಣನನ್ನು ಕುತ್ತಿಗೆ ಹಿಸುಕಿ ಕೊಲೆ ಮಾಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.


ಪ್ರಕರಣದ ದಿಕ್ಕು ತಪ್ಪಿಸಲು ಸಂಚು: ಅಣ್ಣನ ಕೊಲೆ ಮಾಡಿದ ಬಳಿಕ ದಿವ್ಯ ತಮ್ಮ ನೆಂಟರು ಹಾಗೂ ಸ್ನೇಹಿತರಿಗೆಲ್ಲ ದೂರವಾಣಿ ಕರೆ ಮಾಡಿ ಸುರೇಶ್ ಅನಾರೋಗ್ಯದಿಂದ ಸಾವನ್ನಪ್ಪಿದ್ದಾನೆ ಎಂದು ಹೇಳಿ, ಕಣ್ಣೀರು ಹಾಕಿದ್ದಾಳೆ. ಈ ಮೂಲಕ ಪ್ರಕರಣದ ದಿಕ್ಕು ತಪ್ಪಿಸಲು ಸಂಚು ಹೂಡಿದ್ದಾಳೆ.

ಮೃತದೇಹವನ್ನು ಕಂಡ ಸುರೇಶನ ಸ್ನೇಹಿತನೋರ್ವ ದೇಹದ ಮೇಲಿದ್ದ ಸಣ್ಣ–ಪುಟ್ಟ ಗಾಯದ ಗುರುತುಗಳನ್ನು ಗಮನಿಸಿ ಅನುಮಾನಗೊಂಡು ಕುಶಾಲನಗರ ಗ್ರಾಮಾಂತರ ಪೊಲೀಸರಿಗೆ ಮಾಹಿತಿ ನೀಡಿದ್ದರು. ಇದರ ಆಧಾರದ ಮೇಲೆ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡರು.

ಬಳಿಕ ವಿಧಿ–ವಿಜ್ಞಾನ ತಂಡದೊಂದಿಗೆ ಮರಣೋತ್ತರ ಪರೀಕ್ಷೆ ನಡೆಸಿದ್ದು, ವರದಿಯಲ್ಲಿ ಸುರೇಶನನ್ನು ಕೊಲೆ ಮಾಡಿರುವುದು ಬೆಳಕಿಗೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಏ.25ರಂದು ಕುಶಾಲನಗರ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಸಂಪೂರ್ಣ ಮಾಹಿತಿ ಕಲೆಹಾಕಿ, ಸುರೇಶನ ಮನೆಯವರನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಆರೋಪಿ ಭವ್ಯ ತಪ್ಪೊಪ್ಪಿಕೊಂಡಿದ್ದು, ಕೊಲೆಗೆ ಸಹಕಾರ ನೀಡಿದ ಸ್ನೇಹಿತ ಮಹೇಶ್, ಸಂಬಂಧಿಕ ಹರೀಶ್ ಬಗ್ಗೆ ಮಾಹಿತಿ ನೀಡಿದ್ದಾಳೆ.

ಭವ್ಯಳ ಹೇಳಿಕೆಯನ್ನು ಆಧರಿಸಿ ಪೊಲೀಸರು ಆರೋಪಿಗಳನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ ವಾಹನ ಹಾಗೂ ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಜೊತೆಗೆ 3 ಮಂದಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ ಹಾಗೂ ಸೋಮವಾರಪೇಟೆ ಉಪ ಅಧೀಕ್ಷ ಹೆಚ್.ಎಂ.ಶೈಲೇಂದ್ರ ಮಾರ್ಗದರ್ಶನದಲ್ಲಿ ಕುಶಾಲನಗರ ವೃತ್ತ ನಿರೀಕ್ಷಕ ಎಂ.ಮಹೇಶ್ ನೇತೃತ್ವದಲ್ಲಿ ಕುಶಾಲನಗರ ಗ್ರಾಮಾಂತರ ಉಪನಿರೀಕ್ಷಕ ಚಂದ್ರಶೇಖರ್, ಪಿಎಸ್ಐ ನವೀನ್ ಹಾಗೂ ಸಿಬ್ಬಂದಿ ಪ್ರವೀಣ್, ಅಜಿತ್, ಮಂಜುನಾಥ್, ಶನಂತ್, ಯೋಗೇಶ್ ತನಿಖೆಯಲ್ಲಿ ಪಾಲ್ಗೊಂಡಿದ್ದರು.

ಸ್ವಾವಲಂಬನೆಯಿಂದ ದೇಶ ಅಭಿವೃದ್ಧಿ ಸಾಧ್ಯ



ಕುಶಾಲನಗರ, ಏ.26–ನಾಗರಿಕ ಸಮಾಜದ ಮುಖ್ಯ ವಾಹಿನಿಯಲ್ಲಿ ಎಲ್ಲಾ ಸಮುದಾಯದವರು ಸಮ ಪ್ರಮಾಣದಲ್ಲಿ ದುಡಿದು ಸ್ವಾವಲಂಬನೆಯಿಂದ ಜೀವನ ಸಾಧಿಸಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಕೆ.ಜಿ.ಬೋಪಯ್ಯ ಹೇಳಿದರು.

ಇಲ್ಲಿನ ರೈತ ಭವನದಲ್ಲಿ ಮಂಗಳವಾರ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದಿಂದ ನಡೆದ ಜಿಲ್ಲಾ ಯುವ ಘಟಕ ಉದ್ಘಾಟನೆ, ಕ್ರೀಡಾಕೂಟ, ಪ್ರತಿಭಾ ಪುರಸ್ಕಾರ, ಹಾನಗಲ್ಲು ಶ್ರೀಕುಮಾರಸ್ವಾಮಿಗಳ ಮತ್ತು ಡಾ.ಶ್ರೀ.ಶಿವಕುಮಾರಸ್ವಾಮಿ ಜಯಂತಿ ಹಾಗೂ ಧಾರ್ಮಿಕ ಸಭೆಯಲ್ಲಿ ಪಾಲ್ಗೊಂಡು ಬೋಪಯ್ಯ ಮಾತನಾಡಿದರು.

ಎಲ್ಲಾ ಸಮುದಾಯಗಳು ಬಲಿಷ್ಠವಾಗಬೇಕು. ಆದರೆ, ಇನ್ನೊಂದು ಸಮುದಾಯವನ್ನು ತುಳಿಯುವ ಕೆಲಸವನ್ನು ಮಾಡಬಾರದು. ಇದು ನಮ್ಮ ಸಂಸ್ಕೃತಿ ಅಲ್ಲ ಎಂದು ಹೇಳಿದರು.

ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ವೀರಶೈವ ಸಮಾಜ ದೇಶಕ್ಕೆ ತನ್ನದೇ ಕೊಡುಗೆ ನೀಡಿದೆ. ಈ ಸಮಾಜ ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು. ವೀರಶೈವ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕರ ನಿಧಿಯಿಂದ 10 ಲಕ್ಷರೂ. ಅನುದಾನ ನೀಡಲಾಗುವುದು ಎಂದು ಘೋಷಿಸಿದರು.

ವಿರಾಜಪೇಟೆ ಅರಮೇರಿ ಕಳಂಚೇರಿ ಮಠದ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮಿಜಿ ಮಾತನಾಡಿ, ಆಧುನಿಕತೆ ಬೆಳೆದಂತೆ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿದ್ದು, ಇದರಿಂದ ಸಮಾಜದ ಸ್ವಾಸ್ಥ್ಯಕ್ಕೆ ಹಾನಿ ಉಂಟಾಗುತ್ತಿದೆ. ವೀರಶೈವ ಸಮಾಜದ ಭವ್ಯ ಪರಂಪರೆ, ಆಚಾರ, ವಿಚಾರಗಳನ್ನು ಮುಂದುವರೆಸಿಕೊಂಡು ಹೋದರೆ ಮಾತ್ರ ಮುಂದಿನ ಪೀಳಿಗೆಗೆ ನಾವು ಮೌಲ್ಯಗಳನ್ನು ಕೊಡಲು ಸಾಧ್ಯ ಎಂದರು.

ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಬೆಂಗಳೂರು ಹೈಕೋರ್ಟ್ ಹಿರಿಯ ವಕೀಲ, ನಿಕಟಪೂರ್ವ ಸರ್ಕಾರಿ ಅಭಿಯೋಜಕ ಹೆಚ್.ಎಸ್.ಚಂದ್ರಮೌಳಿ, ಸಂಪನ್ಮೂಲ ವ್ಯಕ್ತಿ ಚಟ್ನಹಳ್ಳಿ ಮಹೇಶ್ ಮಾತನಾಡಿದರು. ಈ ವೇಳೆ ಶ್ರೀಶೈಲ ಬೀಳಗಿ ಅವರು ಬರೆದ 'ನೀನೊಲಿದರ' ಕವನ ಸಂಕಲನ ಪುಸ್ತಕವನ್ನು ಅತಿಥಿಗಳು ಬಿಡುಗಡೆಗೊಳಿಸಿದರು. ಬಳಿಕ, ಜಿಲ್ಲಾ ವೀರಶೈವ ಯುವ ಘಟಕ ಹಾಗೂ ಕೈಗಾರಿಕಾ ಘಟಕಗಳನ್ನು ಉದ್ಘಾಟಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹಾಗೂ ಸಮಾಜಕ್ಕೆ ಒಂದು ಎಕರೆ ಜಾಗ ನೀಡಿದ ಸುಶೀಲಮ್ಮ ಹಾಗೂ ಎಂ.ಬಿ.ಬಸವರಾಜು ಅವರನ್ನು ಸನ್ಮಾನಿಸಲಾಯಿತು.

ಕೊಡ್ಲಿಪೇಟೆ ಕಲ್ಮಠದ ಶ್ರೀಮಹಾಂತ ಸ್ವಾಮೀಜಿ, ಶನಿವಾರಸಂತೆ ಮನೆಹಳ್ಳಿ ತಪೋವನ ಕ್ಷೇತ್ರದ ಶ್ರೀಮಹಾಂತ ಶಿವಲಿಂಗ ಸ್ವಾಮೀಜಿ, ತೊರೆನೂರು ವಿರಕ್ತ ಮಠದ ಶ್ರೀ ಮಲ್ಲೇಶ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಅಖಿಲ ಭಾರತ ವೀರಶೈವ ಮಹಾಸಭಾ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಹೆಚ್.ವಿ.ಶಿವಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ ರೇಣುಕಾ ಪ್ರಸನ್ನ, ಕಾರ್ಯದರ್ಶಿ ರಾಜೇಶ್ವರಿ ನಾಗರಾಜು, ಮಹಿಳಾ ನಿರ್ದೇಶಕಿ ಮಹಿಮ ಸತೀಶ್, ಯುವ ಘಟಕದ ರಾಜ್ಯ ಸಮಿತಿ ಅಧ್ಯಕ್ಷ ಮನೋಹರ ಅಬ್ಬಿಗೆರೆ, ಯುವ ನಿರ್ದೇಶಕ ವಿರೂಪಾಕ್ಷ, ಮಹಿಳಾ ಘಟಕದ ಅಧ್ಯಕ್ಷೆ ಮಮತಾ ಸತೀಶ್, ಮಹಾಸಭಾದ ಕೊಡಗು ಜಿಲ್ಲಾ ಸಮಿತಿ ಉಪಾಧ್ಯಕ್ಷ ಜಿ.ಎಂ.ಕಾಂತರಾಜು, ಎಸ್.ಎಸ್.ಸುರೇಶ್, ಪ್ರಧಾನ ಕಾರ್ಯದರ್ಶಿ ಶಾಂಭ ಶಿವಮೂರ್ತಿ, ಕೋಶಾಧ್ಯಕ್ಷ ಹೆಚ್.ಪಿ.ಉದಯ ಕುಮಾರ್, ಕ್ರೀಡಾ ಸಮಿತಿ ಅಧ್ಯಕ್ಷ ಮೋಕ್ಷಿಕ್ ರಾಜ್, ಕ್ರೀಡಾ ಸಂಯೋಜಕ ಆದರ್ಶ್, ವಿರಾಜಪೇಟೆ ತಾಲೂಕು ಅಧ್ಯಕ್ಷ ಸಂದೀಪ್, ಸೋಮವಾರಪೇಟೆ ಅಧ್ಯಕ್ಷ ಹಾಲಪ್ಪ, ಕುಶಾಲನಗರ ತಾಲೂಕು ಅಧ್ಯಕ್ಷ ಹೆಚ್.ಎಂ.ಮಧುಸೂದನ್, ಮುಖಂಡರಾದ ಮಹದೇವಪ್ಪ, ಪಾರ್ವತಮ್ಮ ಕಾಳಿಂಗಪ್ಪ, ಕಮಲಾ, ಜಲಜಾ ಶೇಖರ್ ಹಾಜರಿದ್ದರು.

ನದಿಯಲ್ಲಿ ಮುಳುಗಿ ಬಾಲಕ ಸಾವು

ಕುಶಾಲನಗರ,ಏ.26–ನದಿಯಲ್ಲಿ ಮುಳುಗಿ ಬಾಲಕನೊಬ್ಬ ಸಾವನ್ನಪ್ಪಿರುವ ಘಟನೆ ತಾಲೂಕಿನ ನಂಜರಾಯಪಟ್ಟಣ ಗ್ರಾಪಂ ವ್ಯಾಪ್ತಿಯ ದುಬಾರೆ ಯಲ್ಲಿನ ಕಾವೇರಿ ನದಿಯಲ್ಲಿ ಮಂಗಳವಾರ ನಡೆದಿದೆ.

ಮಹಾರಾಷ್ಟ್ರದ ನಾಸಿಕ್‌ನ ದಾದಾಜಿ ಮಹಾಜನ್, ಪಿಂಕಿ ಮಹಾಜನ್ ದಂಪತಿ ಪುತ್ರ ಅನಿಕೇತ್ ಮಹಾಜನ್(17) ಮೃತ ಬಾಲಕ.

ಮಹಾರಾಷ್ಟ್ರದಿಂದ 6 ಕುಟುಂಬಗಳ 22 ಮಂದಿ ಕಳೆದೆರಡು ದಿನಗಳ ಹಿಂದೆ ಕೊಡಗಿಗೆ ಪ್ರವಾಸಕ್ಕೆ ಆಗಮಿಸಿದ್ದರು. ತಲಕಾವೇರಿ, ಭಾಗಮಂಡಲ ಮತ್ತಿತರ ಪ್ರದೇಶಗಳಿಗೆ ತೆರಳಿ ಮಂಗಳವಾರ ಬೆಳಗ್ಗೆ ದುಬಾರೆ ವೀಕ್ಷಣೆಗೆ ಆಗಮಿಸಿದ್ದರು. ದುಬಾರೆಯ ಕಾವೇರಿ ನದಿಯ ಮತ್ತೊಂದು ತಟದಲ್ಲಿರುವ ಸಾಕಾನೆ ಶಿಬಿರ ಬಳಿ ಬಾಲಕರ ತಂಡ ನೀರಿಗಿಳಿದಿದ್ದಾರೆ. ಜಲಕ್ರೀಡೆ ಬಳಿಕ ಕಲ್ಲು ಬಂಡೆ ಮೇಲೆ ಕುಳಿತಿದ್ದ ಅನಿಕೇತ್ ಮೇಲೇಳುವಾಗ ಕಾಲು ಜಾರಿ ನೀರಿಗೆ ಬಿದ್ದು, ಸಾವನ್ನಪ್ಪಿದ್ದಾನೆ.

ದುಬಾರೆ ರ್‍ಯಾಫ್ಟಿಂಗ್ ತಂಡದವರು ಮೃತದೇಹ ಮೇಲಕೆತ್ತಿದ್ದಾರೆ. ಈ ಸಂಬಂಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುಡುಗು, ಬಿರುಗಾಳಿ ಸಹಿತ ಮಳೆ



ನಾಪೋಕ್ಲು, ಏ.26– ಸಮೀಪದ ಕಕ್ಕಬ್ಬೆ ವ್ಯಾಪ್ತಿಯಲ್ಲಿ ಮಂಗಳವಾರ ಸಂಜೆ ಗುಡುಗು, ಬಿರುಗಾಳಿ ಸಹಿತ ಜೋರು ಮಳೆಯಾಗಿದೆ.

ಗಾಳಿಯಿಂದ ಕಕ್ಕಬ್ಬೆ ಹೈಲ್ಯಾಂಡ್ಸ್ ಕ್ಲಬ್ ಬಳಿ ಮರವೊಂದು ವಿದ್ಯುತ್ ಕಂಬದ ಮೇಲೆ ಬಿದ್ದು ಪರಿಣಾಮ ರಸ್ತೆಯಲ್ಲಿ ಸಂಚಾರಕ್ಕೆ ಅಡಚಣೆಯಾಗಿ, ನಾಪೋಕ್ಲು–ವಿರಾಜಪೇಟೆ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಜೊತೆಗೆ ಸಂಜೆಯವರೆಗೂ ಕಕ್ಕಬ್ಬೆಯಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು.

ನಾಳೆ ಶ್ರೀಸಬ್ಬಮ್ಮ ದೇವರ ಸುಗ್ಗಿ ಉತ್ಸವ

ಸೋ.ಪೇಟೆ,ಏ.26– ತಾಲೂಕಿನ ತೋಳೂರುಶೆಟ್ಟಳ್ಳಿ ಗ್ರಾಮದ ಶ್ರೀಸಬ್ಬಮ್ಮ ದೇವರ ಸುಗ್ಗಿ ಉತ್ಸವ ಏ.28 ಮತ್ತು 29ರಂದು ನಡೆಯಲಿದೆ ಎಂದು ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಡಿ.ಎನ್.ರಾಜ್‌ಗೋಪಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಏ.28ರ ಗುರುವಾರ ಬೆಳಗ್ಗೆ 6.30ರಿಂದ 8.30ರವರೆಗೆ ಗಂಗಾಸ್ನಾನ ಮತ್ತು ಮುಡಿ ಹರಕೆ ಒಪ್ಪಿಸುವುದು. ಬೀದಿ ರಾಜಾಂಗಣದಲ್ಲಿ ಮೆರವಣಿಗೆ ಮತ್ತು ಸನ್ನಿಧಿ ಪ್ರವೇಶ ನಡೆಯುವುದು. 29ರ ಶುಕ್ರವಾರ ಬೆಳಗ್ಗೆ 6.30 ರಿಂದ 9.30ರ ವರೆಗೆ ಹಣ್ಣು ಕಾಯಿ ಹಾಗೂ ಮಡೆ ಉತ್ಸವ, ನಂತರ ಸುಗ್ಗಿ ಕುಣಿತ ನಡೆಯಲಿದೆ.

ಶ್ರೀ ಅಯ್ಯಪ್ಪ ಭಗವತಿ ದೇವಸ್ಥಾನದ ವಾರ್ಷಿಕ ಮಹೋತ್ಸವ

ವಿರಾಜಪೇಟೆ, ಏ.26– ವಿರಾಜಪೇಟೆ ಸಮೀಪದ ಹೆಗ್ಗಳ ಗ್ರಾಮದಲ್ಲಿರುವ ಶ್ರೀಅಯ್ಯಪ್ಪ ಭಗವತಿ ದೇವಸ್ಥಾನದ ವಾರ್ಷಿಕ ಮಹೋತ್ಸವ ಶ್ರದ್ಧಾ–ಭಕ್ತಿಯಿಂದ ಆಚರಿಸಲಾಯಿತು. ಬೇಟೋಳಿ, ಹೆಗ್ಗಳ, ಆರ್ಜಿ ಮೂರು ಗ್ರಾಮಸ್ಥರು ಸೇರಿ ನಡೆಸುವ ಶ್ರೀಅಯ್ಯಪ್ಪ ಭಗವತಿ ದೇವರ ಉತ್ಸವವು ಏ.15ರಿಂದ 25ರವರೆಗೆ 10 ದಿನಗಳ ಕಾಲ ನಡೆಯಿತು. ಏ. 24ರಂದು ನಡೆದ ಎತ್ತುಪೋರಾಟ ದೇವರ ದೊಡ್ಡ ಹಬ್ಬದಂದು ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನಡೆದು ಮಧ್ಯಾಹ್ನ 12.30ಕ್ಕೆ ಮಹಾಪೂಜೆ ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಉತ್ಸವದ ಸಂದರ್ಭ ದೇವಸ್ಥಾನ ಸಮಿತಿ ಅಧ್ಯಕ್ಷ ಅಮ್ಮಣ ಕುಟ್ಟಂಡ ಜಿ.ಬೋಪಣ್ಣ, ದೇವ ತಕ್ಕರಾದ ಪೊರೇರ ಗಣಪತಿ, ಉರುತಕ್ಕರಾದ ಅಚ್ಚಪಂಡ ಮುತ್ತಣ್ಣ, ಹಾಗೂ ಆಡಳಿತ ಮಂಡಳಿಯ ಪೊರೇರ ಬಿದ್ದಪ್ಪ, ಅಚ್ಚಪಂಡ ಮಹೇಶ್ ಮತ್ತು ಸಮಿತಿಯ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.



ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಮೇ.ಜ.ಜೆ.ವಿ.ಪ್ರಸಾದ್ ಭೇಟಿ



ಮಡಿಕೇರಿ, ಏ.26– ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಮೇಜರ್ ಜನರಲ್ ಜೆ.ವಿ.ಪ್ರಸಾದ್ ಭೇಟಿ ನೀಡಿ ಮ್ಯೂಸಿಯಂ ವೀಕ್ಷಿಸಿದರು.

ಸ್ಮಾರಕ ಭವನದಲ್ಲಿ ಇಡಲಾಗಿರುವ ಯುದ್ಧ ಸೇನಾ ಪರಿಕರ ವೀಕ್ಷಿಸಿದ ಮೇ.ಜ.ಪ್ರಸಾದ್, ಮಾಹಿತಿ ಪಡೆದುಕೊಂಡರು. ಬಳಿಕ ಅಮರ್ ಜವಾನ್ ಯುದ್ಧ ಸ್ಮಾರಕಕ್ಕೆ ತೆರಳಿ ಅಗಲಿದ ವೀರ ಯೋಧರಿಗೆ ಗೌರವ ನಮನ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಡಗು ಜಿಲ್ಲೆಯಲ್ಲಿನ ಮಾಜಿ ಸೈನಿಕರ ಸಮಸ್ಯೆ ಆಲಿಸುವ ಹಾಗೂ ಸೌಲಭ್ಯ ವಿಸ್ತರಣೆಯ ಮಾಹಿತಿ ಪಡೆಯಲು ಬಂದಿದ್ದು, ಇದೇ ವೇಳೆ ಜನರಲ್ ತಿಮ್ಮಯ್ಯ ಅವರ ಮ್ಯೂಸಿಯಂ ಕಣ್ತುಂಬಿಕೊಳ್ಳುವ ಭಾಗ್ಯವು ಸಿಕ್ಕಿದೆ. ಮಾಜಿ ಸೈನಿಕರಿಗೆ ಇನ್ನೂ ಯಾವೆಲ್ಲಾ ಸೌಲಭ್ಯಗಳನ್ನು ಒದಗಿಸಬಹುದು ಎಂಬ ಕುರಿತು ಮಾಹಿತಿ ಪಡೆಯಲಾಗಿದೆ ಎಂದು ಹೇಳಿದರು.

ತಿಮ್ಮಯ್ಯ ಮ್ಯೂಸಿಯಂ ಈಗಿನ ಹಾಗೂ ಮುಂದಿನ ಪೀಳಿಗೆಗೆ ಪ್ರೇರಣೆ ನೀಡುವ ಸ್ಥಳವಾಗಿದ್ದು, ಸುಂದರವಾಗಿ ಮೂಡಿ ಬಂದಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜನರಲ್ ತಿಮ್ಮಯ್ಯ ಫೋರಂ ಸದಸ್ಯರ ಪರಿಶ್ರಮದಿಂದ ಈ ಮ್ಯೂಸಿಯಂ ರೂಪುಗೊಂಡಿದೆ. ಜನರಲ್ ತಿಮ್ಮಯ್ಯ ವಾಸವಿದ್ದ ಮನೆಗೆ ಜೀವಂತಿಕೆ ನೀಡಲು ಹಲವು ಸಂಘ–ಸಂಸ್ಥೆಗಳು ಶ್ರಮಿಸಿದ್ದು, ಅವರ ಕೆಲಸ ಶ್ಲಾಘನೀಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೆ.ಟಿ.ದರ್ಶನ್, ಮಣಜೂರು ಮಂಜುನಾಥ್ ಉಪಸ್ಥಿತರಿದ್ದರು.

ದೇವರ ದಾಸಿಮಯ್ಯ ವಚನಗಳು ಸ್ಮರಣೀಯ

ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಅಭಿಮತ



ಚಾಮರಾಜನಗರ,ಏ.26–ಸಮ ಸಮಾಜದ ಜಾಗೃತಿಗಾಗಿ ದೇವರ ದಾಸಿಮಯ್ಯ ನೀಡಿದ ಸಂದೇಶಗಳು ವಚನಗಳು ಇಂದಿಗೂ ಸ್ಮರಣೀಯವಾಗಿದೆ ಎಂದು ಶಾಸಕರೂ ಆದ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂದಿನ ಕಾಲಘಟ್ಟದಲ್ಲಿಯೇ ತಮ್ಮ ವಚನಗಳ ಮೂಲಕ ದಾಸಿಮಯ್ಯ ಅವರು ಉತ್ತಮ ಮೌಲ್ಯಗಳ ಸಂದೇಶ ಸಾರಿದ್ದಾರೆ. ಸಮಾಜದ ಜಾಗೃತಿಗೆ ಶ್ರಮಿಸಿದ್ದಾರೆ. ನೂರಾರು ವರ್ಷಗಳ ನಂತರವೂ ಅವರು ಮಾಡಿದ ಉತ್ತಮ ಕಾರ್ಯಗಳನ್ನೂ ಇಂದು ಸಹ ನಾವು ಸ್ಮರಿಸುತ್ತೇವೆ. ವಚನಕಾರರು, ದಾರ್ಶನಿಕರು, ಮಹಾ ಪುರುಷರ ಸ್ಮರಿಸುವ ಜಯಂತಿಯನ್ನು ಜಾತಿಗೆ ಸೀಮಿತಗೊಳಿಸಬಾರದು. ಸಂಕುಚಿತ ಮನೋಭಾವನೆ ಹೋಗಬೇಕಿದೆ. ಎಲ್ಲರೂ ಸೇರಿ ಭಾಗಿಯಾಗಿ ಸ್ಮರಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಸಮಗ್ರ ಶಿಕ್ಷಣ ಕರ್ನಾಟಕ ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿ ಎನ್.ಲಕ್ಷ್ಮೀಪತಿ ಮಾತನಾಡಿ, ದೇವರ ದಾಸಿಮಯ್ಯನವರು ರಚಿಸಿದ ವಚನಗಳು ಜನ ಸಾಮಾನ್ಯರಿಗೆ ಹೆಚ್ಚು ಪ್ರಚುರವಾಗಿಲ್ಲ. ಆದರೆ ಇವರ ವಚನಗಳನ್ನು ಬಸವಣ್ಣನವರು ಕೊಂಡಾಡಿದ್ದಾರೆ. ನೆರೆಹೊರೆಯವರ ಜೊತೆ ಸಹಬಾಳ್ವೆ ಮಾಡಬೇಕೆಂಬ ಮಹತ್ತರ ಸಂದೇಶವನ್ನು ದೇವರ ದಾಸಿಮಯ್ಯ ಅವರ ವಚನಗಳಲ್ಲಿ ಕಾಣಬಹುದು ಎಂದರು.

ದೇವರ ದಾಸಿಮಯ್ಯ ಅವರು ನೇಕಾರಿಕೆ ಕಾಯಕದಲ್ಲಿ ತೊಡಗುವ ಜೊತೆಗೆ ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದಾರೆ. ವೈಯಕ್ತಿಕ ಜೀವನಕ್ಕಾಗಿ ಬದುಕು ನಡೆಸದೇ ಹಲವರಿಗೆ ದಾರಿದೀಪವಾಗಿದ್ದಾರೆ. ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಮೂಲಕ ಎಲ್ಲರಿಗೂ ಆದರ್ಶ ಪ್ರಾಯರಾಗಿದ್ದಾರೆ ಎಂದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ ಕುಲಗಾಣ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರ್‌ರಾಜ್, ಜಿಪಂ ಉಪಕಾರ್ಯದರ್ಶಿ ಗೂಡೂರು ಭೀಮಸೇನ, ಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಚೆನ್ನಪ್ಪ, ಸಮುದಾಯದ ಮುಖಂಡರು ಕಾರ್ಯಕ್ರಮದಲ್ಲಿದ್ದರು.

ಬಸವೇಶ್ವರರ ಪುತ್ಥಳಿ ಸ್ಥಾಪನೆಗೆ ಅಂದಾಜು ಪಟ್ಟಿ ತಯಾರಿಸಲು ಸೂಚನೆ

ಚಾಮರಾಜನಗರ, ಏ.26–ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಬಸವೇಶ್ವರರ ಪುತ್ಥಳಿ ಸ್ಥಾಪಿಸಲು ಅಗತ್ಯವಿರುವ ಅಂದಾಜು ಪಟ್ಟಿ ತಯಾರಿಸಲು ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಗಿದೆ.

ಜಿಲ್ಲಾಡಳಿತ ಭವನದ ಆವರಣದಲ್ಲಿ ಬಸವೇಶ್ವರರ ಪುತ್ಥಳಿ ಸ್ಥಾಪಿಸುವಲ್ಲಿ ಆದ ವಿಳಂಬದ ಬಗ್ಗೆ ಜಿಲ್ಲಾಡಳಿತದ ಗಮನಕ್ಕೆ ಬಂದಿದ್ದು ಸಂಬಂಧಪಟ್ಟ ಕಡತ ಪರಿಶೀಲಿಸಿ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ತಕ್ಷಣವೇ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದು, ಅದರಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಅಂದಾಜು ಪಟ್ಟಿ ಸಲ್ಲಿಸಲು ಸೂಚಿಸಲಾಗಿದೆ.

ಆಕಸ್ಮಿಕ ಬೆಂಕಿಗೆ ಕಬ್ಬಿನ ಫಸಲು ಭಸ್ಮ

ಯಳಂದೂರು, ಏ.26(ವಿ.ನಾಗರಾಜು)– ತಾಲೂಕಿನ ಕೆಸ್ತೂರು ಗ್ರಾಮದ ಹೊರ ವಲಯದಲ್ಲಿ ಕಟಾವಿಗೆ ಬಂದಿದ್ದ ಕಬ್ಬಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಸುಟ್ಟು ಭಸ್ಮವಾಗಿದೆ.

ಗ್ರಾಮದ ರೈತ ನಂಜುಂಡಯ್ಯ ಅವರಿಗೆ ಸೇರಿದ ಒಂದು ಎಕರೆ ಹಾಗೂ ಕೋಟ ಶಿವಣ್ಣ ಅವರಿಗೆ ಎರಡು ಎಕರೆ ಸೇರಿ ಒಟ್ಟು 3 ಎಕರೆ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿನ ಫಸಲು ಬೆಂಕಿ ಕೆನ್ನಾಲಿಗೆ ಆಹುತಿಯಾಗಿದೆ.



ಕೂಡಲೇ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿ, ಹೆಚ್ಚಿನ ಅನಾಹುತ ತಪ್ಪಿಸಿದರು. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕೂಡಲೇ ಸೂಕ್ತ ಪರಿಹಾರ ನೀಡಬೇಕು ಎಂದು ಸಂತ್ರಸ್ತ ರೈತರು ಆಗ್ರಹಿಸಿದ್ದಾರೆ.

ಆಲೂರು ಮಲ್ಲು ಸೇರಿ ಎನ್.ಮಹೇಶ್ ಬೆಂಬಲಿಗರು ಬಿಜೆಪಿ ಸೇರ್ಪಡೆ



ಚಾ.ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎನ್.ಮಹೇಶ್ ಬೆಂಬಲಿಗರು ಬಿಜೆಪಿ ಸೇರ್ಪಡೆಯಾದರು.

ಚಾಮರಾಜನಗರ, ಏ.26(ಎಸ್‌ಎಸ್)– ಕೊಳ್ಳೇಗಾಲ ಶಾಸಕ ಎನ್.ಮಹೇಶ್ ನೂರಾರು ಬೆಂಬಲಿಗರು ಇಂದು ಬಿಜೆಪಿ ಸೇರ್ಪಡೆಯಾದರು. ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಕ್ಷ ಸೇರ್ಪಡೆಯಾದ ನೂರಾರು ಅಭಿಮಾನಿಗಳು ಹಾಗೂ ಬೆಂಬಲಿಗರಿಗೆ ಪಕ್ಷದ ಶಲ್ಯ–ಬಾವುಟ ನೀಡಿ ಸ್ವಾಗತಿಸಿ, ದಿಕ್ಸೂಚಿ ಭಾಷಣ ಮಾಡಿದ ಎನ್.ಮಹೇಶ್, ಕಾಂಗ್ರೆಸ್ ಮತ್ತು ಬಿಎಸ್ಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಕಳೆದ ಎರಡು ವರ್ಷಗಳ ಕಾಲ ನಾನು ಯಾವುದೇ ಪಕ್ಷಕ್ಕೆ ಸೇರದೆ ತಟಸ್ಥನಾಗಿದ್ದೆ. 20 ವರ್ಷಗಳ ಕಾಲ ಬಿಎಸ್ಪಿ ಸಂಘಟನೆಯಲ್ಲಿ ನನ್ನ ಸರ್ವಸ್ವ ಧಾರೆ ಎರೆದು ಪಕ್ಷ ಸಂಘಟಿಸಿದ್ದೆ. ಪಕ್ಷದ ಕೆಲವರು ಪಿತೂರಿ ಮಾಡಿ ನನನ್ನು ಏಕಾಏಕಿ ಪಕ್ಷದಿಂದಲೇ ಉಚ್ಚಾಟನೆ ಮಾಡಿಸಿದರು. ಮುಖ್ಯಮಂತ್ರಿ ಕುಮಾರಸ್ವಾಮಿ ಸರ್ಕಾರ ಪತನವಾದ ಐದೇ ನಿಮಿಷದಲ್ಲಿ ನನ್ನನ್ನು ಬಿಎಸ್ಪಿ ಉಚ್ಚಾಟಿಸಲಾಯಿತು. ತಕ್ಷಣ ಯಾವುದೇ ನಿರ್ಧಾರ ತೆಗೆದುಕೊಳ್ಳದೆ ಬಿಎಸ್ಪಿಯಿಂದ ಮಾಯಾವತಿ ಅವರು ನನ್ನನ್ನು ಮತ್ತೆ ಪಕ್ಷಕ್ಕೆ ಬರಮಾಡಿಕೊಳ್ಳುತ್ತಾರೆ ಎಂಬ ಆಶಾಭಾವನೆ ಹೊಂದಿ 2 ವರ್ಷ ಕಾದು ಕುಳಿತೆ. ಆದರೆ ಅದು ಆಗಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಪರಿಶಿಷ್ಟ ಜಾತಿ, ವರ್ಗದವರ ಕಲ್ಯಾಣಕ್ಕಾಗಿ ಕೈಗೊಂಡಿರುವ ಯೋಜನೆಗಳು ಹಾಗೂ ಅಂಬೇಡ್ಕರ್ ಅವರ ಪಂಚತೀರ್ಥ ಅಭಿವೃದ್ಧಿಪಡಿಸಿದ ಕಾರಣಕ್ಕಾಗಿ ಬಿಜೆಪಿ ಸೇರ್ಪಡೆಯಾಗಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನದುದ್ದಕ್ಕೂ ಅವರಿಗೆ ಕಿರುಕುಳ, ಅಪಮಾನ ಮಾಡಿದ್ದು ಕಾಂಗ್ರೆಸ್. ನಾನು ಆ ಪಕ್ಷಕ್ಕೆ ಹೋಗಬೇಕಾ? ವಿಶ್ವಮಟ್ಟದಲ್ಲಿ ಅಂಬೇಡ್ಕರ್ ಅವರಿಗೆ ಗೌರವ ತಂದು ಕೊಟ್ಟ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿಗೆ ಹೋಗಿದ್ದು ಸರಿ ಅಲ್ಲವೆ? ಎಂದು ಬಿಜೆಪಿ ಸೇರ್ಪಡೆಯ ತಮ್ಮ ನಡೆಯನ್ನು ಎನ್.ಮಹೇಶ್ ಸಮರ್ಥಿಸಿಕೊಂಡರು.

ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಬಿಜೆಪಿ ವಿಭಾಗ ಪ್ರಭಾರಿ ಮೈ.ವಿ.ರವಿಶಂಕರ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಮಾಜಿ ಶಾಸಕಿ ಪರಿಮಳಾ ನಾಗಪ್ಪ ಮಾತನಾಡಿದರು.

ಬಿಜೆಪಿ ಸೇರ್ಪಡೆ: ಭಾರತೀಯ ಪರಿವರ್ತನಾ ಸಂಘದ ಜಿಲ್ಲಾಧ್ಯಕ್ಷರಾದ ಆಲೂರು ಮಲ್ಲು, ಸುರೇಶ್, ಮಾಂಬಳ್ಳಿ ಮಹದೇವು, ರಾಮಕೃಷ್ಣ, ಸಿದ್ದಪ್ಪಾಜಿ ಸೇರಿದಂತೆ ನೂರಕ್ಕೂ ಹೆಚ್ಚು ಅಭಿಮಾನಿಗಳು, ಬೆಂಬಲಿಗರು ಬಿಜೆಪಿ ಸೇರ್ಪಡೆಯಾದರು.

ಸಮಾರಂಭದಲ್ಲಿ ರಾಷ್ಟ್ರೀಯ ಓಬಿಸಿ ಮೋರ್ಚಾಗಳ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮಂಗಲ ಶಿವಕುಮಾರ್, ನಾಗಶ್ರೀ ಪ್ರತಾಪ್, ನಾರಾಯಣಪ್ರಸಾದ್, ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ಉಪಾಧ್ಯಕ್ಷೆ ಪಿ.ಸುಧಾ, ಹಾಸನ ಪ್ರಭಾರಿ ನಿಜಗುಣರಾಜ್, ಚುಡಾಧ್ಯಕ್ಷ ಶಾಂತಮೂರ್ತಿ ಕುಲಗಾಣ, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಯಸುಂದರ್, ಎಸ್ಸಿ ಮೋರ್ಚಾ ಅಧ್ಯಕ್ಷ ಕಿನಕಹಳ್ಳಿ ರಾಚಯ್ಯ, ಜಿಲ್ಲಾ ಕೋರ್‌ಕಮಿಟಿ ಸದಸ್ಯ ಡಾ.ಎ.ಆರ್.ಬಾಬು, ಗ್ರಾಮಾಂತರ ಮಂಡಲ ಅಧ್ಯಕ್ಷ ಬಸವಣ್ಣ, ನಗರ ಅಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವು, ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ವೇಣುಗೋಪಾಲ್ ಇತರರಿದ್ದರು.

ಕೆರೆಗಳ ಒತ್ತುವರಿ ದೂರು; ಡಿಸಿ ಭೇಟಿ, ನೀರಾವರಿ ಅಧಿಕಾರಿಗಳಿಗೆ ತರಾಟೆ



ಕೊಳ್ಳೇಗಾಲದಲ್ಲಿ ಕೆರೆಗಳನ್ನು ಪರಿಶೀಲಿಸಿದ ನಂತರ ಜಿಲ್ಲಾಧಿಕಾರಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಕೊಳ್ಳೇಗಾಲ,ಏ.26(ನಾಗೇಂದ್ರಸ್ವಾಮಿ)–ಕೊಳ್ಳೇಗಾಲ ನಗರದ ಕೊಂಗರಕೆರೆ, ತಟ್ಟೆಕೆರೆ, ಅಬ್ಬಗೆರೆ ಹಾಗೂ ರಂಗನಾಥ ಕೆರೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅತಿಕ್ರಮ ತೆರವುಗೊಳಿಸದ ನೀರಾವರಿ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಸಾರ್ವಜನಿಕ ದೂರಿನ ಹಿನ್ನೆಲೆ ನಗರಕ್ಕೆ ಭೇಟಿ ನೀಡಿ, ಕೆರೆಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಕೂಡಲೇ ಜಂಟಿ ಸರ್ವೆ ನಡೆಸಿ ಕೆರೆಗಳ ಅತಿಕ್ರಮದ ಸ್ವರೂಪದ ವರದಿ ನೀಡುವಂತೆ ಸೂಚಿಸಿದರಲ್ಲದೆ, ಅತಿಕ್ರಮವಾಗಿರುವುದು ದೃಢಪಟ್ಟರೂ ಏಕೆ ಕ್ರಮ ಕೈಗೊಂಡಿಲ್ಲ ಎಂದು ನೀರಾವರಿ ಅಧಿಕಾರಿಗಳ ವಿರುದ್ಧ ಹರಿಹಾಯ್ದರು.

ಅಬ್ಬಕೆರೆ ಸಂಪೂರ್ಣವಾಗಿ ಅತಿಕ್ರಮಣವಾಗಿ ಕಟ್ಟಡ, ನಿವೇಶನಗಳಾಗಿರುವ ಕುರಿತು ಹಾಗೂ ಜಾಗ ಕೆರೆ ಸ್ವರೂಪವೇ ಇಲ್ಲದ ಸಂಗತಿ ಅರಿತ ಜಿಲ್ಲಾಧಿಕಾರಿಗಳು ಅತಿಕ್ರಮ ತೆರವುಗೊಳಿಸುವ ಕುರಿತು ಶೀಘ್ರವೇ ಕ್ರಮ ವಹಿಸಲಾಗುವುದು. ಈ ಸಂಬಂಧ ಹಿಂದೆಯೇ ಕಂದಾಯ ಇಲಾಖೆ ಕೆರೆಗಳ ಅಗತ್ಯ ಸರ್ವೆ ಇತ್ಯಾದಿ ಕ್ರಮಗಳನ್ನು ಕೈಗೊಂಡಿದೆ. ಆದರೆ ಇತರೆ ಇಲಾಖಾಧಿಕಾರಿಗಳ ಅಸಹಕಾರದಿಂದ ಅತಿಕ್ರಮ ತೆರವಾಗಿಲ್ಲ ಎಂದು ಮಾಹಿತಿ ನೀಡಿದರು. ಈ ಕುರಿತು ಪರಿಶೀಲಿಸಿ ಸಂಬಂಧಪಟ್ಟ ಎಲ್ಲಾ ಇಲಾಖಾಧಿಕಾರಿಗಳಿಂದಲೂ ಮಾಹಿತಿ ಕೋರಿ, ಜರೂರು ಕ್ರಮಕ್ಕೆ ಸೂಚಿಸಲಾಗುವುದು ಎಂದರು.

ಹೋರಾಟಗಾರ ದಶರಥ್ ಮಾತನಾಡಿ, ಇದು ಸಂಪೂರ್ಣ ಕೆರೆ ಜಾಗ, ಅತಿಕ್ರಮಕ್ಕೆ ಹಿಂದಿನ ಅಧಿಕಾರಿಗಳು ಸಾಥ್ ನೀಡಿದ್ದಾರೆ ಎಂದು ಆರೋಪಿಸಿ ದಾಖಲೆ ತೋರಿಸಿ ಜಿಲ್ಲಾಧಿಕಾರಿಗಳಿಗೆ ವಿವರಿಸಿದರು. ಬಳಿಕ ಕೃಷಿ ಇಲಾಖೆ, ಜೀವನ ಜ್ಯೋತಿ ಟ್ರಸ್ಟ್ ಮತ್ತು ಕೆಯುಸಿ ಕ್ಲಬ್‌ಗಳಿಗೂ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿ, ಉಪವಿಭಾಗಾಧಿಕಾರಿ ಡಾ.ಗಿರೀಶ್, ತಹಸೀಲ್ದಾರ್ ಮಂಜುಳಾ ಸೇರಿದಂತೆ ನೀರಾವರಿ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ



ಚಾಮರಾಜನಗರ.ಏ.26(ಎಸ್‌ಎಸ್)– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘದ ಚಾ.ನಗರ ಜಿಲ್ಲಾ ಸಮಿತಿ ನಗರದಲ್ಲಿಂದು ಪ್ರತಿಭಟಿಸಿತು.

ನಗರದ ಜನನ ಮಂಟಪದ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ತೆರಳಿ ಪ್ರತಿಭಟಿಸಿದರು.

ಭತ್ತ ರಾಗಿ, ಜೋಳ ಹಾಗೂ ಮೆಕ್ಕೆ ಜೋಳ ಮತ್ತು ಇತರೆ ದವಸ ಧಾನ್ಯಗಳನ್ನು ಕನಿಷ್ಠ ಬೆಂಬಲ ಬೆಲೆಯಡಿ ಪೂರ್ಣ ಉತ್ಪನ್ನಗಳನ್ನು ಖರೀದಿಸಬೇಕು. ಭಾಗ್ಯಜ್ಯೋತಿ, ಕುಟೀರಜ್ಯೋತಿ ವಿದ್ಯುತ್ ಸಂಪರ್ಕಗಳನ್ನು ಕಡಿತ ಮಾಡುವುದನ್ನು ತಕ್ಷಣ ನಿಲ್ಲಿಸಬೇಕು. ಕರ ನಿರಾಕರಣ ಚಳವಳಿಗಾರರ ಮನೆ ವಿದ್ಯುತ್ ಬಿಲ್ಲಿನ ಬಾಕಿಯನ್ನು ಸಂಪೂರ್ಣ ಮನ್ನಾ ಮಾಡಿ ಮುಂದಿನ ಬಿಲ್ ಅನ್ನು ಪಾವತಿಸಬೇಕು. ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕು ಎಂದು ಒತ್ತಾಯಿಸಿದರು.

ಟ್ರಾಕ್ಟರ್ ಹಾಗೂ ಇತರೆ ಕೃಷಿ ಉಪಕರಣಗಳ ಗರಿಷ್ಠ ಮಾರುಕಟ್ಟೆ ಧಾರಣೆ ಎಂಆರ್‌ಪಿ ಕಂಪನಿಗಳ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಬೇಕು. ಗ್ರಾಮೀಣ ರಸ್ತೆಗಳ ಅಭಿವೃದ್ಧಿಯಾಗಬೇಕು. ರೈತರ ಜಮೀನು ಖಾತೆಗಳ ಪೋಡಿ ಹಾಗೂ ಹದ್ದುಬಸ್ತು ಮಾಡಲು ವಿಧಿಸುವ ಸರ್ಕಾರಿ ಶುಲ್ಕವನ್ನು ಅಧಿಕ ಪ್ರಮಾಣದಲ್ಲಿ ಹೆಚ್ಚಳ ಮಾಡಿರುವುದನ್ನು ಕಡಿತ ಮಾಡಬೇಕು. ಅಂಗಡಿಗಳಲ್ಲಿ ಪಡಿತರ ಚೀಟಿದಾರರಿಗೆ ಅಡುಗೆ ಎಣ್ಣೆಯನ್ನು ಕಡಿಮೆ ಬೆಲೆಯಲ್ಲಿ ವಿತರಿಸಲು ಕ್ರಮವಹಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಹೆಬ್ಬಸೂರು ಬಸವಣ್ಣ, ಸಿದ್ದರಾಜು, ಗೌಡೇಗೌಡ, ಮಹದೇವಪ್ರಸಾದ್, ಮಹದೇವಸ್ವಾಮಿ, ಮಹೇಶ್ ನಾಯಕ, ಗಜೇಂದ್ರ, ರಾಜಪ್ಪ, ರಾಜಶೇಖರಪ್ಪ, ಕುಮಾರಸ್ವಾಮಿ, ಶಿವನಂಜಪ್ಪ ಸೇರಿದಂತೆ ಇತರರಿದ್ದರು.

ನಿಧನ

ಎಂ.ಮಹದೇವನಾಯಕ



ಚಾಮರಾಜನಗರ, ಏ.26–ತಾಲೂಕಿನ ಕಣ್ಣೇಗಾಲ ಗ್ರಾಮದ ಎಂ.ಮಹದೇವನಾಯಕ(48) ಅನಾರೋಗ್ಯದಿಂದ ಮೈಸೂರು ಕೆ.ಆರ್.ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಪುತ್ರಿ–ಪುತ್ರ ಸೇರಿದಂತೆ ಅಪಾರ ಬಂಧು– ಬಳಗ ಅಗಲಿದ್ದಾರೆ.

ಮೃತರ ಸ್ವಗ್ರಾಮವಾದ ಕಣ್ಣೇಗಾಲ ಗ್ರಾಮದಲ್ಲಿರುವ ಅವರ ಜಮೀನಿನಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ದಿವ್ಯಾ ಹಾಗರಗಿ ಭೇಟಿಯಾಗಿದ್ದು ನಿಜ, ನನಗೂ ನೋಟಿಸ್ ಕೊಡಲಿ: ಡಿಕೆಶಿ

ಬೆಂಗಳೂರು,ಏ.26– ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ ಆರೋಪಿ ದಿವ್ಯಾ ಹಾಗರಗಿ ತಾವು ಜೊತೆ ಮಾತನಾಡುತ್ತಿರುವ ಫೋಟೋ ವೈರಲ್ ಆಗಿರುವ ಬಗ್ಗೆ ಪ್ರತಿಕ್ರಿಯಿಸಿರುವ ಡಿ.ಕೆ.ಶಿವಕುಮಾರ್ ನನಗೂ ನೋಟಿಸ್ ಕೊಡಲಿ ಎಂದಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು ನನಗೂ ನೋಟೀಸ್ ಕೊಡಲಿ, ನನ್ನನ್ನು ವಿಚಾರಣೆಗೆ ಕರೆಯಲಿ, ನನಗೂ ಈಗ ಆ ಫೋಟೋ ಬಗ್ಗೆ ಹೇಳಿದ್ರು. ನೂರಾರು ಜನ ನನ್ನ ಭೇಟಿ ಮಾಡ್ತಾರೆ. ನಾನು ಮಂತ್ರಿಯಾಗಿದ್ದವನು. ಮಂತ್ರಿ ಆಗಿದ್ದಾಗ ದಿವ್ಯಾ ಹಾಗರಗಿ ಯಾವುದೋ ಡೆಲಿಗೇಶನ್ ಕರೆ ತಂದು, ಮಾತನಾಡಿ ಹೋಗಿದ್ದರು. ಬಿಜೆಪಿಯವರು ನಮ್ಮ ಬಗ್ಗೆ ಮಾತನಾಡುತ್ತಾರೆ. ಮಾತನಾಡುತ್ತಾ ಇರಬೇಕು. ನನ್ನ ಹೆಸರು ಬರಬೇಕಲ್ಲ. ಓಡಾಡ್ತಿರುತ್ತೆ ಓಡುವಷ್ಟು ದಿನ ಓಡಲಿ ಎಂದಿದ್ದಾರೆ. ಇದೇ ವೇಳೆ ಪ್ರಶಾಂತ್ ಕಿಶೋರ್ ಕೈ ಸೇರ್ಪಡೆ ನಿರಾಕರಣೆ ಬಗ್ಗೆ ಪ್ರತಿಕ್ರಿಯಿಸಿ, ಅವರ ತೀರ್ಮಾನ ಅವರು ತಿಳಿಸಿದ್ದಾರೆ. ಬಹಳ ದಿನಗಳಿಂದ ಚರ್ಚೆಗಳು ನಡೆದವು. ನಾನು ಇಲ್ಲಿ ಅದರ ಬಗ್ಗೆ ಮಾತನಾಡಲ್ಲ. ರಾಷ್ಟ್ರೀಯ ನಾಯಕರು ನಿರ್ಧಾರ ಮಾಡುತ್ತಾರೆ ಎಂದರು.

ಒಂದನೇ ಪುಟದಿಂದ

ಮತ್ತೆ ಕಣ್ಗಾವಲು

ನಂತರ ಕೇಂದ್ರದ ಸಲಹೆಯನ್ನು ಆಧರಿಸಿ, ರಾಜ್ಯದ ವಿಮಾನ ನಿಲ್ದಾಣಗಳು ಮತ್ತು ಗಡಿ ಜಿಲ್ಲೆಗಳಲ್ಲಿ ವಿಶೇಷವಾಗಿ ಮಹಾರಾಷ್ಟ್ರ ಮತ್ತು ಕೇರಳ ಗಡಿಯಲ್ಲಿ ಎಲ್ಲಾ ಮುನ್ನೆಚ್ಚರಿಕೆ ಮತ್ತು ಕಣ್ಗಾವಲು ಕ್ರಮಗಳನ್ನು ಮತ್ತೆ ಜಾರಿಗೊಳಿಸುತ್ತೇವೆ ಎಂದು ಹೇಳಿದರು.

ನಾಳೆ ಪ್ರಧಾನಮಂತ್ರಿ ಮೋದಿ ಅವರು ಕೋವಿಡ್ ಸ್ಥಿತಿಗತಿ ಬಗ್ಗೆ ವೀಡಿಯೋ ಕಾನ್ಫರೆನ್ಸ್ ನಡೆಸಲಿದ್ದಾರೆ. ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಅವರಿಗೆ ವಿವರಿಸಲಾಗುವುದು ಎಂದು ಹೇಳಿದರು.

ಇತ್ತೀಚೆಗೆ ಎರಡು ದೇಶಗಳಲ್ಲಿ ಕೊರೊನಾ ಸಾಂಕ್ರಾಮಿಕ ಉಲ್ಬಣವಾಗಿದೆ. ಭಾರತದ ನೆರೆಯ ದೇಶಗಳಾದ ಥೈಲ್ಯಾಂಡ್, ಇಂಡೋನೇಷ್ಯಾ, ಚೈನಾ ದೇಶಗಳಲ್ಲಿಯೂ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಪ್ರಧಾನಮಂತ್ರಿಗಳು ಮುಂಜಾಗ್ರತೆ ವಹಿಸಿ ಎಲ್ಲ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ. ನಿನ್ನೆ ನಡೆದಿರುವ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸಭೆ ಸೇರಿ ಕೆಲವು ಸೂಕ್ತ ನಡವಳಿಕೆಗಳನ್ನು ಪುನಃ ಜಾರಿಗೊಳಿಸಲು ಸೂಚಿಸಲಾಗಿದೆ. ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಸೂಚಿಸಲಾಗಿದೆ. ಎಲ್ಲರೂ ಇದನ್ನು ಪಾಲಿಸಿದರೆ ಉತ್ತಮ. ಇದುವರೆಗೂ ಯಾರೂ ಆಸ್ಪತ್ರೆಗೆ ದಾಖಲಾಗಿಲ್ಲ. ಆದರೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಬೊಮ್ಮಾಯಿ ದೆಹಲಿ ಯಾತ್ರೆ

ಆದರೆ, ಪ್ರಧಾನಿ ಅವರು ಇದುವರೆಗೂ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಕರ್ನಾಟಕದ ಬಿಜೆಪಿಯಲ್ಲಿ ಮಾತ್ರ ಊಹಾಪೋಹಗಳು ಹರಿದಾಡುತ್ತಿವೆ. ಇದಕ್ಕೆ ಇತಿಶ್ರೀ ಹಾಡಲೆಂದೇ ಮುಖ್ಯಮಂತ್ರಿ ಅವರೇ ಸ್ವತಃ ಪ್ರಧಾನಿ ಭೇಟಿಗೆ ಆಸಕ್ತಿ ತೋರಿದ್ದಾರೆ.

ಏ.30ರಂದು ಮೋದಿ ಅವರು ಸಮಯ ನೀಡಿದರೆ, ಭೇಟಿಯಾದರೆ, ರಾಜ್ಯ ರಾಜಕೀಯ ಮತ್ತು ತಮ್ಮ 8 ತಿಂಗಳ ಆಡಳಿತಾವಧಿಯ ಅಭಿವೃದ್ಧಿ ಮತ್ತು ಪಕ್ಷದ ಜತೆಗಿರುವ ಸಂಬಂಧದ ಬಗ್ಗೆ ಮನವರಿಕೆ ಮಾಡಿಕೊಟ್ಟು, ಮುಂಬರುವ ಚುನಾವಣೆ ಹಿನ್ನೆಲೆಯಲ್ಲಿ ಸಂಪುಟದಲ್ಲಿ ಕೆಲ ಬದಲಾವಣೆ ತರಲು ಅವಕಾಶ ಮಾಡಿಕೊಡುವಂತೆ ಕೋರಲಿದ್ದಾರೆಂದು ಅವರ ಆಪ್ತ ಮೂಲಗಳು ತಿಳಿಸಿವೆ. ಆ ನಂತರ ಪ್ರಧಾನಿ ಅವರು ಪಕ್ಷ ಮತ್ತು ಸಂಘ ತೆಗೆದುಕೊಂಡಿರುವ ತೀರ್ಮಾನಕ್ಕೆ ಸಮ್ಮತಿ ನೀಡುತ್ತಾರೋ ಅಥವಾ ಬೊಮ್ಮಾಯಿ ಅವರ ಕೋರಿಕೆಗೆ ಮನ್ನಣೆ ನೀಡುತ್ತಾರೋ ಎಂಬುದನ್ನು ಕಾದು ನೋಡಬೇಕಿದೆ.

ದೆಹಲಿ ಪ್ರವಾಸ ನಿಗದಿಯಾಗುತ್ತಿದ್ದಂತೆ ತಾವು ಮಾರ್ಚ್‌ನಲ್ಲಿ ಮಂಡಿಸಿರುವ ಮುಂಗಡ ಪತ್ರದಲ್ಲಿ ಪ್ರಕಟಿಸಿರುವ ಯೋಜನೆಗಳನ್ನು ಮೇ 15ರೊಳಗೆ ಕಾರ್ಯಾದೇಶ ಹೊರಡಿಸಬೇಕೆಂದು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಆದೇಶ ನೀಡಿದ್ದಾರೆ. ಈ ಆದೇಶ ರಾಜಕೀಯ ವಲಯದಲ್ಲಿ ನಾನಾ ವ್ಯಾಖ್ಯಾನಗಳಿಗೆ ಎಡೆಮಾಡಿಕೊಟ್ಟಿದೆ.

ಮಕ್ಕಳಿಗೆ ಕಾರ್ಬೆವಾಕ್ಸ್ ಲಸಿಕೆ

5 ತಿಂಗಳವರೆಗೆ ಮಾಸಿಕ ದತ್ತಾಂಶ ಸಲ್ಲಿಸಿತ್ತು. ಈ ದತ್ತಾಂಶ ಪರಿಶೀಲನೆ ಬಳಿಕ ಡಿಸಿಜಿಐ ಲಸಿಕೆ ನೀಡಿಕೆಗೆ ಅನುಮೋದನೆ ನೀಡಿದೆ ಎನ್ನಲಾಗಿದೆ. ಅಷ್ಟೇ ಅಲ್ಲದೆ ಇದೇ ಸಂದರ್ಭದಲ್ಲಿ ಡಿಸಿಜಿಐ 5–12 ವರ್ಷ ವಯಸ್ಸಿನ ಮಕ್ಕಳಿಗೆ ಕಾರ್ಬೆವಾಕ್ಸ್‌ಗೆ ತುರ್ತು ಬಳಕೆಯ ಅಧಿಕಾರವನ್ನು ಸಹ ನೀಡಿದ್ದು, ಇದಲ್ಲದೆ 12 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ Zycov ಆ (ಜೈಡಸ್ ಕ್ಯಾಡಿಲಾ ಲಸಿಕೆ)ಗೆ ತುರ್ತು ಬಳಕೆಯ ಅಧಿಕಾರವನ್ನು ನೀಡಿದೆ.

6–12 ವರ್ಷ ವಯಸ್ಸಿನ ಮಕ್ಕಳಿಗೆ ಭಾರತ್ ಬಯೋಟೆಕ್‌ನ ಕೋವಾಕ್ಸಿನ್‌ಗೆ ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಸಿಜಿಐ) ನಿರ್ಬಂಧಿತ ತುರ್ತು ಬಳಕೆಯ ಅಧಿಕಾರವನ್ನು ನೀಡಿದ್ದು, ಸುರಕ್ಷತಾ ಡೇಟಾವನ್ನು ಸಲ್ಲಿಸುವಂತೆ ಕೇಳಿದೆ. ಪ್ರತಿಕೂಲ ಪರಿಣಾಮಗಳ ದತ್ತಾಂಶವನ್ನು ಒಳಗೊಂಡಂತೆ ಸುರಕ್ಷತಾ ದತ್ತಾಂಶವನ್ನು ಸಲ್ಲಿಸಲು ಭಾರತ್ ಬಯೋಟೆಕ್ ಸೂಚಿಸಿದ್ದು, ಮೊದಲ 2 ತಿಂಗಳು ಪ್ರತಿ 15 ದಿನಗಳಿಗೊಮ್ಮೆ ಮತ್ತು ನಂತರ 5 ತಿಂಗಳವರೆಗೆ ತಿಂಗಳ ದತ್ತಾಂಶವನ್ನು ನೀಡುವಂತೆ ಹೇಳಿದೆ.

ಬೆಂಬಲ ಬೆಲೆಯಡಿ ರಾಗಿ ಖರೀದಿ

ಎಕರೆಗೆ ಕನಿಷ್ಟ 10 ಹಾಗೂ ಗರಿಷ್ಟ 20 ಕ್ವಿಂಟಾಲ್ ರಾಗಿಯನ್ನು ಕ್ವಿಂಟಾಲ್‌ಗೆ 3,377 ರೂ. ಕನಿಷ್ಟ ಬೆಂಬಲ ಬೆಲೆಗೆ ಖರೀದಲಾಗುತ್ತದೆ. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಮೈಸೂರು ವಿಭಾದ ಮೂಲಕ ರಾಗಿ ಖರೀದಿಗೆ ಆದೇಶಿಸಲಾಗಿದ್ದು, ಮೊನ್ನೆ(ಏ.24)ಯಿಂದಲೇ ರೈತರ ನೋಂದಣಿ ಆರಂಭಿಸಲಾಗಿದೆ.

ರಾಗಿ ಖರೀದಿ ಗುರಿ ಸಾಧನೆವರೆಗೆ ಮಾತ್ರ ಕೇಂದ್ರಗಳು ಕಾರ್ಯಾಚರಣೆ ಮಾಡಲಿವೆ. ಕೃಷಿ ಇಲಾಖೆಯಿಂದ ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆಯಡಿ ನೀಡಿರುವ 'ಫ್ರೂಟ್ಸ್' ಐಡಿಯನ್ನು ಖರೀದಿ ಕೇಂದ್ರಗಳಲ್ಲಿ ಹಾಜರುಪಡಿಸಿ, ಹೆಸರು ನೋಂದಾಯಿಸಿಕೊಳ್ಳಬೇಕು. ಬಳಿಕ ಖರೀದಿ ಕೇಂದ್ರ ನಿಗಧಿಪಡಿಸಿದ ದಿನಾಂಕದಂದು ಸ್ವಂತ ಖರ್ಚಿನಲ್ಲಿ ರಾಗಿ ಸರಬರಾಜು ಮಾಡಬೇಕು. ಗುಣಮಟ್ಟ ಪರಿವೀಕ್ಷಕರು ಪರಿಶೀಲಿಸಿ ದೃಢೀಕರಿಸಿದ ನಂತರವೇ ಖರೀದಿಸಲಾಗುತ್ತದೆ. ರಾಗಿ ಮಾರಾಟ ವೇಳೆ ರೈತರು ಯಾವುದೇ ಮಧ್ಯವರ್ತಿ ಅಥವಾ ಏಜೆಂಟ್‌ಗಳನ್ನು ಬೆಂಬಲಿಸಬಾರದು. ರಾಗಿ ಖರೀದಿ ಬಳಿಕ ಹಣವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಪಾವತಿಸಲಾಗುವುದು ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷರೂ ಆದ ಡಿಸಿ ಡಾ.ಬಗಾದಿ ಗೌತಮ್ ತಿಳಿಸಿದ್ದಾರೆ. ಕಳೆದ ಮುಂಗಾರು ಋತುವಿನಲ್ಲಿ ರಾಜ್ಯದಲ್ಲಿ ನಿರೀಕ್ಷೆಗಿಂತ ಹೆಚ್ಚು ರಾಗಿ ಉತ್ಪಾದನೆಯಾಗಿದೆ. ಈ ಹಿನ್ನೆಲೆಯಲ್ಲಿ ರೈತರು ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಯನ್ನು ಮುಂದುವರೆಸುವಂತೆ ಸರ್ಕಾರದ ಮುಂದೆ ಬೇಡಿಕೆಯನ್ನಿಟ್ಟಿದ್ದರು. ರೈತರ ಒತ್ತಾಯಕ್ಕೆ ಮಣಿದ ಸರ್ಕಾರ ರಾಗಿ ಖರೀದಿ ಮುಂದುವರೆಸಲು ಆದೇಶಿಸಿದೆ. ಈಗಾಗಲೇ 2021–22ನೇ ಸಾಲಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಮಾರಾಟ ಮಾಡಿರುವ ರೈತರನ್ನು ಹೊರತುಪಡಿಸಿ ಇನ್ನುಳಿದ ಬೆಳೆಗಾರರಿಂದ ಒಟ್ಟು 1.14 ಲಕ್ಷ ಮೆಟ್ರಿಕ್ ಟನ್ ರಾಗಿಯನ್ನು ಕ್ವಿಂಟಾಲ್‌ಗೆ 3,377 ರೂ. ದರದಲ್ಲಿ ಖರೀದಿಸಲು ಸೂಚಿಸಿದೆ.

ಇಲ್ಲದಂತಿರುವ ಜಿಲ್ಲಾ ಕೈಗಾರಿಕಾ ಕೇಂದ್ರ!

ಕೆಐಎಡಿಬಿ(ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್ ಮೆಂಟ್ ಬೋರ್ಡ್)ಯಿಂದ ಉದ್ಯಮಿಗಳಿಗೆ ಭೂಮಿ ನೀಡಲಾಗುತ್ತಿದೆ. ಅರ್ಜಿ ಸಲ್ಲಿಸಿದವರು ಕೆಐಎಡಿಬಿ (ಜಾಗದ ವಿಸ್ತೀರ್ಣಕ್ಕೆ ತಕ್ಕಂತೆ)ಗೆ ಇತರೆ ಸಮುದಾಯದವರು ಶೇ.30ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ.10ರಷ್ಟು ಹಣ ಕಟ್ಟಿದರೂ ಭೂಮಿ ಗುರ್ತಿಸದೆ ಹೊಸ ಉದ್ಯಮಿಗಳ ಉತ್ಸಾಹವನ್ನೇ ಹಾಳು ಮಾಡಲಾಗುತ್ತಿದೆ.

ಹೆಸರಿಗಷ್ಟೇ ಜಿಲ್ಲಾ ಕೇಂದ್ರ: 15 ಕೋಟಿ ರೂ. ಯೋಜನಾ ವೆಚ್ಚ ಹಾಗೂ 2 ಎಕರೆಗಿಂತ ಕಡಿಮೆ ವಿಸ್ತೀರ್ಣದಲ್ಲಿ ಉದ್ಯಮ ಸ್ಥಾಪಿಸಲು ಸಲ್ಲಿಸುವ ಅರ್ಜಿಗಳನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚನೆಯಾ ಗುವ 'ಸಬ್ ಕಮಿಟಿ' ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ 'ಡಿಸ್ಟ್ರಿಕ್ಟ್ ಸಿಂಗಲ್ ವಿಂಡೋ ಕಮಿಟಿ'ಯಲ್ಲಿ ಆಯ್ಕೆ ಮಾಡಲಾಗುವುದು. ಬಳಿಕ ಆಯ್ಕೆಗೊಂಡ ಅರ್ಜಿದಾರರಿಗೆ ಭೂಮಿ ನೀಡುವಂತೆ ಕೋರಿ ಕೆಐಎಡಿಬಿಗೆ ಅರ್ಜಿಗಳ ವರ್ಗಾಯಿಸಲಾಗುವುದು. ಆದರೆ ಜಿಲ್ಲಾ ಕೇಂದ್ರದಿಂದ ಬಂದ ಅರ್ಜಿಗಳ ಬದಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಕೇಂದ್ರ ಕಚೇರಿಯಿಂದ ಬಂದ ಅರ್ಜಿಗಳಿಗೆ ಮಾತ್ರ ಭೂಮಿ ನೀಡಲಾಗುತ್ತಿದ್ದು, ಹೆಸರಿಗಷ್ಟೆ ಜಿಲ್ಲಾ ಕೈಗಾರಿಕಾ ಕೇಂದ್ರವೆಂಬುದಿದೆ ಎಂಬ ವ್ಯಾಪಕ ದೂರುಗಳು ಕೇಳಿಬಂದಿವೆ.

ಕಳೆದ ನಾಲ್ಕೈದು ವರ್ಷಗಳಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೇಂದ್ರಕ್ಕೆ ಹೊಸ ಉದ್ಯಮ ಸ್ಥಾಪನೆಗಾಗಿ ಅರ್ಧ ಎಕರೆ, ಒಂದು ಎಕರೆ ಭೂಮಿ ನೀಡುವಂತೆ ಅರ್ಜಿ ಸಲ್ಲಿಸಿರುವವರಲ್ಲಿ ಒಬ್ಬರಿಗೂ ಭೂಮಿ ನೀಡಿಲ್ಲ. ರೈತರಿಂದ ತೊಂದರೆ, ಭೂಮಿ ದೊರೆಯುತ್ತಿಲ್ಲ ಎಂಬಿತ್ಯಾದಿ ಕಾರಣಗಳನ್ನು ಕೆಐಎಡಿಬಿ ಅಧಿಕಾರಿಗಳು ನೀಡುತ್ತಿದ್ದಾರೆ. ಆದರೆ ಇಲಾಖೆಯ ಕೇಂದ್ರ ಕಚೇರಿಯಲ್ಲಿರುವ 'ಕರ್ನಾಟಕ ಉದ್ಯೋಗ ಮಿತ್ರ'ದಿಂದ ಐದಾರು ಎಕರೆ ಭೂಮಿ ನೀಡುವಂತೆ ಬರುವ ಅರ್ಜಿ ಗಳಿಗೆ ತ್ವರಿತವಾಗಿ ಭೂಮಿ ನೀಡುವ ಮೂಲಕ ಸಣ್ಣ ಉದ್ಯಮ ಆರಂಭಿಸಬೇಕು ಎಂದುಕೊಂಡವರನ್ನು ಸಂಪೂರ್ಣವಾಗಿ ಕಡೆಗಣಿಸಲಾಗುತ್ತಿದೆ ಎಂದು ಎಸ್‌ಸಿ–ಎಸ್‌ಟಿ ಕೈಗಾರಿಕೋದ್ಯಮಿಗಳ ಸಂಘದ ವಿಭಾಗೀಯ ಅಧ್ಯಕ್ಷ ಆರ್.ಮಂಜುನಾಥ್ 'ಮೈಸೂರು ಮಿತ್ರ'ನಲ್ಲಿ ದೂರಿದರು.

ಭಾರೀ ಹಿನ್ನಡೆ: ಕೆಐಎಡಿಬಿಯವರಿಗೆ ದುಡ್ಡು ಕಟ್ಟಿ ನಾಲ್ಕೈದು ವರ್ಷದಿಂದ ನೂರಾರು ಮಂದಿ ಅರ್ಜಿದಾರರು ಭೂಮಿಗಾಗಿ ಕಾಯುತ್ತಿದ್ದಾರೆ. ಸರ್ಕಾರ 'ಉದ್ಯಮ ಮಾಡು, ಉದ್ಯೋಗ ನೀಡು' ಎಂದು ಬರೀ ಪ್ರಚಾರ ಮಾಡುತ್ತಿದೆಯೇ ಹೊರತು ಹೊಸ ಉದ್ಯಮಿಗಳಿಗೆ ಅವಕಾಶ ಮಾಡಿಕೊಟ್ಟಿಲ್ಲ. ಮೈಸೂರು, ಚಾ.ನಗರ ಜಿಲ್ಲೆಯಲ್ಲಿ ಭಾರೀ ಹಿನ್ನಡೆಯಾಗಿದೆ. ಕೈಗಾರಿಕೆ ಉದ್ದೇಶದಿಂದ ರೈತರಿಂದ ಸ್ವಾಧೀನಪಡಿಸಿಕೊಂಡ ಭೂಮಿಗೂ ಸರಿಯಾಗಿ ಪರಿಹಾರ ವಿತರಣೆ ಆಗಿಲ್ಲ. ಕೋರ್ಟ್ ಕೇಸ್‌ಗಳು 10–15 ವರ್ಷಗಳಿಂದ ನಡೆಯುತ್ತಲೇ ಇವೆ ಎಂದು ಬೇಸರ ವ್ಯಕ್ತಪಡಿಸಿದರು.

ಉ.ಪ್ರದೇಶ ಮಾದರಿ ರಾಜ್ಯದಲ್ಲೂ ಟನ್ ಕಬ್ಬಿಗೆ 3,500 ರೂ. ನಿಗದಿ ಮಾಡಿ

● ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷರ ಆಗ್ರಹ ● ಡಿಜಿಟಲ್ ಆ್ಯಪ್ ಮೂಲಕ ಕಬ್ಬು ಬೆಳೆ ಸರ್ವೆ ಮಾಡಿ ● ಕಬ್ಬು ಬೆಳೆಗಾರರಿಗೆ ಡಿಜಿಟಲ್ ಪೇಮೆಂಟ್ ಮಾಡಬೇಕು ● ಬೆಂಗಳೂರಲ್ಲಿ ಈ ಸಂಬಂಧ ಏ.29ರಂದು ಚಿಂತನ ಮಂಥನ



ಮೈಸೂರು,ಏ.26(ಎಂಟಿವೈ)– ಉತ್ತರಪ್ರದೇಶದ ಮಾದರಿ ಕರ್ನಾಟಕದಲ್ಲೂ ಒಂದು ಟನ್ ಕಬ್ಬಿಗೆ 3,500 ರೂ. ದರ ನಿಗದಿ ಮಾಡಿ, ಡಿಜಿಟಲ್ ಆ್ಯಪ್ ಮೂಲಕ ಕಬ್ಬು ಬೆಳೆಯ ಸರ್ವೇ ಮಾಡಿ ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಒತ್ತಾಯಿಸಿದ್ದಾರೆ.

ಮೈಸೂರಿನ ಗನ್‌ಹೌಸ್ ಬಳಿಯಿರುವ ಕುವೆಂಪು ಪಾರ್ಕ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬು ಬೆಳೆಗಾರರ ಹಿತಕಾಯಲು ರಾಜ್ಯ ಸರ್ಕಾರ ವಿಫಲವಾಗಿದೆ. ಉತ್ತರ ಪ್ರದೇಶದ ಸರ್ಕಾರ ಕಬ್ಬು ಬೆಳೆಗಾರರ ಹಿತ ಕಾಯಲು ಮುಂದಾಗಿದೆ. ಆದರೆ ಕರ್ನಾಟಕದಲ್ಲಿ ಕಬ್ಬು ಬೆಳೆಗಾರರ ಬಗ್ಗೆ ಕಾಳಜಿ ತೋರಿಸುತ್ತಿಲ್ಲ ಎಂದರು.

ಉತ್ಪಾದನಾ ವೆಚ್ಚ ಹೆಚ್ಚಾಗಿದ್ದರೂ, ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡದೆ ರೈತರನ್ನು ಸಂಕಷ್ಟಕ್ಕೀಡು ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಉತ್ತರ ಪ್ರದೇಶ ಮಾದರಿಯಲ್ಲಿ ಒಂದು ಟನ್ ಕಬ್ಬಿಗೆ 3500 ರೂ. ದರ ನಿಗಧಿ ಮಾಡಬೇಕು. ಅಲ್ಲದೆ, ಕಬ್ಬು ಬೆಳೆಗಾರರಿಗೆ ವಂಚನೆ ಆಗುವುದನ್ನು ತಪ್ಪಿಸಲು ಡಿಜಿಟಲ್ ಆ್ಯಪ್ ಮೂಲಕ ಕಬ್ಬು ಬೆಳೆದಿರುವ ಪ್ರದೇಶ ಸರ್ವೆ ನಡೆಸಿ ನೋಂದಣಿ ಮಾಡಬೇಕು. ಅಲ್ಲದೆ, ಕಬ್ಬು ಮಾರಾಟ ಮಾಡಿದ ರೈತರ ಖಾತೆಗೆ ಹಣ ಜಮೆ ಮಾಡುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಉತ್ತರ ಪ್ರದೇಶದಲ್ಲಿ ಕಬ್ಬು ಕಟಾವು ಅನುಮತಿಯನ್ನು ಮೊಬೈಲ್‌ಗೆ ಸಂದೇಶ ಕಳಿಸಲಾಗುತ್ತದೆ. ಕಬ್ಬು ಕಟಾವು ಮಾಡಿ ಸಾಗಾಣಿಕೆ ಮಾಡಿದ 14 ದಿನದೊಳಗಾಗಿ ರೈತನ ಖಾತೆಗೆ ಸರ್ಕಾರದ ವತಿಯಿಂದ ಹಣ ಡಿಜಿಟಲ್ ಪೇಮೆಂಟ್ ಮೂಲಕ ಪಾವತಿಯಾಗುತ್ತದೆ. ಇದರಿಂದ ಯಾವುದೇ ವಂಚನೆ, ವಿಳಂಬ, ಹಣಕ್ಕಾಗಿ ಅಲೆದಾಡುವುದು, ವಿಳಂಬವಾಗಿ ಕಟಾವು ಮಾಡುವುದು, ಕಾರ್ಖಾನೆಗಳಲ್ಲಿ ಕಬ್ಬು ಅರೆಯಲು ವಿಳಂಬವಾಗುವುದು ತಪ್ಪುತ್ತದೆ. ಇದರಿಂದ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆ ಇಳುವರಿ ಹೆಚ್ಚುತ್ತದೆ ಎಂದರು.

ಕಾನ್ಪುರದ ಭಾರತೀಯ ಸಕ್ಕರೆ ಸಂಸ್ಥೆ ಪ್ರತಿ ರೈತರಲ್ಲಿ ಸಕ್ಕರೆ ಇಳುವರಿ ಪರಿಶೀಲಿಸುವ ಸಂಶೋಧನೆ ಮಾಡಿದೆ. ಅದನ್ನು ಕರ್ನಾಟಕದಲ್ಲಿ ಪೈಲೆಟ್ ಯೋಜನೆಯಾಗಿ ಜಾರಿಗೆ ತರಬೇಕು. ಲಕ್ನೋದಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಕಬ್ಬು ನಾಟಿ ಮಾಡುವ ಹಾಗೂ ಅಂತರ ಬೇಸಾಯ ಮಾಡುವ ಒಂದೇ ಯಂತ್ರವನ್ನು ಕಂಡು ಹಿಡಿದಿದೆ. ಈ ಯಂತ್ರವನ್ನು ರಾಜ್ಯ ಸರ್ಕಾರ ಕೃಷಿ ಇಲಾಖೆ ಸಹಕಾರದೊಂದಿಗೆ ಸಹಾಯ ಧನದ ರೂಪದಲ್ಲಿ ರೈತ ಉತ್ಪಾದಕ ಸಂಸ್ಥೆಗಳಿಗೆ ಕೊಡಿಸಿ ಕೊಟ್ಟರೆ ಹೆಚ್ಚು ರೈತರಿಗೆ ಅನುಕೂಲವಾಗುತ್ತದೆ. ಡಿಜಿಟಲ್ ಆ್ಯಪ್ ಮೂಲಕ ಹಣ ಪಾವತಿ ವ್ಯವಸ್ಥೆ ಜಾರಿ ಮಾಡುವಾಗ ರೈತರ ಕಬ್ಬಿನ ಹಣದಲ್ಲಿ ಟನ್‌ಗೆ ಒಂದು ರೂಪಾಯಿ ಕಡಿತ ಮಾಡಿ ಎಲ್ಲಾ ರೈತ ಕುಟುಂಬಗಳಿಗೂ ಜೀವನ ಭದ್ರತಾ ಜೀವ ವಿಮಾ ಪಾಲಿಸಿ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ರಸಗೊಬ್ಬರದ ಬೆಲೆ ಏರಿಕೆಯಿಂದಾಗಿ ರೈತರಿಗೆ ರಸಗೊಬ್ಬರ ಮರೀಚಿಕೆಯಾಗಿದೆ. ರೈತರ ಉತ್ಪನ್ನಗಳಿಗೆ ಶಾಸನಬದ್ಧ ಖಾತರಿ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕಲು ಏ.29ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಚಿಂತನ–ಮಂಥನ ನಡೆಸಲಾಗುತ್ತಿದೆ ವಿಶ್ರಾಂತ ನ್ಯಾಯಮೂರ್ತಿ ನಾಗಮೋಹನದಾಸ್ ಉದ್ಘಾಟಿಸಲಿದ್ದಾರೆ ಎಂದು.

ಇದಕ್ಕೂ ಮುನ್ನ ಕಬ್ಬು ಬೆಳೆಗಾರರ ಸಭೆ ನಡೆಸಿ, ಮುಂದಿನ ಹೋರಾಟದ ಬಗ್ಗೆ ರೂಪುರೇಷೆ ಬಗ್ಗೆ ಚರ್ಚಿಸಲಾಯಿತು.

ಸುದ್ದಿಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಸಂಘದ ಮುಖಂಡರಾದ ಅತ್ತಳ್ಳಿ ದೇವರಾಜ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಕಿರಗಸೂರು ಶಂಕರ್, ಬರಡನಪುರ ನಾಗರಾಜು, ಕುರುಬೂರು ಸಿದ್ದೇಶ್, ದೇವೇಂದ್ರಕುಮಾರ, ಕೆರೆಹುಂಡಿ ರಾಜಣ್ಣ, ಡಿಪಿ ಪರಶಿವಮೂರ್ತಿ ಹಾಗೂ ಇನ್ನಿತರರು ಇದ್ದರು.

ದುರಸ್ತಿಯಾಗದ ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯ ಹಿಂಭಾಗದ ಚರಂಡಿ, ಕಾಂಪೌಂಡ್

ರಸ್ತೆಯಲ್ಲಿ ಚರಂಡಿ ಮಣ್ಣು; ಬಡಾವಣೆ ನಿವಾಸಿಗಳ ದೂರು





ಮೈಸೂರು, ಏ.26(ಆರ್‌ಕೆಬಿ)– ಮೈಸೂರಿನ ಚಾಮುಂಡಿಪುರಂ ಜೆಎಲ್‌ಬಿ ರಸ್ತೆ ನಂಜುಮಳಿಗೆ ವೃತ್ತದ ಬಳಿಯ ಶ್ರೀನಿವಾಸ ವೃತ್ತದ ಪೆಟ್ರೋಲ್ ಬಂಕ್ ಪಕ್ಕದ ರಸ್ತೆ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿದೆ. ಸನಿಹದಲ್ಲೇ ಅಂಗನವಾಡಿ ಕೇಂದ್ರವಿದ್ದು, ಮಕ್ಕಳು ಓಡಾಡುವ ಈ ರಸ್ತೆಯಲ್ಲಿ ಜೈನ ಬ್ರಾಹ್ಮಣ ಸಂಘದ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಚರಂಡಿ ಕಾಮಗಾರಿ ಸಂದರ್ಭದಲ್ಲಿ ಮಣ್ಣನ್ನು ರಸ್ತೆಯ ಮೇಲೆ ಚೆಲ್ಲಿದ್ದು, ಇದರಿಂದ ಸಾರ್ವಜನಿಕರು ಓಡಾಡಲು ತೊಂದರೆಯಾಗಿದೆ ಎಂದು ಬಡಾವಣೆ ನಿವಾಸಿಗಳು ದೂರಿದ್ದಾರೆ.

ಜೈನ ಬ್ರಾಹ್ಮಣ ವಿದ್ಯಾರ್ಥಿನಿಲಯದ ಬಳಿಯ ಚರಂಡಿ ಮತ್ತು ಕಾಂಪೌಂಡ್ ನಿರ್ಮಿಸಿಕೊಡುವ ಸಂಬಂಧ ಎರಡು ವರ್ಷಗಳ ಹಿಂದೆಯೇ ನಗರಪಾಲಿಕೆಯು ಕಾರ್ಯಾದೇಶ ನೀಡಿದ್ದರೂ, ಚರಂಡಿ ನಿರ್ಮಾಣ ಕಾಮಗಾರಿಯ ಗುತ್ತಿಗೆದಾರರು ಅಪಾಯಕರ ಸ್ಥಿತಿಯಲ್ಲಿರುವ ಹಾಸ್ಟೆಲ್‌ನ ಶ್ರೀ ಪಾರ್ಶ್ವನಾಥ ಬಸದಿಯ ಕಾಂಪೌಂಡ್ ಕೆಲಸ ಪ್ರಾರಂಭಿಸಿಲ್ಲ ಎಂದು ಜೈನ ಬ್ರಾಹ್ಮಣ ಸಮಾಜದ ಉಪಾಧ್ಯಕ್ಷ ರಾಜೇಶ್ ಆರೋಪಿಸಿದ್ದಾರೆ.

ಇತ್ತ ಹಾಸ್ಟೆಲ್ ಕಾಂಪೌಂಡ್ ಇಲ್ಲ, ಅತ್ತ ರಸ್ತೆಯ ಚರಂಡಿ ಕಾಮಗಾರಿಯೂ ನಡೆಯುತ್ತಿಲ್ಲ. ಹೀಗಾಗಿ ಈ ರಸ್ತೆಯಲ್ಲಿ ಓಡಾಡಲು ಸಾರ್ವಜನಿಕರಿಗೆ ತೊಂದರೆಯಾಗಿದೆ. ಅದರಲ್ಲೂ ಪಕ್ಕದಲ್ಲೇ ಇರುವ ಅಂಗನವಾಡಿ ಮಕ್ಕಳ ಓಡಾಟಕ್ಕೂ ತೊಂದರೆಯಾಗಿದೆ ಎಂದು ದೂರಲಾಗಿದೆ. ಕೂಡಲೇ ಚರಂಡಿ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವಂತೆ ಬಡಾವಣೆಯ ನಿವಾಸಿಗಳು ನಗರಪಾಲಿಕೆ ಅಧಿಕಾರಿಗಳಲ್ಲಿ ಒತ್ತಾಯಿಸಿದ್ದಾರೆ.

ಕಾಮಗಾರಿಗೆ ಚಾಲನೆ– ಪಾಲಿಕೆ ಸದಸ್ಯ ರಾಮ್‌ಪ್ರಸಾದ್: ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ಮಂಗಳವಾರದಿಂದ ಆರಂಭಿಸಲಾಗಿದೆ ಎಂದು ನಗರಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಮರ ಉರುಳಿ ಬಿದ್ದಿದ್ದರಿಂದ ಹಾಸ್ಟೆಲ್ ಕಾಂಪೌಂಡ್ ಜಖಂಗೊಂಡಿತ್ತು. ಮರದ ಬೇರುಗಳಿದ್ದ ಕಾರಣ ಗುತ್ತಿಗೆದಾರ ಕೆಲಸ ಮಾಡಿರಲಿಲ್ಲ. ಅದನ್ನು ತೆಗೆಸಿಕೊಟ್ಟರೆ ಕಾಮಗಾರಿ ಆರಂಭಿಸುವುದಾಗಿ ಗುತ್ತಿಗೆದಾರ ತಿಳಿಸಿದ್ದರಿಂದ ಮರದ ಬೇರುಗಳನ್ನು ತೆಗೆಸಿ, ಇದೀಗ ಚರಂಡಿ ನಿರ್ಮಾಣ ಮತ್ತು ರಸ್ತೆ ಕಾಮಗಾರಿ ಆರಂಭಿಸಲಾಗಿದೆ. ಆದಷ್ಟು ಬೇಗ ಚರಂಡಿ ಮತ್ತು ರಸ್ತೆ ನಿರ್ಮಾಣ ಪೂರ್ಣಗೊಳಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮೇ 4ರ ಹಿಂದುಳಿದ ವರ್ಗಗಳ ಸಮಾವೇಶಕ್ಕೆ ಸವಿತಾ ಸಂಘರ್ಷ ಸಮಿತಿ ಬೆಂಬಲ



ಮೈಸೂರು, ಏ.26(ಆರ್‌ಕೆಬಿ)– ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯು ಇನ್ನಿತರೆ ಸಂಘಟನೆಗಳ ಆಶ್ರಯದಲ್ಲಿ ಮೇ 4ರಂದು ಮೈಸೂರಿನ ಜೆ.ಕೆ.ಮೈದಾನದಲ್ಲಿ ಆಯೋಜಿಸಿರುವ ಹಿಂದುಳಿದ ಶೋಷಿತ ವರ್ಗಗಳ ಸಮಾವೇಶವನ್ನು ಬೆಂಬಲಿಸುವುದಾಗಿ ಮೈಸೂರಿನ ಸವಿತಾ ಸಂಘರ್ಷ ಸಮಿತಿ ತಿಳಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಹಾಗೂ ನಗರಪಾಲಿಕೆ ಮಾಜಿ ಸದಸ್ಯ ವಿ.ಮಂಜುನಾಥ್, ಇದೊಂದು ಐತಿಹಾಸಿಕ ಸಮಾವೇಶವಾಗಿದ್ದು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾಗವಹಿಸುತ್ತಿದ್ದಾರೆ. ಅವರಿಗೆ ನಮ್ಮೆಲ್ಲರ ಬೆಂಬಲವಿದೆ ಎಂದರು.

ಸ್ಥಳೀಯ ಸಂಸ್ಥೆಗಳ ಚುನಾವಣಾ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಆದೇಶ ನೀಡಿ ಐದು ತಿಂಗಳಾದರೂ ರಾಜ್ಯ ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಹೀಗಾಗಿ ಬಿಜೆಪಿ ಸರ್ಕಾರ ಹಿಂದುಳಿದ ವರ್ಗಗಳನ್ನು ರಾಜಕೀಯವಾಗಿ ನಾಶಗೊಳಿಸಲು ಹೊರಟಿದೆ. ಹೀಗಾಗಿ ಹಿಂದುಳಿದ ವರ್ಗಗಳ ಸಮಾವೇಶ ಅದನ್ನು ಖಂಡಿಸಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಮುಖಂಡರಾದ ಟಿ.ಕೆ.ರಾಜೇಶ್, ಪಿ.ಅಶೋಕ್ ಕುಮಾರ್, ಶ್ರೀನಿವಾಸ್ ಉದ್ಬೂರ್, ಸೌಭಾಗ್ಯಮ್ಮ, ಸಿ. ಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಕೆರೆಗಳ ಸಂರಕ್ಷಣೆಗೆ ಆಗ್ರಹಿಸಿ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ಹೋರಾಟ



ಮೈಸೂರು, ಏ.26(ಆರ್‌ಕೆಬಿ)– ಚುಕ್ಕಿ ನಂಜುಂಡಸ್ವಾಮಿ ನೇತೃತ್ವದ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ವತಿಯಿಂದ ನಗರದಲ್ಲಿನ ಮೂರು ಪ್ರಮುಖ ಕೆರೆಗಳ ಸಂರಕ್ಷಣೆಗಾಗಿ ಹೋರಾಟ ನಡೆಸಲಾಗುತ್ತಿದೆ ಎಂದು ಸಂಘಟನೆಯ ಮಾಧ್ಯಮ ಕಾರ್ಯದರ್ಶಿ ಮಂಜು ಕಿರಣ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ದೇವನೂರು ಕೆರೆ, ಆಲನಹಳ್ಳಿಯ ಕೆರೆ, ಟೆರೇಷಿಯನ್ ಕಾಲೇಜು ಬಳಿಯ ಕೆರೆಗಳ ಒತ್ತುವರಿಯಾಗಿದೆ. ಇವುಗಳನ್ನು ಸಂರಕ್ಷಿಸುವಂತೆ ಆಗ್ರಹಿಸಿ ಈಗಾಗಲೇ ತಹಸೀಲ್ದಾರ್ ಅವರಿಗೆ ಮನವಿ ಪತ್ರ ನೀಡಲಾಗಿದೆ. ಅವರು 15 ದಿನಗಳ ಗಡುವು ಕೇಳಿದ್ದಾರೆ. ಕೆರೆಗಳ ಒತ್ತುವರಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಭರವಸೆಯನ್ನು ಅವರು ನೀಡಿದ್ದಾರೆ ಎಂದರು.

ಕೆರೆಗಳ ಸಂರಕ್ಷಣೆ ಕುರಿತಂತೆ ನ್ಯಾಯಾಲಯಗಳ ಆದೇಶ ನಿರ್ಲಕ್ಷಿಸಲಾಗುತ್ತಿದೆ. ಅಧಿಕಾರಿಗಳು ತಪ್ಪು ಮಾಹಿತಿ ನೀಡಿ ಲೋಕಾಯುಕ್ತವನ್ನು ವಂಚಿಸುತ್ತಿದ್ದಾರೆ ಎಂದು ದೂರಿದರು.

ಮೈಸೂರಿನ ಕೆರೆಗಳ ಸಂರಕ್ಷಣೆಗಾಗಿ ಸಾಮೂಹಿಕ ನಾಯಕತ್ವದ ನಮ್ಮ ರಾಜ್ಯ ರೈತ ಸಂಘ ಕಟಿಬದ್ಧವಾಗಿದ್ದು, ಕಾನೂನಾತ್ಮಕ ಹಾಗೂ ಪ್ರತಿಭಟನೆಗಳ ಮೂಲಕ ಹೋರಾಟ ನಡೆಸಲಿದೆ ಎಂದು. ಸುದ್ದಿಗೋಷ್ಠಿಯಲ್ಲಿ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ವಿದ್ಯಾಸಾಗರ್ ಟಿ.ರಾಮೇಗೌಡ, ಮುಖಂಡರಾದ ಬೊಕ್ಕಳ್ಳಿ ನಂಜುಂಡಸ್ವಾಮಿ, ಸತೀಶ್‌ರಾವ್, ಹರತಲೆ ಕೆಂಪಣ್ಣ, ಶಿವಣ್ಣ ಇನ್ನಿತರರು ಉಪಸ್ಥಿತರಿದ್ದರು.

ಮೇ 5ರಂದು ಸಾಮೂಹಿಕ ಉಪನಯನ

ಮೈಸೂರು, ಏ.26– ಮೈಸೂರು ತಾಲೂಕಿನ ಕೆಆರ್‌ಎಸ್ ಮುಖ್ಯರಸ್ತೆಯಲ್ಲಿರುವ ಸಾದನಹಳ್ಳಿ ಸಪ್ತರ್ಷಿ ಗುರುಕುಲ ಸೇವಾಶ್ರಮದಲ್ಲಿ ಉಚಿತ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಮೇ 5ರಂದು ಏರ್ಪಡಿಸಲಾಗಿದೆ.

ಮೇ 4ರಂದು ಸಂಜೆ ಉದಕಶಾಂತಿ, ಹೋಮ, ಹವನಗಳನ್ನು ಲೋಕ ಕಲ್ಯಾಣಾರ್ಥವಾಗಿ ಆಯೋಜಿಸಲಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9481319111 ಸಂಪರ್ಕಿಸಬಹುದು ಎಂದು ಆಶ್ರಮದ ಸಂಸ್ಥಾಪಕ ಅಧ್ಯಕ್ಷರಾದ ಅಭಿನವ ರಾಮಾನುಜಮ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಲಿಕೆ ವ್ಯಾಪ್ತಿಯ ಮೂರು ವಿಧಾನಸಭಾ ಕ್ಷೇತ್ರಗಳಿಗೆ

ಸಮಾನವಾಗಿ ಎಸ್‌ಎಫ್‌ಸಿ ವಿಶೇಷ ಅನುದಾನ ಹಂಚಿಕೆಗೆ ಕ್ರಮ ವಹಿಸಿ

● ಡಿಸಿ, ಪಾಲಿಕೆ ಆಯುಕ್ತರಿಗೆ ಶಾಸಕ ತನ್ವೀರ್‌ಸೇಠ್ ಪತ್ರ ● ಅನುದಾನ ಹಂಚಿಕೆಯ ತಾರತಮ್ಯಕ್ಕೆ ಶಾಸಕರ ಬೇಸರ

ಮೈಸೂರು,ಏ.26(ಪಿಎಂ)– ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಮುಖ್ಯಮಂತ್ರಿಗಳ ವಿವೇಚನೆಯಡಿ ಬಿಡುಗಡೆಯಾದ ಒಟ್ಟು 25 ಕೋಟಿ ರೂ. ಎಸ್‌ಎಫ್‌ಸಿ ವಿಶೇಷ ಅನುದಾನದ ಹಂಚಿಕೆಯಲ್ಲಿ ಸರ್ಕಾರದ ಮಾರ್ಗ ಸೂಚಿಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಪಾಲಿಕೆ ವ್ಯಾಪ್ತಿಯ 3 ವಿಧಾನಸಭಾ ಕ್ಷೇತ್ರಗಳಿಗೆ ತಲಾ 8.33 ಕೋಟಿ ರೂ.ನಂತೆ ಸಮಾನವಾಗಿ ಈ ಅನುದಾನ ಹಂಚಲು ಸಂಬಂಧಿಸಿದವರಿಗೆ ಸೂಚಿಸಬೇಕೆಂದು ಜಿಲ್ಲಾಧಿಕಾರಿಗಳು ಮತ್ತು ಪಾಲಿಕೆ ಆಯುಕ್ತರಿಗೆ ಎನ್‌ಆರ್ ಕ್ಷೇತ್ರದ ಶಾಸಕ ತನ್ವೀರ್‌ಸೇಠ್ ಪತ್ರ ಮುಖೇನ ಕೋರಿದ್ದಾರೆ.

ಸರ್ಕಾರದ ಆದೇಶದಂತೆ ರಾಜ್ಯದ ವಿವಿಧ ಕ್ಷೇತ್ರಗಳಿಗೆ ಮುಖ್ಯಮಂತ್ರಿಗಳ ವಿವೇಚನೆಯ ಅನುಸಾರ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ ಆದರೆ ಪಾಲಿಕೆ ವ್ಯಾಪ್ತಿಯಲ್ಲಿ ಈ ಅನುದಾನ ಸಂಬಂಧ ಮಾರ್ಗ ಸೂಚಿಗಳ ಉಲ್ಲಂಘನೆ ಆಗಿದೆ.



ಪಾಲಿಕೆ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಗೊಳಗಾದ ರಸ್ತೆಗಳ ಅಭಿವೃದ್ಧಿಗಾಗಿ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ (2021ರ ಡಿ.27) ಅನ್ವಯ ಮಂಜೂರಾಗಿರುವ 25 ಕೋಟಿ ರೂ. ಎಸ್‌ಎಫ್‌ಸಿ ವಿಶೇಷ ಅನುದಾನದ ಕ್ರಿಯಾ ಯೋಜನೆಗೆ ಒಟ್ಟು 2227.00 ಲಕ್ಷರೂಗಳ (22.27 ಕೋಟಿ ರೂ.) ಕಾಮಗಾರಿಗಳ ಸಂಬಂಧ ಕೆಲ ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಲಾಗಿದೆ.

ಸದರಿ ಕಾಮಗಾರಿಗಳ ಪೈಕಿ ಒಟ್ಟು 300 ಲಕ್ಷ ರೂ. (3 ಕೋಟಿ ರೂ.) ವೆಚ್ಚದ ಕಾಮಗಾರಿಗಳನ್ನು ನನ್ನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಮಂಜೂರು ಮಾಡಲಾಗಿದೆ. ಆದರೆ ಪಾಲಿಕೆಯ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಹಂಚಿಕೆಯಲ್ಲಿ ಸಮಾನತೆಯ ಸೂತ್ರ ಅನ್ವಯಿಸಿಲ್ಲ. ಅಲ್ಲದೆ, ಸಂಬಂಧಿಸಿದ ಅಧಿಕೃತ ಜ್ಞಾಪನದಲ್ಲಿ ವಿಧಿಸಿರುವ 6ನೇ ಷರತ್ತಿನ ಸ್ಪಷ್ಟ ಉಲ್ಲಂಘನೆಯಾಗಿದೆ.

ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಆದೇಶ ಅನುದಾನ ಮಂಜೂರಾತಿ ಮತ್ತು ಸದರಿ ಕಾಮಗಾರಿಗಳ ಕುರಿತು ಈವರೆಗೆ ಸಂಬಂಧಿಸಿದ ಅಧಿಕಾರಿಗಳು ನನಗೆ ಅಧಿಕೃತ ಮಾಹಿತಿ ರವಾನಿಸಿಲ್ಲ ಹಾಗಾಗಿ ಈಗಾಗಲೇ ಅನುಮೋದಿಸಿರುವ ಕಾಮಗಾರಿಗಳಿಗೆ ತಾತ್ಕಾಲಿಕ ತಡೆ ಆದೇಶ ಹೊರಡಿಸಿ, ಒಟ್ಟು 25 ಕೋಟಿ ರೂ.ಗಳನ್ನು ಸಮಾನವಾಗಿ ಮೂರು ಕ್ಷೇತ್ರಗಳಿಗೂ ಹಂಚಿಕೆ ಮಾಡಲು ಕ್ರಮ ವಹಿಸುವಂತೆ ಪತ್ರದಲ್ಲಿ ಅವರು ಕೋರಿದ್ದಾರೆ.

ಜೂ.1ರಿಂದ ಆಟೋಗಳಿಗೆ ಪ್ರದರ್ಶನ ಫಲಕ ಕಡ್ಡಾಯ

ತಪ್ಪಿದರೆ ತಪಾಸಣೆ ವೇಳೆ 2,000 ರೂ. ದಂಡ

ಮೈಸೂರು, ಏ. 26(ಆರ್‌ಕೆ)– ಕ್ಯೂಆರ್ ಕೋಡ್ ಆಧಾರಿತ ಪ್ರದರ್ಶನ ಫಲಕ (ಡಿಸ್ಪ್ಲೇ ಕಾರ್ಡ್) ಇಲ್ಲದೇ ಆಟೋ ಚಾಲನೆ ಮಾಡಿದರೆ ಐಎಂವಿ ಕಾಯ್ದೆಯಡಿ ಪ್ರಕರಣ ದಾಖಲಿಸಿ 2,000 ರೂ. ದಂಡ ವಿಧಿಸಲಾಗುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಎಚ್ಚರಿಕೆ ನೀಡಿದ್ದಾರೆ.

ಜೂನ್ 1ರಿಂದ ಈ ಕ್ರಮ ಜಾರಿಗೆ ಬರಲಿದ್ದು, ಮೇ 31ರೊಳಗೆ ಡಿಸ್ಪ್ಲೇ ಕಾರ್ಡ್ ಪಡೆದು ಆಟೋಗಳಲ್ಲಿ ಪ್ರದರ್ಶಿಸಬೇಕು. ಚಾಲನಾ ಪರವಾನಗಿ (DL), ಆಟೋ ನೋಂದಣಿ ಪ್ರಮಾಣಪತ್ರ (RC), ಫಿಟ್‌ನೆಸ್ ಸರ್ಟಿಫಿಕೇಟ್ (FC), ಆಧಾರ್ ಕಾರ್ಡ್ ಮತ್ತು ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳನ್ನು ತಮ್ಮ ವ್ಯಾಪ್ತಿಯ ಸಂಚಾರ ಪೊಲೀಸ್ ಠಾಣೆಗೆ ಸಲ್ಲಿಸಿ ಕ್ಯೂಆರ್ ಕೋಡ್ ಆಧಾರಿತ ಆಟೋ ಡಿಸ್ಪ್ಲೇ ಕಾರ್ಡ್‌ಗಳನ್ನು ಪಡೆಯುವಂತೆ ಅವರು ತಿಳಿಸಿದ್ದಾರೆ.

ದೇವರಾಜ, ಲಷ್ಕರ್ ಠಾಣೆ ವ್ಯಾಪ್ತಿಯ ಆಟೋ ಚಾಲಕರು ದೇವರಾಜ ಸಂಚಾರ ಠಾಣೆಯಲ್ಲಿ ಕೆಆರ್, ಲಕ್ಷ್ಮೀಪುರಂ, ವಿದ್ಯಾರಣ್ಯ, ಕುವೆಂಪುನಗರ, ಸರಸ್ವತಿಪುರಂ ಮತ್ತು ಅಶೋಕಪುರಂ ಠಾಣೆ ವ್ಯಾಪ್ತಿಯವರು ಕೆಆರ್ ಸಂಚಾರ ಠಾಣೆಯಲ್ಲಿ, ಮಂಡಿ, ಎನ್‌ಆರ್ ಠಾಣಾ ವ್ಯಾಪ್ತಿಯ ಚಾಲಕರು ಎನ್‌ಆರ್ ಸಂಚಾರ ಠಾಣೆಯಲ್ಲಿ, ನಜರ್‌ಬಾದ್, ಉದಯಗಿರಿ, ಆಲನಹಳ್ಳಿ ಹಾಗೂ ಕೆಆರ್ (ಭಾಗಶಃ) ಠಾಣಾ ವ್ಯಾಪ್ತಿಯಲ್ಲಿರುವವರು ಸಿದ್ದಾರ್ಥನಗರ ಸಂಚಾರ ಠಾಣೆಯಲ್ಲಿ ಹಾಗೂ ವಿವಿ ಪುರಂ, ಮೇಟಗಳ್ಳಿ, ಹೆಬ್ಬಾಳು, ವಿಜಯನಗರ ಮತ್ತು ಜಯಲಕ್ಷ್ಮೀಪುರಂ ಠಾಣಾ ವ್ಯಾಪ್ತಿಯ ಆಟೋ ಚಾಲಕರು ವಿವಿ ಪುರಂ ಸಂಚಾರ ಠಾಣೆಯಲ್ಲಿ ತಮ್ಮ ಆಟೋ ಡಿಸ್ಪ್ಲೇ ಕಾರ್ಡ್‌ಗಳನ್ನು ಪಡೆದುಕೊಳ್ಳಬೇಕೆಂದು ಸೂಚಿಸಲಾಗಿದೆ.



ಕಾರ್ಡ್‌ನಲ್ಲಿ ಏನಿದೆ?: ಕ್ಯೂಆರ್ ಕೋಡ್ ಹೊಂದಿರುವ ಆಟೋ ಡಿಸ್ಪ್ಲೇ ಕಾರ್ಡ್‌ನಲ್ಲಿ ಆಟೋ ನೋಂದಣಿ ಸಂಖ್ಯೆ, ಪೊಲೀಸ್ ಕ್ರಮ ಸಂಖ್ಯೆ, ವಾಹನದ ವಿಧ, ಚಾಲಕರ ಡಿಎಲ್ ಸಂಖ್ಯೆ, ಬ್ಯಾಡ್ಜ್ ನಂಬರ್, ಚಾಲಕರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ರಕ್ತದ ಗುಂಪು, ಆಧಾರ್ ಸಂಖ್ಯೆ, ಆರ್‌ಟಿಓ ಸಂಖ್ಯೆ ಹಾಗೂ ಚಾಲಕರ ಭಾವಚಿತ್ರವಿರುತ್ತದೆ. ಅದರಲ್ಲಿರುವ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿದರೆ ಸಾಕು, ಆಟೋ ಮತ್ತು ಚಾಲಕರ ಸಂಪೂರ್ಣ ಮಾಹಿತಿ ಸಿಗುತ್ತದೆ.

ಪ್ರಯಾಣಿಕರಿಗಾಗುವ ಅನುಕೂಲ: ಸಾರ್ವಜನಿಕರು, ಹಿರಿಯ ನಾಗರಿಕರು, ಮಹಿಳೆಯರು ಹಾಗೂ ಮಕ್ಕಳೊಂದಿಗೆ ಚಾಲಕರು ಅನುಚಿತವಾಗಿ ವರ್ತಿಸಿದರೆ, ನಿಗದಿಗಿಂತ ಹೆಚ್ಚು ದರಕ್ಕೆ ಒತ್ತಾಯಿಸಿದರೆ, ಕರೆದಲ್ಲಿಗೆ ಬಾಡಿಗೆಗೆ ಬರಲು ನಿರಾಕರಿಸಿದರೆ, ದಾಖಲೆಗಳಿಲ್ಲದೆ ಅನಧಿಕೃವಾಗಿ ಆಟೋ ಚಾಲನೆ ಮಾಡುತ್ತಿದ್ದರೆ ಈ ಡಿಸ್ಪ್ಲೇ ಕಾರ್ಡ್ ಮಾಹಿತಿ ಆಧಾರದಲ್ಲಿ ಪೊಲೀಸರಿಗೆ ದೂರು ನೀಡಬಹುದಾಗಿದೆ. ಅಲ್ಲದೆ ಕಾರ್ಡ್‌ನಲ್ಲಿ ಸಂಪೂರ್ಣ ಮಾಹಿತಿ ಇದೆ ಎಂಬ ಅರಿವಿರುವುದರಿಂದ ಆಟೋ ಚಾಲಕರು ಪ್ರಯಾಣಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸಬೇಕೆಂಬ ಅರಿವಿರುವುದರಿಂದ ಸಾರ್ವಜನಿಕರು ನಿರಾತಂಕವಾಗಿ ಪ್ರಯಾಣಿಸಬಹುದು.

ಆಟೋ ಚಾಲಕರಿಗೆ: ತಮ್ಮ ಹಾಗೂ ಆಟೋರಿಕ್ಷಾಗೆ ಸಂಬಂಧಿಸಿದ ಸಂಪೂರ್ಣ ದಾಖಲಾತಿ ನೀಡಿ ಆಟೋ ಡಿಸ್ಪ್ಲೇ ಕಾರ್ಡ್ ಪಡೆದಿರುವುದರಿಂದ ಯಾವ ಅಡೆತಡೆಗಳಿಲ್ಲದೆ ನಿರಾತಂಕವಾಗಿ ಆಟೋ ಚಾಲನೆ ಮಾಡಬಹುದಾಗಿದ್ದು, ಪೊಲೀಸರ ಕಿರಿಕಿರಿ ತಪ್ಪುತ್ತದೆ. ಯಾವುದೇ ದಾಖಲಾತಿಗಳಿಲ್ಲದೆ, ಅನಧಿಕೃತ ವ್ಯಕ್ತಿಗಳು ಆಟೋ ಓಡಿಸುವುದು ತಪ್ಪಿದಂತಾಗುವುದು. ಕಾರಣ, ಸ್ಪರ್ಧೆ ಕಡಿಮೆಯಾಗಿ, ದಿನದ ವರಮಾನವೂ ಹೆಚ್ಚಾಗಲಿದೆ. ಪದೇ ಪದೆ ಪೊಲೀಸರು ತಡೆಯೊಡ್ಡಿ ಪರಿಶೀಲಿಸುವ ಪ್ರಮೇಯ ಇರುವುದಿಲ್ಲ. ಹಾಗೂ ಪೊಲೀಸ್ ಠಾಣೆಗೆ ಅಲೆದಾಡದೇ ಬೆಳಿಗ್ಗೆಯಿಂದ ರಾತ್ರಿವರೆಗೆ ಆಟೋ ಚಾಲನೆ ಮಾಡಿ ಅಧಿಕ ಸಂಪಾದನೆ ಮಾಡಬಹುದಾಗಿದೆ.

ಮೈಸೂರು ಮಿತ್ರ

ಹನಗೋಡಲ್ಲಿ ಆನೆಗಳ ದಾಂಧಲೆ: ರಾತ್ರಿಯಿಡಿ ಗ್ರಾಮದಲ್ಲಿ ಬೀಡುಬಿಟ್ಟಿದ್ದವು

ಮಧ್ಯಾಹ್ನ ಗ್ರಾಮಸ್ಥರ ಕೂಗಾಟ-ಚೀರಾಟಕ್ಕೆ ಬೆಚ್ಚಿ ಕಾಡಿನತ್ತ ಪರಾರಿಯಾಗುವಾಗ ವೃದ್ಧೆ ಮೇಲೆ ದಾಳಿ: ಗಾಯಾಳುವಿಗೆ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ

● ಆನೆ ದಾಳಿಯಿಂದ ಹಸು ಸಾವು ● ನಾಗರಹೊಳೆ ಸುತ್ತಮುತ್ತ ಕಾಡಾನೆಗಳ ಹಾವಳಿ





ಗಾಯಗೊಂಡ ವೃದ್ಧೆ

ಹನಗೋಡು, ಏ.26(ಮಹೇಶ್)– ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಿಂದ ಹೊರಬಿದ್ದ ಎರಡು ಕಾಡಾನೆಗಳು ರಾತ್ರಿಯಿಡೀ ಹನಗೋಡು ಗ್ರಾಮದಲ್ಲಿ ದಾಂಧಲೆ ನಡೆಸಿ, ಬೆಳಗಾಗುತ್ತಿದ್ದಂತೆ ಜನರ ಕೂಗಾಟಕ್ಕೆ ಕಾಡಿನತ್ತ ಪೇರಿ ಕೀಳುವಾಗ ದನಗಾಹಿ ಮಹಿಳೆಯೊಬ್ಬರ ಮೇಲೆ ದಾಳಿ ನಡೆಸಿದ್ದು, ಅವರು ತೀವ್ರವಾಗಿ ಗಾಯಗೊಂಡಿರುವ ಘಟನೆ ಮಂಗಳವಾರ ನಡೆದಿದೆ.

ಹರಳಹಳ್ಳಿ ಗ್ರಾಮದ ನಿವಾಸಿ ಪುಟ್ಟಲಕ್ಷ್ಮಮ್ಮ(55) ಆನೆ ದಾಳಿಯಿಂದ ಗಾಯಗೊಂಡಿದ್ದು, ಇದೀಗ ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಾಮಾನ್ಯವಾಗಿ ರಾತ್ರಿ ವೇಳೆ ಆನೆಗಳನ್ನು ಕಾಡಿಗಟ್ಟಲಾಗುತ್ತದೆ. ಆದರೆ ರಾತ್ರಿಯಿಡೀ ಹನಗೋಡು ಗ್ರಾಮದಲ್ಲಿ ಅಡ್ಡಾಡಿದ್ದ ಆನೆಗಳು ಬೆಳಗಾಗುತ್ತಿದ್ದಂತೆ ಹರಳಹಳ್ಳಿ ಬಳಿಯ ಹದ್ದಾಳು ಕೆರೆ ಬಳಿ ಬೀಡು ಬಿಟ್ಟಿದ್ದವು. ವಿಷಯ ತಿಳಿದು ಡಿಆರ್‌ಎಫ್‌ಓ ದ್ವಾರಕನಾಥ್ ನೇತೃತ್ವದಲ್ಲಿ ಅರಣ್ಯ ಸಿಬ್ಬಂದಿ ಧಾವಿಸಿ, ಕಾವಲು ಕಾಯುತ್ತಿದ್ದರು. ಮಂಗಳವಾರ ಮಧ್ಯಾಹ್ನವಾದರೂ ಈ ಆನೆಗಳು ಕದಲಿಲ್ಲ. ಆನೆಗಳನ್ನು ನೋಡಲು ಬಂದಿದ್ದ ಜನರ ಕೂಗಾಟದಿಂದ ಬೆದರಿದ ಆನೆಗಳು ದಿಕ್ಕಾಪಾಲಾಗಿ ಓಡಲಾರಂಭಿಸಿದವು. ಈ ವೇಳೆ ಕೆರೆಯ ದಡದಲ್ಲಿ ದನಗಳನ್ನು ಮೇಯಿಸುತ್ತಿದ್ದ ವೃದ್ಧೆ ಪುಟ್ಟಲಕ್ಷ್ಮಮ್ಮ ಕಾಡಾನೆಯೊಂದು ತನ್ನತ್ತ ಬರುವುದನ್ನು ಕಂಡು ಹೆದರಿ ಕೂಗಿಕೊಂಡು ಓಡಲು ಮುಂದಾದರೂ, ಆನೆ ಆಕೆಯ ಮೇಲೆ ಹರಿಹಾಯ್ದು, ಮುಂದೆ ಸಾಗಿತು. ಇದರಿಂದ ಕೆಳಗೆ ಬಿದ್ದ ಆಕೆಯ ಬಲಗಾಲಿನ ಮೂಳೆ, ಕೈ ಮೂಳೆ ಮುರಿದಿದೆ. ತಕ್ಷಣ ಆಕೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಜೀಪಿನಲ್ಲಿ ಹುಣಸೂರಿನ ಸಾರ್ವಜನಿಕ ಆಸ್ಪತ್ರೆಗೆ ಕರೆತಂದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಸು ಸಾವು: ಇದೇ ವೇಳೆ ಕೆರೆ ಪಕ್ಕದಲ್ಲೇ ಮೇಯುತ್ತಿದ್ದ ಹರಳಹಳ್ಳಿ ಗ್ರಾಮದ ಕಾಳೇಗೌಡರಿಗೆ ಸೇರಿದ ಇಲಾತಿ ಹಸುವಿನ ಮೇಲೂ ಆನೆ ದಾಳಿ ನಡೆಸಿದ್ದು, ಹಸು ಸ್ಥಳದಲ್ಲೇ ಸಾವನ್ನಪ್ಪಿದೆ. ಕಳೆದೆರಡು ದಿನಗಳಿಂದ ಈ ಭಾಗದಲ್ಲಿ ಆನೆಗಳ ಹಾವಳಿ ಹೆಚ್ಚಾಗಿದ್ದು, ಮೇವನ್ನು ಅರಸಿ ಊರಿಗೆ ಬಂದು ದಾಂಧಲೆ ನಡೆಸಿ, ಸುತ್ತಮುತ್ತಲ ಗ್ರಾಮಸ್ಥರಲ್ಲಿ ಭಯದ ವಾತಾವರಣ ನಿರ್ಮಿಸಿವೆ. ಲಕ್ಷ್ಮಣತೀರ್ಥ ನದಿ ತೀರದಲ್ಲಿ ಬೀಡು ಬಿಟ್ಟಿದ್ದ ಆನೆಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಕಾಡಿಗೆ ಅಟ್ಟಲು ಪ್ರಯತ್ನಿಸಿದರಾದರೂ, ಆನೆಗಳನ್ನು ನೋಡಲು ಆಗಮಿಸಿದ್ದ ಅಕ್ಕಪಕ್ಕದ ಗ್ರಾಮಸ್ಥರ ಕೂಗಾಟ-ಚೀರಾಟದಿಂದ ಆನೆಗಳು ಘಾಸಿಗೊಂಡಿದ್ದರಿಂದ ಕಾಡಿಗೆ ಅಟ್ಟಲು ಸಾಧ್ಯವಾಗಿಲ್ಲ.

ಹೀಗಾಗಿ ಆನೆಗಳನ್ನು ರಾತ್ರಿ ಬಳಿಕ ಕಾಡಿಗೆ ಅಟ್ಟಲಾಗುವುದು. ಆನೆಗಳು ಇಲಾಖೆ ಹಾಕಿರುವ ರೈಲ್ವೆ ಬ್ಯಾರಿಕೇಡ್‌ಗಳನ್ನು ದಾಟಿ ಕಾಡಿನಿಂದ ನಾಡಿಗೆ ಬರುತ್ತಿವೆ. ಹೀಗಾಗಿ ಆನೆಗಳು ಮತ್ತೆ ಬಾರದಂತೆ ಕ್ರಮ ವಹಿಸಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಈ ಭಾಗದ ಗುರುಪುರ, ಹಳೇ ಪೆಂಜನಹಳ್ಳಿ, ಹೊಸ ಪೆಂಜನಹಳ್ಳಿ ಭಾಗದಲ್ಲಿ ಆನೆಗಳು ಆಗಿಂದಾಗ್ಗೆ ದಾಂಧಲೆ ನಡೆಸುತ್ತಿದ್ದು, ಬಾಳೆ, ತೆಂಗು ಸೇರಿದಂತೆ ಅಪಾರ ಬೆಳೆ ಹಾನಿಯಾಗಿದೆ. ಇದರಿಂದ ರೈತರಿಗೆ ಲಕ್ಷಾಂತರ ರೂ. ನಷ್ಟವಾಗಿದೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡು, ಆನೆ ಹಾವಳಿ ತಪ್ಪಿಸಬೇಕೆಂದು ಈ ಭಾಗದ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಉಕ್ಕಲಗೆರೆ ಗ್ರಾಪಂಗೆ ಮಂಜುಳ ಉಪಾಧ್ಯಕ್ಷೆ



ತಿ.ನರಸೀಪುರ, ಏ.26(ಎಸ್‌ಕೆ)– ತಾಲೂಕಿನ ಉಕ್ಕಲಗೆರೆ ಗ್ರಾಪಂ ನೂತನ ಉಪಾಧ್ಯಕ್ಷೆಯಾಗಿ ಮಂಜುಳ ನಾಗೇಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷೆ ಲತಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಿಗದಿಯಾಗಿತ್ತು. ಉಪಾಧ್ಯಕ್ಷ ಸ್ಥಾನಕ್ಕೆ ಮಂಜುಳ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸಿದ ಕಾರಣ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಸಿಡಿಪಿಓ ಬಿ.ಎನ್.ಬಸವರಾಜು ಅವಿರೋಧ ಆಯ್ಕೆಯನ್ನು ಘೋಷಿಸಿದರು. ಸಹಾಯಕ ಚುನಾವಣಾಧಿಕಾರಿಯಾಗಿ ಶೋಭ ಕಾರ್ಯ ನಿರ್ವಹಿಸಿದರು. ಗ್ರಾಪಂನ ಒಟ್ಟು 14 ಮಂದಿ ಸದಸ್ಯರ ಪೈಕಿ ನಾಲ್ವರು ಗೈರು ಹಾಜರಾಗಿದ್ದರು.

ಕಾಂಗ್ರೆಸ್ ಹಿರಿಯ ಮುಖಂಡ ಉಕ್ಕಲಗೆರೆ ಬಸವಣ್ಣ ಮಾತನಾಡಿ, ಗ್ರಾಪಂ ಕಾಂಗ್ರೆಸ್ ವಶದಲ್ಲೇ ಮುಂದುವರೆದಿದ್ದು, ಒಪ್ಪಂದದಂತೆ ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ. ನೂತನ ಉಪಾಧ್ಯಕ್ಷರು ಅಭಿವೃದ್ಧಿಗೆ ಹಾಗೂ ಗ್ರಾಮೀಣ ಪ್ರದೇಶಗಳ ಜನರಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಿಕೊಡಲು ನಿಷ್ಠೆಯಿಂದ ದುಡಿಯಬೇಕೆಂದು ಸಲಹೆ ನೀಡಿದರು.

ಈ ವೇಳೆ ಅಧ್ಯಕ್ಷೆ ಶಿವಮ್ಮ, ಸದಸ್ಯರಾದ ಎಂ.ನಿಂಗರಾಜು, ಆರ್.ರವಿಶಂಕರ್, ಶಿವಪ್ರಸಾದ್, ಮಹದೇವಮ್ಮ, ಮಹದೇವ, ಎಸ್.ಸಿದ್ದರಾಜು, ಮಾಜಿ ಸದಸ್ಯ ಎಂ.ರಾಜು, ಮಾಜಿ ಉಪಾಧ್ಯಕ್ಷ ಸಿ.ನಂಜುಂಡಯ್ಯ, ಪಿಡಿಓ ಹೆಚ್.ಎಂ.ಕೃಷ್ಣಪ್ಪ, ಕಾರ್ಯದರ್ಶಿ ಎಂ.ಮಹೇಶ, ಆರ್.ಸಿದ್ದಯ್ಯ, ಮುಖಂಡರಾದ ಪ್ರಭುಸ್ವಾಮಿ, ಶ್ರೀಕಂಠಸ್ವಾಮಿ, ಮಲ್ಲಿಕ, ನಾಗೇಂದ್ರ, ಮಹೇಶ, ಶಿವರಾಜು, ಎಂ.ನಾಗರಾಜು, ಮಾಧು, ಸಿದ್ದರಾಜು, ನಿಂಗರಾಜು, ಮಂಜುನಾಥ್ ಹಾಗೂ ಇನ್ನಿತರರಿದ್ದರು.

ಗಾವಡಗೆರೆಯಲ್ಲಿ ಉಚಿತ ಹೃದಯ ರೋಗ ತಪಾಸಣೆ



ಗಾವಡಗೆರೆ, ಏ. 26 (ಜಿ.ವಿ.ಎಸ್)– ಹೃದಯಾಘಾತದಿಂದ ಹೆಚ್ಚು ಯುವಕರು ಸಾಯುತ್ತಿರುವುದು ಆತಂಕಕಾರಿ ಸಂಗತಿಯಾಗಿದ್ದು, ಅತಿಯಾದ ಆಸೆಯಿಂದ ಒತ್ತಡದ ಬದುಕು, ನಿರ್ದಿಷ್ಟ ಗುರಿಯಿಲ್ಲದ ಉದಾಸೀನ ಜೀವನ ಶೈಲಿ ಹಾಗೂ ಸಮರ್ಪಕ ನಿದ್ರೆ, ಆಹಾರದ ಕೊರತೆ, ಧೂಮಪಾನ, ಮದ್ಯಪಾನದಂತಹ ದುಶ್ಚಟಗಳಿಂದ ಯುವಕರು ಹೊರ ಬಂದರೆ ಮಾತ್ರ ಸ್ವಸ್ಥ ಹಾಗೂ ಸದೃಢ ಆರೋಗ್ಯ ಸಮಾಜ ಕಟ್ಟಲು ಸಾಧ್ಯವೆಂದು ಹೃದಯ ತಜ್ಞ ಡಾ.ಮುರಳಿ ಅಭಿಪ್ರಾಯಪಟ್ಟರು.

ಗಾವಡಗೆರೆ ಶ್ರೀಶಿವ ಛತ್ರಪತಿ ಮರಾಠ ಭವನದಲ್ಲಿ ನಡೆದ ಉಚಿತ ಹೃದಯ ರೋಗ ತಪಾಸಣಾ ಶಿಬಿರ ಕುರಿತು ಮಾತನಾಡಿದ ಅವರು, ವರ್ಷಕ್ಕೆ ಎರಡು ಬಾರಿ ಉಚಿತವಾಗಿ ಹೃದಯ ರೋಗ ತಪಾಸಣೆ ಮತ್ತು ಚಿಕಿತ್ಸಾ ಸಲಹಾ ಶಿಬಿರ ಆಯೋಜಿಸುವುದಾಗಿ ತಿಳಿಸಿದರು. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶಿವಪ್ರಕಾಶ್ ಶಿಬಿರ ಉದ್ಘಾಟಿಸಿ ಮಾತನಾಡಿ, ಸಾರ್ವಜನಿಕ ಆರೋಗ್ಯ ಸುಧಾರಣೆಗಾಗಿ ಸರ್ಕಾರ ಹಾಗೂ ಹಲವಾರು ಸಂಘ ಸಂಸ್ಥೆಗಳು ಶ್ರಮಿಸುತ್ತಿದ್ದು, ಜನರ ಸಹಕಾರ ಮುಖ್ಯವೆಂದರು. ಸಾರ್ವಜನಿಕರು ಇಂತಹ ಶಿಬಿರಗಳ ಸದುಪಯೋಗಪಡಿಸಿಕೊಂಡು ಆರೋಗ್ಯ ಕಾಳಜಿ ವಹಿಸುವಂತೆ ಸಲಹೆ ನೀಡಿದರು.

ಭಾರತೀಯ ವೈದ್ಯಕೀಯ ಸಂಘ ಕೃಷ್ಣರಾಜನಗರ ಅಧ್ಯಕ್ಷ ಡಾ.ಮಹೇಶ್ವರಪ್ಪ ಮತ್ತು ಡಾ.ಮಲೇಗೌಡ ಮಾತನಾಡಿದರು.

ಶಿಬಿರದಲ್ಲಿ ಡಾ.ಕಿರಣ್ ಕುಮಾರ್, ಡಾ. ವಿಜಯ್ ಕುಮಾರ್, ಡಾ.ಶ್ರೀಕಾಂತ್, ಡಾ.ಅಜೇಯ, ಡಾ.ದಿನೇಶ್ ಬಾಬು, ಡಾ.ಸುನೀಲ್, ಸಮಿತಿ ಅಧ್ಯಕ್ಷ ಹೊನ್ನಪ್ಪ ರಾವ್, ಅನ್ನಪೂರ್ಣ ಬಾಯಿ, ವೀರೇಶ್ ರಾವ್, ನಾಗರಾಜ್ ರಾವ್, ಸತ್ಯಪ್ಪ, ಜಿ.ವಿ. ಶ್ರೀನಾಥ್, ನಾರಾಯಣರಾವ್, ಪಿ.ಸತ್ಯ, ಜನಾರ್ಧನ್, ಅಂಬರೀಶ್ ಹಾಜರಿದ್ದರು.

ರಾಗಿ ಮಾರಾಟಕ್ಕೆ ಸಾಲುಗಟ್ಟಿ ನಿಂತ ರೈತರು



ಬೆಟ್ಟದಪುರ, ಏ. 26 (ಶಿವದೇವ್)– ಬೆಂಬಲ ಬೆಲೆಗೆ ರಾಗಿ ಮಾರಾಟ ಮಾಡಲು ನೋಂದಣಿ ಕಾರ್ಯ ಆರಂಭವಾಗಿದ್ದು, ಸಾವಿರಾರು ರೈತರು ಜಮಾಯಿಸಿದ್ದರಿಂದ ನೋಂದಣಿ ಮಾಡಿಸಲು ನೂಕು ನುಗ್ಗಲು ಉಂಟಾಯಿತು. ಬೆಟ್ಟದಪುರ ಪೊಲೀಸರು ಮಧ್ಯ ಪ್ರವೇಶಿಸಿ ಶಾಂತಿಯಿಂದ ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಕೆಲ ದಿನಗಳಿಂದ ಬೆಂಬಲ ಬೆಲೆಗೆ ರಾಗಿ ಖರೀದಿ ಸ್ಥಗಿತಗೊಳಿಸಲಾಗಿತ್ತು. ಇದೀಗ ರಾಗಿ ಖರೀದಿಗೆ ಚಾಲನೆ ನೀಡಿದ್ದು, ಸರ್ಕಾರ ಎಲ್ಲಾ ರೈತರ ನೋಂದಣಿಗೆ ಅವಕಾಶ ಕಲ್ಪಿಸಿರುವುದರಿಂದ ಏಕಕಾಲಕ್ಕೆ ಸಾವಿರಾರು ರೈತರು ಶಾಂತಿನಿಕೇತನಕ್ಕೆ ಆಗಮಿಸಿದ್ದರಿಂದ ನೂಕುನುಗ್ಗಲು ಉಂಟಾಯಿತು. ತಕ್ಷಣವೇ ಮಧ್ಯ ಪ್ರವೇಶಿಸಿದ ಬೆಟ್ಟದಪುರ ಪೊಲೀಸರು ರೈತರ ಮನವೊಲಿಸಿ ಸಾಲುಗಟ್ಟಿ ನಿಂತು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆ, ಸಂವಿಧಾನ ಉಳಿವಿಗೆ

ಮೇ 4ಕ್ಕೆ, ಮೈಸೂರಿನಲ್ಲಿ ಐಕ್ಯತಾ ಸಮಾವೇಶ



ನಂಜನಗೂಡು, ಏ.26(ಸುದರ್ಶನ್)– ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆಗಾಗಿ ಹಾಗೂ ಸಂವಿಧಾನ ಉಳಿವಿಗಾಗಿ ಮೇ 4ರಂದು ಮೈಸೂರಿನ ರೈಲ್ವೆ ನಿಲ್ದಾಣದ ಎದುರಿನ ಜೆ.ಕೆ.ಮೈದಾನದಲ್ಲಿ ಹಿಂದುಳಿದ ವರ್ಗಗಳ, ಶೋಷಿತ ಸಮುದಾಯಗಳ ಐಕ್ಯತಾ ಸಮಾವೇಶ ಆಯೋಜಿಸಲಾಗಿದೆ ಎಂದು ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಹಿಂದುಳಿದ ಸಮುದಾಯಗಳು ಲೋಕಸಭೆ ಮತ್ತು ವಿಧಾನಸಭೆಗೆ ಮೀಸಲಾತಿ ಇಲ್ಲದ ಕಾರಣ ರಾಜಕೀಯ ಹಿನ್ನಡೆ ಅನುಭವಿಸುತ್ತಿದೆ. ಜೊತೆಗೆ ಶೇ.33 ರಷ್ಟಿದ್ದ ಮೀಸಲಾತಿಯನ್ನು ಶೇ.27ಕ್ಕೆ ಇಳಿಸಲಾಗಿದೆ. ಪ್ರಸ್ತುತ ಜಿಪಂ ಮತ್ತು ತಾಪಂ ಚುನಾವಣೆಗಳ ಮೀಸಲಾತಿಗೆ ಸುಪ್ರಿಂಕೋರ್ಟ್ ತಡೆಯಾಜ್ಞೆ ತಂದಿದ್ದರೂ, ಸರ್ಕಾರ ವರದಿ ಸಲ್ಲಿಸದೆ ಹಿಂದುಳಿದ ಸಮುದಾಯಗಳ ಸವಲತ್ತು ಕಿತ್ತುಕೊಳ್ಳುವ ಹುನ್ನಾರ ನಡೆಸಿದೆ. ಈ ಕಾರಣಗಳಿಂದಾಗಿ ಸರ್ಕಾರಕ್ಕೆ ಹಕ್ಕೊತ್ತಾಯ ಮಾಡಲು ಐಕ್ಯತಾ ಸಮಾವೇಶ ನಡೆಸಲಾಗುತ್ತಿದ್ದು, ಎಲ್ಲಾ ಹಿಂದುಳಿದ ವರ್ಗಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದರು.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಶಿವರಾಮು ಮಾತನಾಡಿ, ಮೀಸಲಾತಿ ತಡೆ ಕಾರಣದಿಂದ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸಲಾಗಿಲ್ಲ. ಸುಪ್ರೀಂ ಕೋರ್ಟ್ ಮೀಸಲಾತಿಗೆ ತಡೆಯಾಜ್ಞೆ ನೀಡಿದ್ದರೂ ಸಹ ಸರ್ಕಾರ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಮುಂದಾಗಿಲ್ಲ. ಇದು ಸ್ಥಳೀಯ ರಾಜಕೀಯ ಶಕ್ತಿ ನಾಶಮಾಡುವ ಸಂಚು ರೂಪಿಸಲಾಗಿದೆ. ಹೀಗಾಗಿ ಎಲ್ಲಾ ಸಮುದಾಯದ ಸುಮಾರು 10 ಸಾವಿರಕ್ಕೂ ಹೆಚ್ಚಿನ ಜನರು ಸೇರಿ ಸಮಾವೇಶ ನಡೆಸಿ ಹಕ್ಕೊತ್ತಾಯದ ಮೂಲಕ ಸರ್ಕಾರವನ್ನು ಎಚ್ಚರಿಸಲಾಗುವುದು ಎಂದರು.

ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಕುಂಬಾರ ಸಂಘದ ಕಾರ್ಯದರ್ಶಿ ಲಕ್ಷ್ಮಿಕಾಂತ್, ಸಿ.ಎಂ.ಶಂಕರ್, ರಾಜು, ಯೋಗೀಶ್, ಶಿವಪ್ಪ ಕೋಟೆ, ಮಹದೇವ, ಕೃಷ್ಣ, ನಾಗರಾಜು ಇದ್ದರು.

ಬ್ರಿಟಿಷರ ಕಾಲದ ನಾಣ್ಯಗಳ ಪ್ರದರ್ಶನ



ಕೆ.ಆರ್.ನಗರ, ಏ. 26 (ಕೆಟಿಆರ್)– ಹಿಂದೂಗಳ ಆರಾಧ್ಯ ದೇವ ಶ್ರೀರಾಮನ ಪಟ್ಟಾಭಿಷೇಕ ಕಾರ್ಯಕ್ರಮದ ಜೊತೆಗೆ ಈ ದೇಶವನ್ನಾಳಿದ ಬ್ರಿಟಿಷರ ಕಾಲದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳನ್ನು ಸಾರ್ವಜನಿಕರ ವೀಕ್ಷಣೆಗೆ ಇಡಲಾಗಿತ್ತು. ಇದನ್ನು ಶಾಸಕ ಸಾ.ರಾ.ಮಹೇಶ್ ವೀಕ್ಷಿಸಿ, ಶ್ಲಾಘಿಸಿದರು.

ಪಟ್ಟಣದ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಶ್ರೀರಾಮ ಸೇವಾ ಸಮಿತಿಯಿಂದ ಏರ್ಪಡಿಸಿದ್ದ ಶ್ರೀರಾಮ ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬ್ರಿಟಿಷರ ಕಾಲದಲ್ಲಿ ಚಲಾವಣೆಯಲ್ಲಿದ್ದ ನೂರಾರು ನಾಣ್ಯಗಳನ್ನು ಸಂಗ್ರಹಿಸಿ ಪ್ರದರ್ಶಿಸಿರುವುದು, ಸಾರ್ವಜನಿಕರು ಇವುಗಳ ಬಗ್ಗೆ ಅನುಭವಗಳನ್ನು ಹಂಚಿಕೊಳ್ಳಲು ಸಹಾಯವಾಗುತ್ತದೆ ಹಾಗೂ ನಾಣ್ಯಗಳನ್ನು ಸಂಗ್ರಹಿಸಿದ ಶಿವಪ್ರಸಾದ್ ತಂಡಕ್ಕೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ನಾನು ಶ್ರೀರಾಮನ ಹಾಗೂ ನಿಮ್ಮೆಲ್ಲರ ಆಶೀರ್ವಾದದಿಂದ ಗೆದ್ದು, ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದೆ ಜನ ಸೇವೆಗಾಗಿ ಅದನ್ನು ಮುಡುಪಾಗಿಟ್ಟು ನಿಮ್ಮ ಆಶಯದಂತೆ ಯಾರಿಗೂ ಕೆಡಕು ಮತ್ತು ತೊಂದರೆ ಕೊಡದ ರೀತಿಯಲ್ಲಿ ಆಡಳಿತ ನಡೆಸಿರುವ ತೃಪ್ತಿ ನನಗಿದೆ ಎಂದರು. ಪುರಸಭಾ ಸದಸ್ಯ ಕೆ.ಎಲ್.ಜಗದೀಶ್, ಶ್ರೀರಾಮ ಸಮಿತಿ ಅಧ್ಯಕ್ಷ ವೈ.ಎ. ಉದಯ್‌ಕುಮಾರ್, ಕಾರ್ಯದರ್ಶಿ ಅನಂತ್, ವೆಂಕಟನಾರಾಯಣ್, ಆರ್.ಎಸ್. ರವಿಕುಮಾರ್, ಎನ್ ಎಲ್ ಮುರಳೀದರ್, ಎಂ.ವಿ. ಸತ್ಯನಾರಾಯಣ್, ಎಂ.ಕೆ.ಶಿವರಾಮ್, ಎ.ವಿ.ಶಿವಾನಂದ್, ಅರುಣಕುಮಾರ್, ನಟರಾಜ್, ಶಿವಶಂಕರ್, ಚೈತನ್ಯ ರಾವ್, ಮಂಜುನಾಥ್, ವಿಷ್ಣುವರ್ಧನ್ ಇತರರಿದ್ದರು.

ಊಟದ ಟೇಬಲ್, ಕುರ್ಚಿ, ಕಸದ ಬುಟ್ಟಿ ವಿತರಣೆ



ತಿ.ನರಸೀಪುರ, ಏ.26(ಎಸ್‌ಕೆ)– ಪರಿಶಿಷ್ಟ ಜಾತಿ, ವರ್ಗ ಗಳ ಅಭಿವೃದ್ಧಿ ಹಣ ದಲ್ಲಿ ಕೆಲವು ವಾರ್ಡ್ ಗಳ ಸಮುದಾಯದ ಅರ್ಹ ಫಲಾನುಭವಿಗಳಿಗೆ ಊಟದ ಟೇಬಲ್, ಕುರ್ಚಿ ಹಾಗೂ ಕಸದ ಬುಟ್ಟಿಗಳನ್ನು ವಿತರಿಸಲಾಗುತ್ತಿದೆ ಎಂದು ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.

ಪಟ್ಟಣದ ಪುರಸಭೆ ನೂತನ ಕಟ್ಟಡದಲ್ಲಿ ಪ.ಜಾತಿ/ಪ.ಪಂಗಡ ಸಮುದಾಯಗಳ ಅಭಿವೃದ್ಧಿಯ ಶೇ.24.10ರ ಅನುದಾನ 7.68 ಲಕ್ಷ ರೂ ವೆಚ್ಚದಲ್ಲಿ ಟೇಬಲ್, ಕುರ್ಚಿ ಹಾಗೂ ಕಸದ ಬುಟ್ಟಿಗಳನ್ನು ವಿತರಿಸಿ ಮಾತ ನಾಡಿದ ಅವರು, 6 ವಾರ್ಡ್‌ಗಳನ್ನು ಆಯ್ಕೆ ಮಾಡಿಕೊಂಡು ಸದಸ್ಯರ ಸಲಹೆ ಸೂಚನೆ ಪರಿಗಣಿಸಿ ಅರ್ಹ ಫಲಾನುಭವಿಗಳಿಗೆ ಸವಲತ್ತು ಹಂಚಿಕೆ ಮಾಡಲಾಗಿದೆ ಎಂದರು.

ವಾರ್ಡ್ 14ರ ಸದಸ್ಯ ಆರ್.ಅರ್ಜುನ್ ಮಾತನಾಡಿ, ಪುರಸಭೆ ಮೀಸಲು ಅಭಿವೃದ್ಧಿ ಹಣ ಪ.ಜಾತಿ/ಪ.ಪಂಗಡ ಸಮು ದಾಯದ ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಬಳಕೆಯಾಗಬೇಕು. ಗ್ರಂಥಾಲಯಗಳಿಗೆ, ಜ್ಞಾನಾರ್ಜನೆಗೆ ಆದ್ಯತೆ ಕೊಟ್ಟು ಯುವಕರ ಭವಿಷ್ಯ ರೂಪಿಸಲು ಉಪಯೋಗವಾಗಬೇಕು. ಈ ಬಗ್ಗೆ ಅಧ್ಯಕ್ಷರು ಹಾಗೂ ಮುಖ್ಯಾಧಿಕಾರಿಗಳು ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಪುರಸಭೆ ಸದಸ್ಯರಾದ ಸಿ.ಪ್ರಕಾಶ್, ಎಲ್. ಮಂಜುನಾಥ್, ಮುಖ್ಯಾಧಿಕಾರಿ ಹೆಚ್.ಆರ್. ಬಸವರಾಜು, ಮಾಜಿ ಸದಸ್ಯ ಮಲ್ಲೇಶ ನಾಯಕ, ಗ್ರಾಪಂ ಮಾಜಿ ಸದಸ್ಯ ಹೇಮಂತ್ ಕುಮಾರ್, ಸಹಾಯಕ ಆರೋಗ್ಯಾಧಿಕಾರಿ ಮಹೇಂದ್ರ ಇನ್ನಿತರರಿದ್ದರು.

ಮುಳ್ಳೂರಲ್ಲಿ ನೂತನ ಶಾಲಾ ಕಟ್ಟಡ ಉದ್ಘಾಟನೆ

ಸಂಘ ಸಂಸ್ಥೆಗಳಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿ: ಬಿಇಓ ಚಂದ್ರಕಾಂತ್



ಸರಗೂರು, ಏ.26(ನಾಗೇಶ್)– ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಪ್ರಸ್ತುತ ಸಂಘ ಸಂಸ್ಥೆಗಳು ತಮ್ಮ ಸಿಎಸ್‌ಆರ್ ನಿಧಿಯಿಂದ ಧನಸಹಾಯ ಮಾಡುತ್ತಿರುವುದು ಉತ್ತಮ ಬೆಳವಣಿಗೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಕಾಂತ್ ಅಭಿಪ್ರಾಯಪಟ್ಟರು.

ತಾಲೂಕಿನ ಮುಳ್ಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಆರ್‌ಬಿಐ ವತಿಯಿಂದ 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಪಿಡಬ್ಲ್ಯೂಡಿ ಮತ್ತು ಆರ್‌ಬಿಐ ವಿಶೇಷ ಕಾಳಜಿಯ ಪರಿಣಾಮ ಇಂದು ಉತ್ತಮ ಶಾಲಾ ಕಟ್ಟಡ ನಿರ್ಮಾಣವಾಗಿದೆ. ಅಲ್ಲದೇ ಗುಣಮಟ್ಟದ ಶೌಚಾಲಯವೂ ನಿರ್ಮಾಣವಾಗಲು ಸಾಧ್ಯವಾಗಿದೆ ಎಂದರು.

ಪ್ರಸ್ತುತ ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರ ಕೋಟ್ಯಾಂತರ ರೂ. ಅನುದಾನ ನೀಡುತ್ತಿದೆ. ಆದರೂ ಸಂಘ ಸಂಸ್ಥೆಗಳು ಸಹ ಸಿಎಸ್‌ಆರ್ ನಿಧಿ ಮೂಲಕ ಶಾಲೆಗಳ ಅಭಿವೃದ್ಧಿಗೆ ಮುಂದಾಗಿರುವುದು ಶ್ಲಾಘನೀಯ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಕ್ಷೀರಭಾಗ್ಯ, ಬಿಸಿಯೂಟ, ಸಮವಸ್ತ್ರ, ಪುಸ್ತಕ, ವಿದ್ಯಾರ್ಥಿ ವೇತನ ಸೇರಿದಂತೆ ಸಾಕಷ್ಟು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆದರೂ ಸಂಘ ಸಂಸ್ಥೆಗಳು ನೀಡುವ ಅನುದಾನಗಳು ಸದ್ಬಳಕೆಯಾಗಬೇಕಾದರೆ ಪ್ರತಿಯೊಬ್ಬರೂ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಬೇಕು ಎಂದು ಮನವಿ ಮಾಡಿದರು.

ಆರ್‌ಬಿಐ ಮುಖ್ಯಸ್ಥ ಡಾ.ಎನ್.ಕೃಷ್ಣಸ್ವಾಮಿ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮುಂದಿನ ದಿನಗಳಲ್ಲಿ ಮತ್ತಷ್ಟು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತೇವೆ ಎಂದರು.

ಈ ವೇಳೆ ಆರ್‌ಬಿಐ ಮುಖ್ಯಸ್ಥ ಡಾ.ಎನ್.ಕೃಷ್ಣಸ್ವಾಮಿ ಹಾಗೂ ಸಿಬ್ಬಂದಿಯನ್ನು ಶಾಲಾಡಳಿತದಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಆರ್‌ಬಿಐ ಮ್ಯಾನೇಜರ್ ಮುರಳಿ, ಸಹಾಯಕ ಮ್ಯಾನೇಜರ್ ಎನ್.ಎ.ರೆಡ್ಡಿ, ಎಂ.ಪಿ.ರವಿ, ಎಇಇಗಳಾದ ರಾಜಯ್ಯ, ರಾಮು, ಎಸ್‌ಡಿ ಎಂಸಿ ಅಧ್ಯಕ್ಷ ಶಿವಣ್ಣ, ಉಪಾಧ್ಯಕ್ಷೆ ದೇವಮ್ಮ, ಗ್ರಾಪಂ ಅಧ್ಯಕ್ಷ ಗೋವಿಂದಚಾರಿ, ಉಪಾಧ್ಯಕ್ಷೆ ಚಿನ್ನಮ್ಮ, ಸದಸ್ಯರಾದ ಶಶಿ, ಸೌಭಾಗ್ಯ, ರೇಖಾ, ಚಿಕ್ಕನಾಯಕ, ಪವಿತ್ರ ಶಿವರಾಜು, ಪುಟ್ಟಮ್ಮ, ಶ್ರೀನಿವಾಸ್, ನೀಲಮ್ಮ, ದೇವಮಣಿ, ಭಾಗ್ಯ, ಪುಟ್ಟಮ್ಮ, ವಿ.ಎ.ಕುಮಾರ್, ವಿಎಸ್‌ಎಸ್‌ಎನ್ ಅಧ್ಯಕ್ಷ ಚಂದ್ರಶೇಖರ್ ಆರಾಧ್ಯ, ನಾಗರಾಜು, ಲೋಕೇಶ್, ತಾಲೂಕು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಭಾಸ್ಕರ್, ಮುಖ್ಯಶಿಕ್ಷಕಿ ಜ್ಯೋತಿ, ಹೆಚ್.ಬಿ.ಶಹೀನಾ, ಗೀತಾ, ಹೆಚ್.ಕೆ.ಗೀತಾ, ನೇತ್ರಾ ಕೆ.ಎನ್.ಮಹದೇವನಾಯಕ, ರವಿಕುಮಾರ್, ಗೋಪಾಲ್, ಯೋಧ ಚನ್ನನಾಯಕ, ಗ್ರಾಮದ ಎಲ್ಲಾ ಮುಖಂಡರು, ಶಾಲಾ ಮಕ್ಕಳು ಹಾಜರಿದ್ದರು.

ಆರ್‌ಸಿಬಿ ವಿರುದ್ಧ ಆರ್‌ಆರ್‌ಗೆ ಭರ್ಜರಿ ಜಯ

ಮುಂಬೈ, ಏ.26– ಕುಲದೀಪ್ ಸೇನ್ ಮಾರಕ ಬೌಲಿಂಗ್ ದಾಳಿ ಹಾಗೂ ರಿಯಾನ್ ಪರಾಗ್ ಅವರ ಅರ್ಧಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 29ರನ್‌ಗಳ ಭರ್ಜರಿ ಜಯ ಸಾಧಿಸಿದೆ.



ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 144ರನ್ ಗಳಿಸಿತು. ತಂಡದ ಪರ ರಿಯಾನ್ ಪರಾಗ್ 31 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ 56 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ರವಿಚಂದ್ರನ್ ಅಶ್ವಿನ್ 17, ನಾಯಕ ಸಂಜು ಸ್ಯಾಮ್ಸನ್ 27, ಡೇರಿಲ್ ಮಿಚೆಲ್ 16ರನ್ ಗಳಿಸಿದರು. ಆರ್‌ಸಿಬಿ ಪರ ಮೊಹಮ್ಮದ್ ಸಿರಾಜ್, ಜೋಸ್ ಹ್ಯಾಸಲ್‌ವುಡ್, ವಾನಿಂದು ಹಸರಂಗ ತಲಾ 2, ಹರ್ಷಲ್ ಪಟೇಲ್ 1 ವಿಕೆಟ್ ಪಡೆದರು. 145 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆರ್‌ಸಿಬಿ ರಾಜಸ್ಥಾನ್ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿ 19.3 ಓವರ್ ಗಳಲ್ಲಿ 115 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ನಾಯಕ ಫಾಪ್ ಡುಪ್ಲೆಸಿಸ್ 23, ರಜತ್ ಪಾಟೀದಾರ್ 16, ಶಹಬ್ಬಾಸ್ ಅಹಮದ್ 17, ಹಸರಂಗ 18 ರನ್ ಗಳಿಸಿದರು. ಆರ್‌ಆರ್ ಪರ ಕುಲದೀಪ್ ಸೇನ್ 4, ರವಿಚಂದ್ರನ್ ಅಶ್ವಿನ್ 3, ಪ್ರಸಿದ್ಧ ಕೃಷ್ಣ 2 ವಿಕೆಟ್ ಕಬಳಿಸಿದರು. ರಿಯಾನ್ ಪರಾಗ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಏ.28ರಿಂದ ಉಚಿತ ಬೇಸಿಗೆ ಶಿಬಿರ

ಹುಣಸೂರು, ಏ.26(ಕೆಕೆ)– ಬೆಂಗಳೂರಿನ ಬಾಲಭವನ ಸೊಸೈಟಿ ಮತ್ತು ಹುಣಸೂರಿನ ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ 5 ರಿಂದ 16 ವರ್ಷ ಒಳಪಟ್ಟ ಮಕ್ಕಳಿಗೆ ಏ.28 ರಿಂದ ಮೇ 6 ವರೆಗೆ ಉಚಿತ ಬೇಸಿಗೆ ಶಿಬಿರವನ್ನು ಹುಣಸೂರು ನಗರದ ಜ್ಞಾನ ಚಿಗುರು ಸಂಪನ್ಮೂಲ ಕೇಂದ್ರ ಸಂಸ್ಥೆಯಲ್ಲಿ ಹಮ್ಮಿಕೊಂಡಿದೆ. ಸರ್ಕಾರಿ ಶಾಲೆ ಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗುತ್ತಿದ್ದು, 50 ಮಕ್ಕಳಿಗೆ ಅವಕಾಶವಿರುತ್ತದೆ. ಶಿಬಿರದಲ್ಲಿ ಚಿತ್ರಕಲೆ, ಏಕಪಾತ್ರ ಅಭಿನಯ, ಆರೋಗ್ಯದ ಅರಿವು, ಸಮೂಹ ನೃತ್ಯ, ಚಿತ್ರಕಲೆ, ಗೊಂಬೆ ತಯಾರಿಕೆ, ಸ್ಪೋಕನ್ ಇಂಗ್ಲೀಷ್, ಕ್ರೀಡೆ ತರಬೇತಿ ನೀಡಲಾಗುವುದು.

ಆಸಕ್ತ ಮಕ್ಕಳು ತಮ್ಮ ಹೆಸರನ್ನು ಹಳೇ ಬಸ್ ನಿಲ್ದಾಣ ಎದುರಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ದೂ: 08222 252254 ಸಂಪರ್ಕಿಸಬಹುದು.

ಕೆಂಪೇಗೌಡ ನಿಧನ



ಪಿರಿಯಾಪಟ್ಟಣ, ಏ. 26– ಪಟ್ಟಣದ ಪ್ರವಾಸಿ ಮಂದಿರದ ಹಿಂಭಾಗದಲ್ಲಿ ವಾಸವಾಗಿದ್ದ ಕೆಂಪೇಗೌಡ (80) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಹುಣಸೂರು ತಾಲೂಕು ಹನಗೋಡು ಹೋಬಳಿ ಕಿರಂಗೂರಿನ ಅವರ ಜಮೀನಿನಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

PUBLIC NOTICE

Notice is hereby given that SRI.SANDESH C.V. GOWDA, son of Sri.C.Venkatappa Gowda, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my Office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002, within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Site No.HIG-47, situated at Vijayanagar, 3rd Stage, E Block, Devaraja Mohalla, Mysore, site measuring East to West – 18 Meters and North to South – 12 Meters, totally measuring 216 Square Meters and bounded on East– HIG-26, West – Road, North – HIG-46 and South – HIG-48.

Sd/- Dhirendra Kumar R. Mehta
Advocate
KEY-ANS LAW SOLUTIONS
Date:26/04/2022
Place: Mysore

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೆ|| ಆರ್.ಕೆ.ಬ್ರದರ್ಸ್ ಇನ್‌ಫ್ರಾಪ್ರೊಪ್ ಪ್ರೊವೆಂಚರ್ಸ್ ಪ್ರೈ.ಲಿ., ಮೈಸೂರು ಇದರ ನಿರ್ದೇಶಕರಾದ ಶ್ರೀ ಪಿ.ಕೆ.ಶಿವರಾವ್ ರವರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಅದರ ಮಾಲೀಕರಾದ ಲೇಟ್ ತಮ್ಮಯ್ಯ ರವರ ಮಗನಾದ ಕೆ.ಟಿ.ಪ್ರಭಾಕರ್‌ರವರಿಂದ ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳನ್ನು ಅದರ ಮಾಲೀಕರಿಂದ ಕ್ರಯಕ್ಕೆ ತೆಗೆದುಕೊಳ್ಳಲು ಯಾರಿಂದಲಾದರೂ ತಕರಾರು ಇದ್ದಲ್ಲಿ ದಾಖಲೆಗಳ ಸಮೇತ ಈ ಪ್ರಕಟಣೆಯ 07 ದಿನದೊಳಗೆ ನಮ್ಮನ್ನು ಸಂಪರ್ಕಿಸತಕ್ಕದ್ದು, ಇಲ್ಲದಿದ್ದರೆ ಷೆಡ್ಯೂಲ್ ಸ್ವತ್ತುಗಳನ್ನು ನಮ್ಮ ಕಕ್ಷಿದಾರರು ಯಾವುದೇ ತಂಟೆ ತಕರಾರು ಇರುವುದಿಲ್ಲವೆಂದು ತಿಳಿದು ಖರೀದಿ ಮಾಡುತ್ತಾರೆಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತುಗಳ ವಿವರ

1) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕಡಕೊಳ ಗ್ರಾಮದಲ್ಲಿರುವ ಸರ್ವೆ ನಂ.208/2 ರಲ್ಲಿರುವ 1 ಎಕರೆ 22 ಗುಂಟೆ ಜಮೀನಿಗೆ ಚಕ್ಕುಬಂದಿ; ಪೂರ್ವಕ್ಕೆ: ರಸ್ತೆ ಹಾಗೂ ಸರ್ಕಾರಿ ಜಮೀನು ಸರ್ವೆ ನಂ.209, ಪಶ್ಚಿಮಕ್ಕೆ: ಟಿ.ಪುಟ್ಟಸ್ವಾಮಿ ಬಿನ್ ಲೇಟ್ ತಮ್ಮಯ್ಯರವರ ಜಮೀನು, ಉತ್ತರಕ್ಕೆ: ಸರ್ಕಾರಿ ಹಳ್ಳ (ಎಣ್ಣೆ ಹೊಳೆ) ಹಾಗೂ ದಕ್ಷಿಣಕ್ಕೆ: ಸರ್ವೆ ನಂ.190/4 ರಲ್ಲಿರುವ ಒಂದನೇ ಪಾರ್ಟಿಗಳಿಗೆ ಸೇರಿದ ಸ್ವತ್ತು. 2) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕಡಕೊಳ ಗ್ರಾಮದಲ್ಲಿರುವ ಸರ್ವೆ ನಂ.190/4 ರಲ್ಲಿರುವ 1 ಎಕರೆ 18 ಗುಂಟೆ ಜಮೀನಿಗೆ ಚಕ್ಕುಬಂದಿ; ಪೂರ್ವಕ್ಕೆ: ಸರ್ವೆ ನಂ.209 ರ ಜಮೀನು (ರಸ್ತೆ), ಪಶ್ಚಿಮಕ್ಕೆ: ಬ್ಲಾಕ್ ನಂ.2 ರ ಟಿ.ಪುಟ್ಟಸ್ವಾಮಿ ರವರ ಜಮೀನು, ಉತ್ತರಕ್ಕೆ : ಲಾ.ಸ.ನಂ.208 ರ ಜಮೀನು ಹಾಗೂ ದಕ್ಷಿಣಕ್ಕೆ: ಬ್ಲಾಕ್ ನಂ.2 ರ ಟಿ.ಪುಟ್ಟಸ್ವಾಮಿ ರವರ ಜಮೀನು.

Sd/- Yogeesh, B.Sc., LL.B.,
Advocate, Enrl No. KAR2513/2001
No.2858/1, 2nd Main, 2nd Cross,
Jayanagar, Mysuru-570014,
mob.: 9886310067
ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆಯ ಮುಖಾಂತರ ಸೂಚಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ ಸುರೇಶ್ ಆರ್ ಬಿನ್ ಲೇಟ್. ಪಿ. ರಾಮಪ್ಪ, ವಾಸ, # 629, 7ನೇ ಕ್ರಾಸ್, ಅನಿಕೇತನ ರಸ್ತೆ, ಪಿ&ಟಿ ಬ್ಲಾಕ್, ಕುವೆಂಪುನಗರ, ಮೈಸೂರು ಇವರ ಇರಾದೆಯ ಮೇರೆಗೆ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ:–

ಕೆಳಕಂಡ ಷೆಡ್ಯೂಲ್ ಸ್ವತ್ತು ನಮ್ಮ ತಂದೆ ಪಿ ರಾಮಪ್ಪರವರ ಹೆಸರಿಗೆ 1982 ರಲ್ಲಿ ಸಿಐಟಿಬಿ, ಮೈಸೂರು ರವರಿಂದ ಮಂಜೂರಾಗಿ ಬಂದಂತಹ ಸ್ವತ್ತಾಗಿರುತ್ತದೆ. ಹಾಲಿ ನನ್ನ ಕಕ್ಷಿದಾರರೇ ಸ್ವಾಧೀನಾಭವದಲ್ಲಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕೆಲವರು ಸುಳ್ಳು ದಾಖಲಾತಿ–ಗಳನ್ನು ಸೃಷ್ಟಿಸಿಕೊಂಡು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಹುನ್ನಾರ ನಡೆಸುತ್ತಿದ್ದಾರೆಂದು ನನ್ನ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಷೆಡ್ಯೂಲ್ ಸ್ವತ್ತು ಪಿ ರಾಮಪ್ಪರವರ ವಾರಸುದಾರರೆಲ್ಲರಿಗೂ ಭಾಗಾಂಶದ ಹಕ್ಕಿರುತ್ತದೆ. ಈ ಕಾರಣದಿಂದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕ್ರಯ, ಭೋಗ್ಯ ಬಾಡಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರವನ್ನು ಮಾಡಬಾರದೆಂದು ತಿಳಿಯಪಡಿಸಲಾಗಿದೆ.

ಆದುದರಿಂದ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಷೆಡ್ಯೂಲ್ ಸ್ವತ್ತಿನ ಖರೀದಿದಾರರು ಏನಾದರು ಖರೀದಿ ಮಾಡಿದ್ದಲ್ಲಿ ಅದು ಅವರ ಅಪಾಯಕ್ಕೆ ಅಥವಾ ನಷ್ಟಕ್ಕೆ ನೀವೇ ಸಂಪೂರ್ಣ ಜವಾಬ್ದಾರರಾಗಿರುತ್ತೀರಿ. ಈ ಪ್ರಕಟಣೆಯನ್ನು ನಿರ್ಲಕ್ಷಿಸಿ ಖರೀದಿ ಮಾಡಿದಂತಹ ಸಂಧರ್ಭದಲ್ಲಿ ಖರೀದಿದಾರರೇ ಜವಾಬ್ದಾರಿಗೆ ಪೂರ್ಣ ಹೊಣೆಯಾಗಿರುತ್ತಾರೆಂದು ನನ್ನ ಕಕ್ಷಿದಾರರ ಪರವಾಗಿ ಸೂಚಿಸಲಾಗಿದೆ.

ಷೆಡ್ಯೂಲ್

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ ಜಯನಗರ, ತೊಣಚಿಕೊಪ್ಪಲ್, ಕುವೆಂಪುನಗರ, ಪಿ ಮತ್ತು ಟಿ ಬ್ಲಾಕ್ 629 ನೇ ನಂಬರ್ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಪ್ರಾಧಿಕಾರದ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: 630ನೇ ನಂಬರ್ ಸ್ವತ್ತು, ದಕ್ಷಿಣಕ್ಕೆ: 628ನೇ ನಂಬರ್ ಸ್ವತ್ತು.

ಈ ಮಧ್ಯೆ ಇರುವ ಪೂರ್ವ ಪಶ್ಚಿಮ 40 ಅಡಿಗಳು ಹಾಗೂ ದಕ್ಷಿಣೋತ್ತರ 30 ಅಡಿಗಳು ಒಟ್ಟು 1200 ಚದರಡಿ ವಿಸ್ತೀರ್ಣವುಳ್ಳ ನಿವೇಶನ ಹಾಗೂ ಇದರಲ್ಲಿ ಕಟ್ಟಿರುವ 7.00 ಚದರ ಕಟ್ಟಡ, ವಿದ್ಯುತ್, ನೀರು ಹಾಗೂ ಸ್ಯಾನಿಟರಿ ಸೌಲಭ್ಯವುಳ್ಳ ಸ್ವತ್ತು.

ಎಮ್ ಮಹದೇವ ಸ್ವಾಮಿ B.Sc.,GDC, LL.B.
ವಕೀಲರು
ಕೆಎಆರ್ ನಂ. 3491/99, ನಂ.2367/1 ಎ, ಬೋರಮ್ಮ ಕಟ್ಟಡ, ಕೆ ಜಿ ಕೊಪ್ಪಲ್,
ಮೈಸೂರು– 570009

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ನಂ.1ನೇ ವಿಭಾಗ, ಮೈಸೂರು, ಹೈವೆ ವೃತ್ತದ ಹತ್ತಿರ, ಚಾಮ ಫ್ಯಾಕ್ಟರಿ ರಸ್ತೆ,
ಮೈಸೂರು–570001, ದೂರವಾಣಿ ಸಂಖ್ಯೆ : 0821–2491424

ನಂ: ಕಕೊಅಮ/ಕಾಇಂ/ಮೈವಿ–1/ಪ್ರಕಟಣೆ/2022–23/ ದಿನಾಂಕ: 21–04–2022

ಕೊಟೇಷನ್ ಪ್ರಕಟಣೆ (2ನೇ ಕರೆ)

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಮೈಸೂರು ನಗರದ ಕ್ಯಾತಮಾರನಹಳ್ಳಿ ಬಡಾವಣೆಯಲ್ಲಿ ನಿರ್ಮಿಸಿರುವ 6 ವಾಣಿಜ್ಯ ಮಳಿಗೆಗಳ ಪೈಕಿ 5 ಮಳಿಗೆಗಳಿಗೆ ಬಾಡಿಗೆದಾರರನ್ನು, ಕೊಟೇಷನ್ ಮುಖಾಂತರ ಆಯ್ಕೆ ಮಾಡುವ ಸಲುವಾಗಿ ಕೊಟೇಷನ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ವಿವರಗಳು ಈ ಕೆಳಕಂಡಂತೆ ಇರುತ್ತದೆ.

1.	ಅರ್ಜಿ ಸಲ್ಲಿಸಲು ಮತ್ತು ಟೆಂಡರ್ ಫಾರಂಗಳನ್ನು ಪಡೆದುಕೊಳ್ಳುವ ದಿನಾಂಕ:	05–05–2022 ಸಂಜೆ 5.30 ಗಂಟೆಯವರೆಗೆ
2.	ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ:	06–05–2022 ಸಂಜೆ 4.00 ಗಂಟೆಯವರೆಗೆ
3.	ಟೆಂಡರ್‌ಗಳನ್ನು ತೆರೆಯುವ ದಿನಾಂಕ:	07–05–2022 ಸಂಜೆ 5.30 ಗಂಟೆಗೆ

*ಹೆಚ್ಚಿನ ವಿವರಗಳನ್ನು, ಈ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ನಂ.1ನೇ ವಿಭಾಗ, ಕ.ಕೊ.ಅ.ಮ, ಮೈಸೂರು

ಜಿಲ್ಲಾ ಪಂಚಾಯತ್, ಮೈಸೂರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ,
ಮೈಸೂರು. ದೂರವಾಣಿ:0821–2529205 ಫ್ಯಾಕ್ಸ್:0821–2435575
ಇಮೇಲ್:dhomysore@gmail.com

ಸಂಖ್ಯೆ:ಸರಬ/36/2021–22 ದಿನಾಂಕ:22.04.2022

ಇ–ಟೆಂಡರ್ ಪ್ರಕಟಣೆ

ಡಿ.ಎಂ.ಎಫ್ ಅನುದಾನದಲ್ಲಿ ಎಸ್.ಎಂ.ಟಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮೈಸೂರು ಇಲ್ಲಿಗೆ ಅಗತ್ಯ ವೈದ್ಯಕೀಯ ಉಪಕರಣ / ಸಲಕರಣೆಗಳನ್ನು ಖರೀದಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರಂತೆ ಅಧಿಕೃತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು **http://eproc.karnataka.gov.in** ಮೂಲಕ ಪಡೆಯಬಹುದಾಗಿದೆ. **ಟೆಂಡರ್ ಅಂದಾಜು ಮೊತ್ತ ರೂ.35.00 ಲಕ್ಷ** ಮತ್ತು ಟೆಂಡರ್ ಅಪ್‌ಲೋಡ್ ಮಾಡಲು ದಿನಾಂಕ: **22.04.2022** ರಂದು ಮಧ್ಯಾಹ್ನ 3.00 ಗಂಟೆಯಿಂದ ದಿನಾಂಕ: **06.05.2022** ರಂದು ಸಂಜೆ 04.30 ಗಂಟೆಯವರೆಗೆ ಸಮಯ ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಅಥವಾ ದೂರವಾಣಿ ಮೂಲಕ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

DIPR/MYS/KAVITA/48/2022-23

ಕಾಣೆಯಾಗಿದ್ದಾರೆ



ಮಹಮದಿ

ವಯಸ್ಸು 25 ವರ್ಷ
#357, ಅಸ್ಸಿಯ ಬ್ಲಾಕ್ ಗೌಸಿಯಾನಗರ, ಮೈಸೂರು

ಇವರು ದಿ.11.04.2022ರಂದು ಮೈಸೂರಿನ ಗೌಸಿಯಾ ನಗರದಿಂದ ಬೆಂಗಳೂರಿಗೆ ಹೊರಟವರು ಕಾಣೆಯಾಗಿದ್ದಾರೆ. ಇವರು ಮಾನಸಿಕ ರೋಗಿಯಾಗಿದ್ದು ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹತ್ತಿರದ ಪೋಲೀಸ್ ಠಾಣೆ ಅಥವಾ ಕರೆಮಾಡಿ

7406383761
9845165444



ಭಾವಪೂರ್ಣ ಶ್ರದ್ಧಾಂಜಲಿ



N.N.ಲಲಿತಮ್ಮ

ನಮ್ಮ ತಾಯಿ ದಿ. 25.04.2022ರಂದು ದೈವಾಧೀನರಾಗಿದ್ದು, ಇವರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ

ದುಃಖತಪ್ತರು:
ಎನ್.ರಾಮಪ್ರಸಾದ್, ನಿರ್ಮಲ, ಎನ್.ವೆಂಕಟೇಶ ಬಾಬು, ವನಜ, ಸವಿತಾ & ಶ್ರೀನಿವಾಸಮೂರ್ತಿ ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

16ನೇ ವರ್ಷದ ನೆನಪು



ಮುನಿಸ್ವಾಮಿಚೆಟ್ಟಿಯಾರ್ ನಂಜಮ್ಮಾಳ್

ದುಃಖತಪ್ತರು:
ಎಂ.ಕೆ. ಸುಬ್ರಹ್ಮಣ್ಯಂ, ರುಕ್ಮಿಣಿ ಮತ್ತು ಮಕ್ಕಳು ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ವಿನೋದ್ ಕುಮಾರ್ (ರಾಘು)

ಇವರು ದಿ.16.04.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ. 27.04.2022ನೇ ಬುಧವಾರ ಬೆಳಿಗ್ಗೆ 10 ಗಂಟೆಗೆ ಕುವೆಂಪುನಗರದ, ಕಾವೇರಿ ಸ್ಕೂಲ್ ಹತ್ತಿರದ ಶ್ರೀ ಮರುಳೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನೆರವೇರಿಸಲಾಗುವುದು. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಶ್ರೀಮತಿ ಅಕ್ಕಮ್ಮ, ತಂದೆ ಚಾಮುಂಡಿ, ತಾಯಿ ಲಕ್ಷ್ಮೀ, ಶಿವಕುಮಾರ್, ಹಾಗೂ ಗೌಡಯ್ಯನವರ ಕುಟುಂಬ ವರ್ಗದವರು.